ಸಾಹಿತ್ಯ ದಾಸೋಹ – 231

ಸಂಚಿಕೆ 55 – ಡಿಸೆಂಬರ್ 2024

09.11.2024ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

ನವೆಂಬರ್ 9, 2024ರಂದು ನಡೆದ 231ನೆಯ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಲಾದ ಬರಹಗಳು, ಕವಿಮನ ಅಂಕಣ ಮತ್ತು ತಿಂಗಳ ಬೆಳಕು ಕಾರ್ಯಕ್ರಮದ ವರದಿಯನ್ನೊಳಗೊಂಡ ಸಂಚಿಕೆ ಇಲ್ಲಿದೆ.

ನಾಡಿನ ಖ್ಯಾತ ಹಾಸ್ಯ ಬರಹಗಾರ ಶ್ರೀ ಎಂ.ಎಸ್. ನರಸಿಂಹ ಮೂರ್ತಿಯವರು ನಮ್ಮವರು, ನಮ್ಮ ವೇದಿಕೆಯ ಹಿರಿಯ ಸದಸ್ಯರು ಎಂಬುದೇ ನಮ್ಮೆಲ್ಲರಿಗೂ ಹೆಮ್ಮೆ. ಕಳೆದ ತಿಂಗಳು ಅವರು ತಮ್ಮ 75 ವಸಂತಗಳನ್ನು ಪೂರೈಸಿದರು. ಜೊತೆಗೇ 2024ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕಾರಕ್ಕೂ ಭಾಜನರಾದರು. ಈ ಹಿನ್ನೆಲೆಯಲ್ಲಿ, ಎಂಎಸ್ಸೆನ್ ಅವರಿಗೆ ಅಭಿನಂದನೆಯ ಸಂಕೇತವಾಗಿ ನಮ್ಮ ವೇದಿಕೆಯ ಸದಸ್ಯರಿಂದ ಬರಹಗಳನ್ನು ಆಹ್ವಾನಿಸಲಾಗಿತ್ತು. ಇದಕ್ಕೆ ನಿರೀಕ್ಷೆಗೂ ಮೀರಿದ ಹಾಸ್ಯ ಲೇಖನಗಳು, ಕವನಗಳು, ಅಭಿನಂದನಾ ಬರಹಗಳು ಬಂದಿವೆ. ಈ ಬರಹಗಳನ್ನು ಒಳಗೊಂಡ 'ಎಂಎಸ್ಎನ್ ನಗೆಹಾರ' ಎಂಬ ವಿಶೇಷ ಸಂಚಿಕೆ ಸಿದ್ಧವಾಗಿದ್ದು, ಸದ್ಯದಲ್ಲಿಯೇ ಬಿಡುಗಡೆಯಾಗಲಿದೆ. ಶ್ರೀ ಎಂ.ಎಸ್.ನರಸಿಂಹ ಮೂರ್ತಿಯವರಿಗೆ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಎಲ್ಲರ ಪರವಾಗಿ ಅಭಿನಂದನೆಗಳು.

ದಾಸೋಹದ ಅಧ್ಯಕ್ಷತೆ ವಹಿಸಿ ಎಲ್ಲ ಬರಹಗಳ ಬಗ್ಗೆಯೂ ತಮ್ಮ ಅನಿಸಿಕೆಗಳನ್ನು ನೀಡಿದ ಶ್ರೀಮತಿ ಜಿ.ವಿ.ನಿರ್ಮಲ ಅವರಿಗೂ, ಎಲ್ಲ ಲೇಖಕರಿಗೂ, 'ಎಂಎಸ್ಎನ್ ನಗೆಹಾರ'ಕ್ಕೆ ಸ್ಪಂದಿಸಿದ ಎಲ್ಲ ಮಿತ್ರರಿಗೂ ಮತ್ತು ನಮ್ಮ ತಾಂತ್ರಿಕ ತಂಡದವರಿಗೂ ನಮ್ಮ ಧನ್ಯವಾದಗಳು.

ಈ ಸಂಚಿಕೆಯ ಬಗೆಗಿನ ತಮ್ಮ ಮುಕ್ತ ಅನಿಸಿಕೆಗಳ ನಿರೀಕ್ಷೆಯಲ್ಲಿ,

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ದಾಸೋಹದ ಪುಟಗಳಲ್ಲಿ...

ಮುಖಚಿತ್ರ ; ಜೋಡಿ ಹಕ್ಕಿಗಳು (ಕೃಪೆ – ಅಂತರ್ಜಾಲ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ – 231

ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

೦೯.೧೧.೨೦೨೪ರಂದು ಶನಿವಾರ ಇಳಿ ಮಧ್ಯಾಹ್ನ ೩.೩೬ಕ್ಕೆ ಸರಿಯಾಗಿ ನವೆಂಬರ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಆರಂಭವಾಯಿತು. ಶ್ರೀಮತಿ ಜಿ.ವಿ. ನಿರ್ಮಲ ಅವರು ೨೩೧ನೆಯ ದಾಸೋಹದ ಅಧ್ಯಕ್ಷತೆ ವಹಿಸಿದ್ದರು.



ಸಭೆಯ ಸಾರಥ್ಯ ವಹಿಸಿದ್ದ ಶ್ರೀ ಕೆ.ಎನ್.ಮಹಾಬಲ ಅವರು ಎಲ್ಲರನ್ನೂ ಆತ್ಮೀಯವಾಗಿ ಆಮಂತ್ರಿಸಿ ಸಭೆಯನ್ನು ಆರಂಭಿಸಿದರು. ಶ್ರೀಮತಿ ಟಿ.ಆರ್. ಉಷಾರಾಣಿ ಅವರು ಸಭೆಯ ಎಲ್ಲರಿಗೂ ಸ್ವಾಗತ ಕೋರಿ, ಸಭೆಯ ಅಧ್ಯಕ್ಷರಾದ ಶ್ರೀಮತಿ ನಿರ್ಮಲ ಜಿ.ವಿ. ಅವರನ್ನು ಪರಿಚಯಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಮಾತನಾಡಿದ ಶ್ರೀ ಬೆಂ.ಶ್ರೀ.ರವೀಂದ್ರ ಅವರು,

- ೬೯ನೆಯ ಕನ್ನಡ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಿ, ಕನ್ನಡ ನಾಡು, ನುಡಿಯ ಚಿಂತನೆಗೆ ಕರೆ ನೀಡಿದರು;
- ಶ್ರೀಮತಿ ನಿರ್ಮಲ ಜಿ.ವಿ. ಮತ್ತು ಶ್ರೀಮತಿ ಸುಧಾ, ಮೈಸೂರು ಅವರು ಜಂಟಿಯಾಗಿ ಲೇಖಿಸಿದ "ವಿಜ್ಞಾನ ಲೋಕದ ಧ್ರುವತಾರೆಗಳು" ಪುಸ್ತಕವು ಬಿಡುಗಡೆಗೆ ಸಿದ್ಧವಾಗಿರುವ ಕುರಿತು ತಿಳಿಸಿದರು;
- ಗುಹಾಂತರ ರೆಸಾರ್ಟಿನಲ್ಲಿ ಆಯೋಜಿತವಾದ "ತುಂತುರು" ಸಣ್ಣ ಕಥಾ ಸಂಕಲನದ ಬಿಡುಗಡೆ ಸಮಾರಂಭದಲ್ಲಿ ಸುಮಾರು ಎಪ್ಪತ್ತು ಸದಸ್ಯರು ಭಾಗವಹಿಸಿದ್ದು, ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿದ ಕುರಿತು ಅಭಿನಂದಿಸಿದರು. ಶ್ರೀಯುತ ಎಚ್.ಆರ್. ಗುರುರಾಜ ಶಾಸ್ತ್ರಿ ಹಾಗೂ ಶ್ರೀರಂಗರಾಜನ್ ಅವರು ಸಂಪಾದಿಸಿದ ಪುಸ್ತಕವು ಅವರ ಮೂಲಕವೇ ಎಲ್ಲರಿಗೂ ತಲುಪುತ್ತಿರುವ ಬಗ್ಗೆ ಪ್ರಶಂಸಿಸಿದರು;
- 'ತುಂತುರು' ಪುಟ್ಟ ಕಥಾ ಸಂಕಲನದಲ್ಲಿನ ಕಥಾ ವಾಚನದ 'ತುಂತುರು-ಪನ್ನೀರದಾನಿ' ವಿಶೇಷ ಅಭಿಯಾನವು ಶ್ರೀ ಗುರುಪ್ರಸಾದ್ ಹಾಲ್ಕುರಿಕೆ ಅವರ ತಾಂತ್ರಿಕ ಸಹಾಯ ಮತ್ತು ಡಾ. ಜೆ.ಎನ್.ಜಗನ್ನಾಥ್ ರವರ ಧ್ವನಿಮುದ್ರಣದ ನೆರವಿನಿಂದ ನಡೆದಿದ್ದು, ವೇದಿಕೆಯ ಯೂಟ್ಯೂಬ್‌ನಲ್ಲಿ ದಾಖಲಾಗುತ್ತಿದೆ. ವೇದಿಕೆಯ ಪುಟ್ಟ ಕಥೆಗಳ ಪ್ರಚಾರ ಕಾರ್ಯದಲ್ಲಿ ಸ್ವಯಂ ಪ್ರೇರಿತರಾಗಿ ತೊಡಗಿಸಿಕೊಂಡಿರುವ ಇವರೀರ್ವರ ಪ್ರಯತ್ನ, ಪರಿಶ್ರಮದ ಕುರಿತು ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು. ಸದಸ್ಯರೆಲ್ಲರೂ ತಮ್ಮ ತಮ್ಮ ವೈಯಕ್ತಿಕ ಯೂಟ್ಯೂಬ್ ಚಾನೆಲ್ಲುಗಳಲ್ಲಿ ಕಥೆಗಳನ್ನು ಹಂಚಿಕೊಳ್ಳಲು ಕರೆ ನೀಡಿದರು;
- ತಿಂಗಳ ಬೆಳಕು ಸರಣಿಯ ಅಡಿಯಲ್ಲಿ "ಬುದ್ಧ ಚರಣ" ಉಪನ್ಯಾಸವನ್ನು ಆಯೋಜಿಸಿದ ಎಲ್ಲರ ಆಸಕ್ತಿ ಹಾಗೂ ಪರಿಶ್ರಮವನ್ನು ಅಭಿನಂದಿಸಿದರು;
- 'ವಿಶ್ವವಾಣಿ' ದೀಪಾವಳಿ ವಿಶೇಷಾಂಕಕ್ಕೆ ವೇದಿಕೆಯ ಸದಸ್ಯರ ಕಥೆ, ಲೇಖನ ಹಾಗೂ ಕವನಗಳನ್ನು ಆಯ್ಕೆ ಮಾಡಿದ ಶ್ರೀ ಶಶಿಧರ ಹಾಲಾಡಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

- ಇವಿಷ್ಟೇ ಅಲ್ಲದೆ,
  ೧. ಶ್ರೀ ಎಂ.ಎಸ್.ನರಸಿಂಹ ಮೂರ್ತಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ.
  ೨. ಶ್ರೀಮತಿ ರತ್ನಾ ಮೂರ್ತಿ ಅವರಿಗೆ ಗಮಕ ಕಲಾಶ್ರೀ ಪ್ರಶಸ್ತಿ.
  ೩. ಡಾ. ಗಜಾನನ ಶರ್ಮ ಅವರ ಚೆನ್ನಭೈರಾದೇವಿ ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
  ೪. ಗೋಕಾಕ್ ಚಳುವಳಿಯನ್ನು ಸಾಕ್ಷ್ಯಚಿತ್ರದ ಮೂಲಕ ದಾಖಲಿಸಿದ ಶ್ರೀ ಮನೋಹರ ಮತ್ತು ಶ್ರೀಮತಿ ಜಯಂತಿ ಮನೋಹರ ಅವರಿಗೆ ರಾಜ್ಯ ಸರ್ಕಾರದ ಸನ್ಮಾನ.
  ೫. ಶ್ರೀಮತಿ.ಉಷಾರಾಣಿ ಅವರ ಮಾತೋಶ್ರೀ ಅವರು ಅನುವಾದಿಸಿದ ಪ್ರಸಿದ್ಧ ಹಿಂದಿ ಸಾಹಿತಿ ಶ್ರೀ ಮುನ್ಷಿ ಪ್ರೇಮಚಂದ್ ಅವರ ಕಥೆಗಳ ಪುಸ್ತಕ ಬಿಡುಗಡೆ

  ಹೀಗೆ ವೇದಿಕೆಯ ಹಿರಿಮೆಯನ್ನು ಹೆಚ್ಚಿಸಿದ ಈ ಎಲ್ಲರನ್ನೂ ಅಭಿನಂದಿಸಿ ಶುಭ ಹಾರೈಸಿದರು.

ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಸದಸ್ಯರಿಂದ ಸ್ವರಚಿತ ಲೇಖನಗಳ ವಾಚನವು ಆರಂಭವಾಯಿತು. ಇಪ್ಪತ್ತೈದು ಸದಸ್ಯರು ಪ್ರಸ್ತುತಿಗಾಗಿ ನೋಂದಾಯಿಸಿದ್ದು, ಇಪ್ಪತ್ತೆರಡು ಲೇಖಕರು ವಾಚಿಸಿದರು.

ಎಲ್ಲ ಬರಹಗಳ ಪ್ರಸ್ತುತಿಯು ಮುಗಿದ ನಂತರ ಅಧ್ಯಕ್ಷರಾದ ಶ್ರೀಮತಿ ನಿರ್ಮಲ ಜಿ.ವಿ. ಅವರು ಪ್ರಸ್ತುತಿಗಳ ಕುರಿತು ತಮ್ಮ ಅಧ್ಯಕ್ಷೀಯ ನುಡಿಗಳನ್ನು ದಾಖಲಿಸಿದರು. ಮೊದಲಿಗೆ ಅವರು ಕನ್ನಡ ಭಾಷೆಯನ್ನು ಕಂಪ್ಯೂಟರಿಗೆ ಅಳವಡಿಸಿದ ತಾಂತ್ರಿಕ ವಿಜ್ಞಾನದ ಬೆಳವಣಿಗೆಯ ಕುರಿತು ಮಾಹಿತಿಗಳನ್ನು ಬಿಚ್ಚಿಟ್ಟರು. ಲೇಖನಗಳನ್ನು ಪ್ರಸ್ತುತಪಡಿಸಿದ ಪ್ರತಿಯೊಬ್ಬ ಲೇಖಕರ ಬರಹಗಳ ವಿಸ್ತೃತ, ವಿದ್ವತ್ಪೂರ್ಣ ವೈಶಿಷ್ಟ್ಯಗಳನ್ನು ವಿವರಿಸಿ ಅತ್ಯಂತ ಸಮತೂಕದ ಪ್ರಾಮಾಣಿಕ ಅನಿಸಿಕೆಗಳನ್ನು ದಾಖಲಿಸಿ, ಅಧ್ಯಕ್ಷೀಯ ಸ್ಥಾನದ ಮೆರಗನ್ನು ಇಮ್ಮಡಿಗೊಳಿಸಿದರು. ವಿಜ್ಞಾನಿಯಾದರೂ ಅವರ ಸಾಹಿತ್ಯ ಪ್ರೇಮವನ್ನು, ಸಾಹಿತ್ಯ ಕೃಷಿಯನ್ನು ಹಾಗೂ ಸಾಹಿತ್ಯದ ಬಗ್ಗೆ ಅವರಿಗಿರುವ ಆಸಕ್ತಿಗೆ ಎಲ್ಲರೂ ತಲೆದೂಗಲೇಬೇಕು.

ಕೊನೆಯಲ್ಲಿ ಶ್ರೀ ಕೆ.ಎನ್.ಮಹಾಬಲ ಅವರು ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ನವೆಂಬರ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ. ಎನ್. ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ. ವಿ. ಗುಜ್ಜರ್
ವಿಡಿಯೋ ಮುದ್ರಣ : ಶ್ರೀ ಗುರುರಾಜ ಶಾಸ್ತ್ರಿ
ಸಂಚಿಕೆಯ ಪಿಡಿಎಫ್ ಆವೃತ್ತಿ : ಶ್ರೀ ಶೃಂಗೇಶ್ವರ ಶರ್ಮ

ಸಾಹಿತ್ಯ ದಾಸೋಹ ೨೩೧ರ ಪೂರ್ಣ ವಿಡಿಯೋಚಿತ್ರಣವನ್ನು ಸಮನ್ವಯ ಸಮಿತಿಯ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ತಿಂಗಳ ಬೆಳಕು - 9

"ಎಲ್ಲರ ಜೀವನ ಸಂಜೀವಿನಿ – ಯೋಗ"

ಉಪನ್ಯಾಸಕರು: ಯೋಗಪಟು ಡಾ. ಮಾರುತಿ ರಾಮ್

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್



"ಎಲ್ಲರ ಜೀವನ ಸಂಜೀವಿನಿ: ಯೋಗ" ಎಂಬ ವಿಷಯದ ಬಗ್ಗೆ ಡಾ ಮಾರುತಿ ರಾಮ್ ಅವರ ಉಪನ್ಯಾಸವನ್ನು ೨೩.೧೧.೨೦೨೪ರಂದು ಶನಿವಾರ ಸಂಜೆ ೫.೩೦ಕ್ಕೆ ಗೂಗಲ್ ಮೀಟ್ ತಂತ್ರಜ್ಞಾನದ ಮೂಲಕ ಏರ್ಪಡಿಸಲಾಗಿತ್ತು

ಶ್ರೀ ರವಿಕುಸುಬಿಯವರು ಪ್ರಸ್ತಾವಿಕ ಮಾತುಗಳನ್ನಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ಗುರುರಾಜ ಶಾಸ್ತ್ರಿಯವರು ಯೋಗಗುರುಗಳಾದ ಡಾ ಮಾರುತಿ ರಾಮ್ರವರನ್ನು ಪರಿಚಯಿಸಿದರು.

ವೇದಗಳ ಜೊತೆ ಜೊತೆಗೇ ಯೋಗ ಹುಟ್ಟಿತ್ತು ಎಂದು ತಮ್ಮ ಉಪನ್ಯಾಸವನ್ನು ಆರಂಭಿಸಿದ ಮಾರುತಿ ರಾಮ್ ಅವರು, ನಮ್ಮ ಹಿರಿಯರು ಹೇಳುತ್ತಿದ್ದ ಬಲಗೈಯಲ್ಲಿ ತೆಗೆದುಕೋ, ಬಲಗಾಲಿಟ್ಟು ಒಳಗೆ ಬಾ ಇತ್ಯಾದಿ ಹೇಳಿಕೆಗಳಿಗೂ ವೈಜ್ಞಾನಿಕವಾದ ಕಾರಣವಿದೆ. ಹೀಗೆ ಮಾಡಿದಾಗ ಮೆದುಳಿನ ಬಲಭಾಗ ಕ್ರಿಯಾಶೀಲವಾಗಿ ಸಾತ್ವಿಕತೆ ಸೃಜನಾತ್ಮಕತೆಯನ್ನು ಸೃಷ್ಟಿಸುತ್ತದೆ. ಎಡಭಾಗ ರಾಜಸಿಕವಾದುದು ಎಂದರು.

ಯೋಗ ಎಂದರೆ ಸೇರಿಸುವುದು. ಜೀವಾತ್ಮವನ್ನು ಪರಮಾತ್ಮದೊಂದಿಗೆ ಸೇರಿಸುವುದು ಎಂದು ಹೇಳಿದ ಅವರಯ, ಇದಕ್ಕೆ ವಿವರಣೆ ನೀಡಿ ಕರ್ಮ ಯೋಗ, ಭಕ್ತಿಯೋಗ, ಜ್ಞಾನಯೋಗ ಮತ್ತು ಅಷ್ಟಾಂಗ ಯೋಗಗಳನ್ನು ಸರಳವಾಗಿ ವಿವರಿಸಿದರು. ನಾವು ಮಾಡುವ ಕೆಲಸವನ್ನು ಸಂತೋಷವಾಗಿ. ಕೌಶಲಪೂರ್ಣವಾಗಿ ಮಾಡಿದರೆ ಅದೂ ಯೋಗ. ಚಪ್ಪಲಿ ಮತ್ತು ನಮ್ಮ ಬಟ್ಟೆ ಇತ್ಯಾದಿಗಳನ್ನು ವ್ಯವಸ್ಥಿತವಾಗಿ ಇಟ್ಟುಕೊಳ್ಳುವುದೂ ಯೋಗವೇ ಎಂದರು.

ಕೊಳದಲ್ಲಿ ಕಲ್ಲುಬಿದ್ದಾಗ ರಾಡಿಯಾಗುವಂತೆ ಆಗಾಗ ನಮ್ಮ ಮನಸ್ಸು ಕ್ಷುದ್ರಗೊಳ್ಳುತ್ತದೆ. ಮನಸ್ಸನ್ನು ಶಾಂತಗೊಳಿಸಬೇಕು. ಪತಂಜಲಿಯವರು ಯೋಗ ಸೂತ್ರವನ್ನು ಜಗತ್ತಿಗೆ ನೀಡಿದ್ದಾರೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಧಾರಣ, ಪ್ರತ್ಯಾಹಾರ, ಧ್ಯಾನ ಸಮಾಧಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಆಸನಗಳು ಯೋಗದ ಒಂದು ಭಾಗವೇ ಹೊರತು, ಅದೇ ಯೋಗವಲ್ಲ. ಯೋಗವನ್ನು ಸರಿಯಾದ ಗುರುವಿನ ಮಾರ್ಗದರ್ಶನದಲ್ಲಿ ಕಲಿಯ ಬೇಕು. ಉಸಿರಾಟದ ಕ್ರಿಯೆಗಳನ್ನು ಸರಿಯಾಗಿ ಅಭ್ಯಾಸ ಮಾಡಬೇಕು ಎಂದು ಹೇಳಿ, ತಮ್ಮ ಉಪನ್ಯಾಸದ ಕೊನೆಯ ಹದಿನೈದು ನಿಮಿಷಗಳಲ್ಲಿ ಕೆಲವು ಸರಳ ಯೋಗಾಸನ ಮತ್ತು ಮನಸ್ಸನ್ನು ಶಾಂತಗೊಳಿಸುವ, ಕೋಪ

ಶಮನ ಮಾಡುವ ಮತ್ತು ಖಿನ್ನತೆ ನಿವಾರಿಸುವ ಪ್ರಾಣಾಯಾಮಗಳನ್ನು ಅಂತರ್ಜಾಲ ಮುಖೇನವೇ ಪ್ರದರ್ಶಿಸಿ ಸೂಕ್ತ ಮಾಹಿತಿ ನೀಡಿದರು.

ಆಗಾಗ್ಗೆ ಮಂಕುತಿಮ್ಮನ ಕಗ್ಗದ ಸಾಲುಗಳೊಂದಿಗೆ ಅತ್ಯಂತ ಸೊಗಸಾಗಿ ಒಂದು ಗಂಟೆ ಕಾಲ ನಡೆದ ಡಾ ಮಾರುತಿ ರಾಮ್ ಅವರ ಉಪನ್ಯಾಸವು ಯೋಗದ ಬಗ್ಗೆ ಹಲವು ಉಪಯುಕ್ತ ಮಾಹಿತಿಗಳಿಂದ ತುಂಬಿತ್ತು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಡಾ. ಮಾರುತಿ ರಾಮ್ ಅವರು ಕೇಳುಗರ ಹಲವು ಪ್ರಶ್ನೆಗಳಿಗೆ ಉತ್ತರಿಸಿದರು.

ಹು.ವಾ. ಶ್ರೀಪ್ರಕಾಶ್ ರವರು ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು.

(ಪೂರ್ಣ ಕಾರ್ಯಕ್ರಮವನ್ನು ಸಾಹಿತ್ಯ ದಾಸೋಹ ಯೂಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು)

***

ಕವಿಮನ

ನೀರು ನೀರೆ

ಧುಮ್ಮಿಕ್ಕಿ ಬರುವಳು ಹರಿದು,
ಹಚ್ಚ ಹಸಿರ ಸಿರಿಯ ಮೆರೆದು,
ಉಪಾಯದಿ ಅವಳ ರಭಸವ ಹಿಡಿದು,
ಆಣೆಕಟ್ಟು ಕಟ್ಟಿದರು ಹಿರಿದು.

ಬರಡಾಯಿತು ಅವಳ ಒಡಲು,
ಹಾತೊರೆದಳು ಸಾಗರ ಸೇರಲು,
ಮಪ್ಪಿಲ್ಲದೇ ಸಾವನ್ನಪ್ಪಿದಳು,
ಹೋಗಬೇಕಿದ್ದತ್ತ ಕ್ಷಾಮವ ಬೀರಿದಳು.

ಹುಟ್ಟಿದ ಊರಿಗೂ ಬೇಕು,
ಹರಿವ ತಾಣಕೂ ಬೇಕು,
ನೀರಿನಿಂದಲೇ ಬದುಕು,
ನೀರಿನ ಮೇಲೆ ಎಲ್ಲರ ಹಕ್ಕು.

ತುಂಟ ನೋಟದಿ ಪ್ರೀತಿ ತೋರುವಳು,
ಮನೆ ಮಂದಿಗೆ ಖುಷಿಯ ಹಂಚುವಳು,
ಇವಳೇ ನಮ್ಮ ಮನೆ ಮಗಳು,
"ನಮ್ಮನ್ನು ಬಿಟ್ಟು ಅಗಲುವಳು"

ತನ್ನದೆಲ್ಲವ ಬಿಟ್ಟು ಬಂದವಳು,
ಎಲ್ಲರನ್ನರಿತು ಸಮಾಧಾನದಿ ನಡೆಯುವಳು,
"ಏನೇ ಅಂದರೂ ಹೊರಗಿನವಳು",
ಎನ್ನುತ್ತಿದ್ದರೂ ಮಂದಸ್ಮಿತೆ ಅವಳು.

ತವರಿಗೂ ಭಾರ,
ಹೊಕ್ಕ ಮನೆಯಲ್ಲೂ ದೂರ,
ನೀರೇಯಿಂದಲೇ ಸಂಸಾರ,
ಆದರೂ ನೀರೆಗೆ ತಿರಸ್ಕಾರ.

ಹರಿವ ನೀರು ನಮಗೇ ಬೇಕೆಂದು
ನಡೆವುದು ಕದನ,
ಹುಟ್ಟಿದ ನೀರೆ ಹುಟ್ಟಿನಿಂದಲೇ
ಅನಿಸುವುದು "ಪರ ಧನ".

ಪುರಾಣಗಳಲ್ಲಿ ಪ್ರಧಾನ,
ನೀರು ನೀರೆಯರ ಸ್ಥಾನ,
ಹರಡಿದೆ ಜನರಲ್ಲಜ್ಞಾನ,
ಕಲುಷಿತಗೊಳಿಸುವವರವಳನ್ನ.

– ಸಿಂಧು ಹರಿಥಸ್
06.11.2024

ನಿಸರ್ಗದ ಸಗ್ಗ

ಹಕ್ಕಿ ಹಾಡುವುದಿಲ್ಲ ನಾ ಕೇಳಲೆಂದು
ಅರ್ಥವಿಲ್ಲದ ಕೂಜನವ ಹೊಮ್ಮುವುದು
ನೀರವದಿ ಕೇಳುವೆ ಇಂಪಿನಿಂಚರವ ನಾನು

ಭಾಸ್ಕರೋದಯವು ನಾವ್ ನೋಡಲೆಂದೆ?
ತಂತಾನೆ ಬಂದು ಬೆಳಕ ಹರಡುವನೆಲ್ಲೆಡೆ
ಕಂಗಳಲಿ ನೋಡುವೆ ಸುಂದರ ನೋಟ ನಾನು

ಹದ್ದು ನೀಲಗಗನದಲಿ ತೇಲುತ ಏರುವುದು
ನಾವು ನೀವದರ ಮೇಲ್ಮೈಯ ನೋಡಲೆಂದೇ
ಸದ್ದಿಲ್ಲದೆ ಸುತ್ತುವುದ ಚಂದ ಕಾಣುವೆ ನಾನು

ಕಂಬಳಿಯ ಹುಳು ಉಂಬುವುದು ಹಸಿರೆಲೆ
ಅರಿವುಂಟೆ ಅದಕೆ ತಾ ಚಿಟ್ಟೆಯಾಗುವೆನೆಂದು
ಆರು ಬಣ್ಣದ ಚಿಟ್ಟೆ ಹಾರಲು ಮುದವು ಎನಗೆ

ಸಾಗರದ ಅಲೆಗಳು ಉಸುಕ ತಳ್ಳಿ ಬರುವುದು
ತೀರದಲಿ ನಿಂತ ನಮ್ಮ ಪಾದ ಸವರಲೆಂದೇ
ತೋಯಿಸಲು ಪಾದಗಳ ಮನಕಾನಂದವೆನಗೆ

ಮಳೆಯ ಹನಿ ಕೆಳಗಿನ ಇಳೆಗೆ ಬೀಳುವುದು
ನಮ್ಮ ನಿಮ್ಮ ದಾಹ ನೀಗಿಸುವೆನೆಂದೇನು
ಜೀವಜಲ ಭೋಗಿಸಿಗಾಗ ನಿರಾಳನು ನಾನು

ನಿಸರ್ಗವೆನಗೆ ಮುದಧಾರೆಯೆರೆಯುತಿರಲು
ಹೇಗೆ ಯಾರಿಗೆ ಹೇಳಲಿ ನಾ ಕೃತಜ್ಞತೆಯನು
ಜತನದಲಿ ಕಾಪಿಡುವುದೇ ಎನ್ನ ಕರ್ತವ್ಯವು

– ಎಸ್.ಮಂಜುನಾಥ್(ಹಿಮನಾಥ)
13.11.2024

ಕವಿಮನ

ಭಗವಂತನಿಗೆ ಬಂಪರ್

ಬಂಪರು ಹೊಡೆದಿದೆ ಭಗವಂತ
ಇಂದು ನೀನೆ ಬಹಳ ಅದೃಷ್ಟವಂತ
ವರ್ಷದಿ ತುಂಬಿದ ಮೈಯಿನ ಕೊಳೆಯ
ತೆಗೆದು ಶುದ್ಧಿ ಮಾಡುವೆ ಗೆಳೆಯ

ಅಂಟಿಕೊಂಡಿದೆ ಅರಿಶಿನ ಕುಂಕುಮ
ಅಕ್ಷತೆಕಾಳೂ ಚಂದನ ಘಮಘಮ
ಇಂದು ಬಂದಿದೆ ಪೂರ್ಣಶುದ್ಧಿಗೆ
ಸರದಿ ಬರುವುದು ಮತ್ತೆ ಯುಗಾದಿಗೆ

ತುಕ್ಕು ಹಿಡಿಯದ ತಾಮ್ರದ ದೇವರೆ
ಕಪ್ಪು ಕಪ್ಪಾದ ಹಿತ್ತಾಳೆ ದೇವರೆ
ಬಣ್ಣವ ಮರೆತಿಹ ಬೆಳ್ಳಿಯ ದೇವರೆ
ಬಣ್ಣವೆ ಅಳಿಯದ ಕಲ್ಲಿನ ದೇವರೆ

ಉಜ್ಜಿ ಉಜ್ಜಿ ತೊಳೆಯುವೆ ನಾನು
ನಿನ್ನಯ ಮೈಯ ಕೊಳೆ ಕಸವನ್ನು
ಜೀವವಿಲ್ಲದ ಬೊಂಬೆಯು ನೀನು
ಇಂದಿನ ನನ್ನಾಟಕೆ ನಾಯಕ ನೀನು

ಹುಣಿಸೆಹಣ್ಣು, ನೊರೆ ಸೋಪನು ಹಾಕಿ
ಉಪ್ಪಿನ ಜೊತೆಗೆ ಜುಂಗನು ಹಾಕಿ
ಉಜ್ಜುತ ಮುಖದಲಿ ಕಳೆಯನು ತರುವೆ
ನಿನ್ನಯ ಮಯ್ಯಿನ ಕೊಳೆಯನು ತೆಗೆವೆ

ಹೊಳಪು ತರುವ ತಾಮ್ರದ ಪುಡಿಯದು
ಬಿಳುಪು ತರುವ ಬೆಳ್ಳಿಯ ಪುಡಿಯದು
ತಂದಿಹೆ ನಾನು ಅಂಗಡಿಯಿಂದಲಿ
ನಿನ್ನ ಶುದ್ಧಿಯ ಮಾಡುವ ನೇಮದಲಿ

ಮುಖವದು ನಿನ್ನದು ಉರಿದಿದೆ ಏನು?
ಉಪ್ಪೂ ಹುಳಿಯಲಿ ಕಣ್ಣುರಿಯೇನು?
ಆದರೂ ಸುಂದರ ಹೊಳೆಯುತಲಿರುವೆ
ಚಕಮಕ ಹೊಳಪಲಿ ಶೋಭಿಸುತಿರುವೆ

– ಡಾ. ಸತ್ಯವತಿ ಮೂರ್ತಿ
20.11.2024

ಸಡಿಲ ತಂತಿಗಳು

ಪ್ರೀತಿ ಪ್ರೇಮ ಪ್ರಣಯದಿ ತೇಲಾಡುವ ಜೋಡಿಗಳು
ಜಾತಿಯನು ಮೀರಿ ಹಾರುತಿಹ ಸ್ವಚ್ಛಂದದ ಹಕ್ಕಿಗಳು
ರೀತಿ ನೀತಿಗಳ ಗೊಡವೆಯಿರದೆ ಒಡನಾಟ ಹೊಂದಿರುವ
ಭೀತಿಯಿಲ್ಲದೆ ಸಮಾಜದಲಿ ತಲೆಯೆತ್ತಿ ಓಡಾಡುತಿರುವ

ಆಕಾಶವೇ ಬೀಳಲಿ ಮೇಲೆ ನಾನಿನ್ನ ಕೈಬಿಡೆನು
ಅವಕಾಶ ದೊರೆಯಲು ಆಕಾಶದಲೇ ತೇಲಿಸುವೆನು
ಕ್ಲೇಶಗಳೇ ಬಾರದಂತೆ ನೋಡಿಕೊಳ್ಳುವೆ ನಿನ್ನ ಬಾಳನು
ಈಶನಿದಕೆ ಸಾಕ್ಷಿ ಘಂಟಾಘೋಷವಾಗಿ ಹೇಳುವೆನು

ಹಿರಿಯರ ಅನುಮತಿಯೂ ಬೇಕು ಜೋಡಿಯಾಗಲು
ಕಿರಿಕಿರಿ ಇಲ್ಲದೆ ಸಮ್ಮತಿಸಬೇಕು ಸಂಬಂಧ ಬೆಳೆಸಲು
ಪರಿಪರಿಯ ಕಷ್ಟಗಳು ಬರಬಹುದು ಆಶೀರ್ವಾದವಿರದಿರಲು
ಅರಿತದನು ಪುಸಲಾಯಿಸಿ ಹಿರಿಯರ ಸಮ್ಮತಿ ಪಡೆಯಲು

ಸಂಗಾತಿಯಾಗಲು ಹರಸಾಹಸ ಮಾಡಿ ಹಸೆಮಣೆ ಏರಿ
ಮಾಂಗಲ್ಯಂ ತಂತುನಾನೇನಾ ಮಮ ಜೀವನ ಹೇತುನ ಸಾರಿ
ಮಂಗಳ ವಾದ್ಯಗಳ ನಡುವೆ ವಿವಾಹ ಸಂಭ್ರಮ ಆಚರಿಸಿ
ತಂಗಾಳಿಯಂತೆ ಬಾಳ ಸಾಗಿಸುವ ಆಸೆಯ ಕನವರಿಸಿ

ಬೆಳೆಸಬೇಕಾದ ಬಾಂಧವ್ಯವು ಗೃಹಸ್ಥ ಜೀವನದಂತೆ
ಹಳಸುತ ಬಂತೇಕೆ ಸಮಯದ ಗಡಿಯಾರ ಓಡಿದಂತೆ
ಬಳಸಬೇಕಾದ ತೋಳು ಮೇಲೆದ್ದಿತೇಕೆ ರಾಚುವುದಕೆ
ಗಳಿಸಿದ್ದೇನು ಕೊನೆಗೆ ಜೋಡಿಯಾಗಿ ಸೇರಿದುದಕೆ

ದುಡುಕಿದ ಮನಗಳು ವಿವಾಹದಿಂದ ವಿಚ್ಛೇದನದೆಡೆಗೆ
ಕೆಡುಕು ಮಾಡಿದ ಅಟ್ಟಹಾಸದ ಕೆಟ್ಟ ಅಹಮಿಕೆಗಳಿಗೆ
ಕೊರಳಿಗೆ ಮೂರ್ಗಂಟು ಹಾಕಿದ ತಾಳಿ ಬಿಗಿಯಾಗಿ
ಉರುಳಾಯಿತೇಕೆ ಸಾಗುತಾ ಕೆಲವೇ ವರ್ಷಗಳಿಗೆ

ಅಪ್ಪ ಅಮ್ಮಂದಿರ ಜಗಳಕೆ ಕಂದಮ್ಮಗಳು ಸಂಕಷ್ಟಕೆ
ಒಪ್ಪ ಓರಣವಿಲ್ಲದ ಮನೆಯಲಿ ಬಲಿಪಶುಗಳಾಗೆ
ತಪ್ಪು ಯಾರದೋ ಶಿಕ್ಷೆ ಆ ಅಮಾಯಕ ಮಕ್ಕಳಿಗೆ
ಬೆಪ್ಪಾಗಿ ಕುಳಿತು ಮೂಕ ಸಾಕ್ಷಿಯಾದ ಎಷ್ಟೋ ಘಳಿಗೆ

ಸಡಿಲವಾದ ತಂತಿಗಳಿಂದ ಜೀವ ವೀಣೆಯು ಮೀಟದು
ಸಡಿಲವಾದ ಸಂಬಂಧಗಳು ಎಂದೂ ನೆಮ್ಮದಿ ನೀಡದು
ಒಡಲು ಬೇರೆಯಾದರೂ ಮನ ಒಂದಾದರೆ ಚೆಂದವದು
ಮಡಿಲು ಸೇರಿ ಮತ್ತೆ ಸುಖಸಂತೋಷಗಳ ಸಾಗರವದು

– ವೆಂಕಟೇಶ್ ಕೆ.ಆರ್. (ಮನು)
27.11.2024

ವಾರ್ಧಕ ಷಟ್ಪದಿ

– ಗಣಪತಿ ಹೆಗಡೆ

ಷಟ್ಪದಿಗಳು ಅಂದರೆ ಆರು ಪಾದ ಅಥವಾ ಸಾಲುಗಳುಳ್ಳ ಪದ್ಯಗಳೆಂದೂ, ಸಾಮಾನ್ಯವಾಗಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ಹಾಗೂ ವಾರ್ಧಕ ಇವು ಷಟ್ಪದಿಗಳ ಆರು ಪ್ರಕಾರಗಳೆಂದು ಸಾಹಿತ್ಯಾಸಕ್ತರಿಗೆ ತಿಳಿದಿದ್ದೇ ಆಗಿದೆ. ಇವುಗಳಲ್ಲಿಯ ವಾರ್ಧಕ ಷಟ್ಪದಿಯ ಕುರಿತು ತಿಳಿಯೋಣ.

ಷಟ್ಪದಿಯ ಪ್ರಮುಖ ಪ್ರಕಾರಗಳಲ್ಲಿ ವಾರ್ಧಕ ಷಟ್ಪದಿಯೂ ಒಂದು. ಮುದ್ದಣ ವಿರಚಿತ ಶ್ರೀರಾಮ ಪಟ್ಟಾಭಿಷೇಕ, ಲಕ್ಷ್ಮೀಶ ಕವಿಯ ಜೈಮಿನಿ ಭಾರತ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಮುಂತಾದ ಕಾವ್ಯಗಳು ಇರುವುದು ವಾರ್ಧಕ ಷಟ್ಪದಿಯಲ್ಲಿಯೇ.

ವಾರ್ಧಕ ಷಟ್ಪದಿಯಲ್ಲಿ ಆರು ಪಾದಗಳಿರುತ್ತವೆ. ೧, ೨, ೪, ೫ನೆಯ ಸಾಲುಗಳು ಸಮನಾಗಿದ್ದು, ೫ ಮಾತ್ರೆಯ ನಾಲ್ಕು ಗಣಗಳಿರುತ್ತವೆ. ೩ ಮತ್ತು ೬ನೆಯ ಪಾದಗಳೂ ಸಮನಾಗಿದ್ದು ೫ ಮಾತ್ರೆಯ ಆರು ಗಣಗಳಿದ್ದು, ಕೊನೆಯಲ್ಲಿ ಒಂದು ಗುರು ಇರುತ್ತದೆ. (ಕೊನೆಯ ಅಕ್ಷರ ಲಘುವಾಗಿದ್ದರೂ ದೀರ್ಘವಾಗಿ ಗುರುವಾಗಿ ಓದಬೇಕು). ಪ್ರತಿ ಸಾಲಿನ ಎರಡನೇ ಅಕ್ಷರವು ಒಂದೇ ಆಗಿದ್ದು, ಪದ್ಯವು ಆದಿಪ್ರಾಸದಿಂದ ಕೂಡಿರುತ್ತದೆ.

೫ ೫ ೫ ೫
ಬಲ್ಗಯ್ಯು| ನೃಪರಂಜಿ| ತಡೆಯದೆರ|ಘೂದ್ವಹನ ।
೫ ೫ ೫ ೫
ಸೊಲ್ಗೇಳಿ| ನಮಿಸಲಿಳೆ|ಯೊಳ್ಚರಿಸು|ತದ್ವರದ ।
೫ ೫ ೫ ೫
ನಲ್ಗುದುರೆ| ಬಂದು ವಾ|ಲ್ಮೀಕಿಯ ನಿ|ಜಾಶ್ರಮದ ।
೫ ೫ ೨
ವಿನಿಯೋಗ|ದುಪವನದೊ|ಳು

೫ ೫ ೫ ೫
ಪುಲ್ಗಳ ಪ|ಸುರ್ಗೆಳಸಿ |ಪೊಕ್ಕಡಾ| ತೋಟಗಾ ।
೫ ೫ ೫ ೫
ವಲ್ಗೆ ತ|ನ್ನೊಡನಾಡಿ|ಗಳಕೂಡಿ |ಲೀಲೆ ಮಿಗೆ ।
೫ ೫ ೫ ೫ ೫
ಬಿಲ್ಗೊಂಡು |ನಡೆತಂದ|ವಂ ಕಂಡ|ನರ್ಚಿತ ಸು|ವಾಜಿಯಂ ।
೫ ೨
ವೀರಲವ|ನು

ಇದರಲ್ಲಿ ಪ್ರತಿ ಪಾದದಲ್ಲಿಯೂ ಆರಂಭದ ಒಂದೆರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನವಿರುವುದು. ಬಲ್ಗಯ್ಯ, ಸೊಲ್ಗೇಳಿ, ನಲ್ಗುದುರೆ, ಪುಲ್ಗಳ, ವಲ್ಗೆ ತ, ಬಿಲ್ಗೊಂಡು ಈ ಆರು 'ಐದು' ಮಾತ್ರೆಗಳ ಗುಂಪನ್ನು ನೋಡೋಣ.

ಮೊದಲ ಅಕ್ಷರ ನಿಜವಾಗಿ ಲಘು ಆದರೆ ಎರಡನೇ ಅಕ್ಷರ ಸಂಯುಕ್ತಾಕ್ಷರ 'ಲ್ಗ'. ಎರಡನೇ ಅಕ್ಷರ ಸಂಯುಕ್ತಾಕ್ಷರ ಆದುದರಿಂದ ಮೊದಲ ಅಕ್ಷರ ಗುರುವಾಗಿಯೇ ಓದಲ್ಪಡುತ್ತದೆ.

ಮೂರು ಹಾಗೂ ಆರನೇ ಸಾಲಿನ ಕೊನೆಯ ಅಕ್ಷರಗಳಾದ 'ಳು ' ಹಾಗೂ 'ನು' ಹ್ರಸ್ವಾಕ್ಷರಗಳಾದರೂ 'ಳೂ' ಹಾಗೂ 'ನೂ' ಅಂತ ದೀರ್ಘವಾಗಿಯೇ ಓದಬೇಕು .

'ನ' ಅಂದರೆ ಲಘು, 'ನಾ' ಅಂದರೆ ಗುರು ಅಂತ ಗಣಿಸಿದರೆ,

ಌ
'ನನನನನ' ।(ಉರಿಯುವದು)। ಮನದೊಳಗೆ

ಌ
'ನಾನನಾ' । (ಸಾಕಲೋ)। ಸುಗ

'ನನಾನಾ' (ಯಗಣ–ಮೊದಲಲ್ಲಿ ಲಘು ಬರುವದಿಲ್ಲ)

ಌ
'ನನನನಾ' ।(ಮನವನಾ)। ವರಿಸಿದುದು

ಌ
'ನಾನಾನ' ।(ಕಾಲಾಂತ)। ಕನ ನುಡಿಯ

ಌ
'ನಾನನನ' । (ಕಾತರಿಸಿ)। ನುಡಿಸಿದನು

ಇವು ಸಂಭಾವ್ಯ ಌ ಮಾತ್ರಾಗುಂಪುಗಳು.

ಌ ಌ ಌ ಌ
ಶ್ರೀವಧುವಿ।ನಂಬಕ ಚ।ಕೋರಕಂ। ಪೊರೆಯೆ ಭ।
ಌ ಌ ಌ ಌ
ಕ್ತಾವಳಿಯ। ಹೃತ್ಕುಮುದ।ಕೋರಕಂ। ಬಿರಿಯೆ ಜಗ।
ಌ ಌ ಌ ಌ ಌ
ತೀವಲಯ।ದಮಳ ಸೌ।ಭಾಗ್ಯ ರ।ತ್ನಾಕರಂ ।ಪೆರ್ಚೆನಿಂ।
ಌ ೨
ಮೇರೆವರಿ।ಯೆ॥
ಌ ಌ ಌ ಌ
ಆವಗಂ। ಸರಸಕರು।ಣಾಮೃತ।ದ ಕಲೆಗಳಿಂ।
ಌ ಌ ಌ ಌ
ತೀವಿದೆಳೆ।ನಗೆಯ ಬೆಳು।ದಿಂಗಳಂ। ಪಸರಿಸುವ।
ಌ ಌ ಌ ಌ ಌ
ದೇವಪುರ।ನಿಲಯ ಲ।ಕ್ಷ್ಮೀರಮಣ।ನಾಸ್ಯ ಚಂ।ದ್ರಾನಂದ ।
ಌ ೨
ಮೆಮಗೀಯ।ಲಿ ॥

ಶ್ರೀವ, ಕ್ತಾವ, ತೀವ, ಆವ, ತೀವಿ, ದೇವ, ಆರು ಪಾದಗಳ ಮೊದಲಿನ ಎರಡು ಅಕ್ಷರಗಳು. ಇದರಲ್ಲಿ ಪ್ರತಿಯೊಂದರಲ್ಲಿಯೂ ಮೊದಲಕ್ಷರ ಗುರು, ಎರಡನೇ ಅಕ್ಷರ 'ವ' ಕಾರದ ಲಘು. ಇದೇ ಆದಿಪ್ರಾಸ.

ವಾರ್ಧಕ ಷಟ್ಪದಿಯ ಸ್ಥೂಲ ರೂಪವನ್ನು ಈ ಕೆಳಗಿನಂತೆ ಹೇಳಬಹುದು.

೧. ವಾರ್ಧಕ ಷಟ್ಪದಿಗೆ ಹೆಸರೇ ಸೂಚಿಸುವಂತೆ ಆರು ಪಾದಗಳಿರುತ್ತವೆ.

೨. ಮೊದಲ ಮೂರು ಪಾದಗಳನ್ನು ಪೂರ್ವಾರ್ಧ ಅಂತಲೂ ಹಾಗೂ ಕೊನೆಯ ಮೂರು ಪಾದಗಳನ್ನು ಉತ್ತರಾರ್ಧ ಎಂತಲೂ ಕರೆಯುತ್ತಾರೆ.

೩. ಒಂದು, ಎರಡು, ನಾಲ್ಕು ಹಾಗೂ ಐದನೇ ಪಾದಗಳು ಮತ್ತೂ ಮೂರನೇ ಹಾಗೂ ಆರನೇ ಪಾದಗಳು ಸಮಾನ ಮಾತ್ರಾ ಲಯಗಳನ್ನು ಹೊಂದಿರುತ್ತವೆ.

೪. ಒಂದು, ಎರಡು, ನಾಲ್ಕು ಹಾಗೂ ಐದನೇ ಪಾದಗಳು ೫ ಮಾತ್ರೆಗಳ ನಾಲ್ಕು ಗುಂಪಿನ ಆವರ್ತದಲ್ಲಿಯೂ (ಅಂದರೆ ೫ರ ೪ ಗುಂಪು– ಒಟ್ಟೂ ೨೦ ಮಾತ್ರೆಗಳು), ಮೂರು ಹಾಗೂ ಆರನೇ ಪಾದಗಳು ೫ ಮಾತ್ರೆಗಳ ೬ ಗುಂಪಿನ ಆವರ್ತದಲ್ಲಿಯೂ (ಅಂದರೆ ೫ ರ ಆರು ಗುಂಪು ಹಾಗೂ ಒಂದು ಗುರು–ಒಟ್ಟೂ ೩೨ ಮಾತ್ರೆಗಳು) ಇರುತ್ತವೆ.

೫. ಮೂರು ಹಾಗೂ ಆರನೇ ಪಾದಗಳ ಕೊನೆಯ ಅಕ್ಷರ ಹೃಸ್ವವಾಗಿದ್ದರೂ ದೀರ್ಘವಾಗಿಯೇ ಓದಬೇಕು.

೬. ಪ್ರತಿ ಪದ್ಯಾರ್ಧಕ್ಕೆ ಒಟ್ಟೂ ೭೨ ಮಾತ್ರೆಗಳಂತೆ ಒಂದು ಪದ್ಯದಲ್ಲಿ ಒಟ್ಟೂ ೧೪೪ ಮಾತ್ರೆಗಳಿರುತ್ತವೆ.

೭. ಆವರ್ತಗಳಲ್ಲಿಯ ಮಾತ್ರಾ ಗುಂಪುಗಳು U – – (ನನಾನಾ) ಆಗಿರುವದಿಲ್ಲ.

ವಾರ್ಧಕ ಷಟ್ಪದಿಯ ಕಾವ್ಯಗಳು, ವಿಶೇಷವಾಗಿ ರಾಘವಾಂಕನ ಹರಿಶ್ಚಂದ್ರ ಕಾವ್ಯ ಹಾಗೂ ಲಕ್ಷ್ಮೀಶನ ಜೈಮಿನೀ ಭಾರತ, 'ಗಮಕಿಗಳಿಂದ' ಹೆಚ್ಚಿನ ಪ್ರಸಿದ್ಧಿ ಪಡೆದಿವೆ. ಇದಕ್ಕೆ ಷಟ್ಪದಿಯ ಛಂದಸ್ಸಿನ ಬಿಗುವು ಕಾರಣ ಎಂಬುದು ವಿದ್ವಾಂಸರ ಅಭಿಪ್ರಾಯ.

***

ಕನ್ನಡ

– ಮಾನಸ ಕೆ.ಕೆ.

ಕನ್ನಡವೆಂದರೆ ಬರೀ ಸಕ್ಕರೆಯಲ್ಲ
ಅಕ್ಷರಗಳ ಸರಮಾಲೆಯಲ್ಲ
ಭಾವೈಕ್ಯತೆಯ ಗೂಡೂ ಅಲ್ಲ
ಅದೊಂದು ಕನ್ನಡಿಗರ ಬುನಾದಿ

ಸವಿಮಾತಿಗದುವೇ ಅಕ್ಕರೆ
ಗೆಲುವಿನತ್ತ ಸಾಗಿಸುವ ಆಸರೆ
ನುಡಿತೋರಣಗಳಲ್ಲಿ ಐಸಿರಿ
ಬಲ್ಲವನೇ ಬಲ್ಲ ಕನ್ನಡದ ಸಿರಿ

ಸವಿಯಬೇಕಿದೆ ಭಾಷೆಯ ನಾವು
ಅರಿಯಬೇಕಿದೆ ಪದಗಳ ಭಾವ
ನಲಿಯಲಿ ಮನಗಳಲಿ ಕನ್ನಡವು
ನಮ್ಮೊಡಲಲಿ ನೆಲೆಸಲಿ ಸಿರಿಗನ್ನಡವು

ನಮ್ಮ ತನುಮನದಲಿ ಇರಲಿ ಕನ್ನಡ
ಜನಮನದಲಿ ಹರಿಯಲಿ ಜೀವಂತ ಕನ್ನಡ
ಉಸಿರು ಉಸಿರಲಿ ಬೆರೆಯಲಿ ಕನ್ನಡ
ಬಾಳ್ವೆಗೊಂದರ್ಥ ನೀಡಲು ಬಳಸಿರಿ ಕನ್ನಡ

***

ತಲೆನೋವು

– ಸ್ನೇಹ ಶಶಿಧರ

“ಕ್ರೀನ್…” ಸದ್ದಿಗೆ ಕಚೇರಿಯ ಜವಾನ ಓಡಿ ಬಂದು ತಲೆ ತಗ್ಗಿಸಿ ನಿಂತ. ಗೋಡೆಯ ಕಡೆ ತಿರುಗಿ ಖುರ್ಚಿಯ ಬೆನ್ನಾಸರೆಗೆ ಒರಗಿ ಕಣ್ಣು ಮುಚ್ಚಿ ಕೂತಿದ್ದಳು ಬಿಂದು. ಎಬ್ಬಿಸಲೋ ಬೇಡವೋ ಎಂದು ದುಗುಡದಲ್ಲೇ, “ಮೇಡಂ…” ಅಂದು ತಲೆ ಕೆರೆಯುತ್ತಾ ನಿಂತ. “ಒಂದ್ ಸ್ಟ್ರಾಂಗ್ ಕಾಫಿ ತೊಗೊಂಡ್ ಬನ್ನಿ ಮಲ್ಲಯ್ಯ”, ಎಂದಳು ಬಿಂದು. “ಅ….” ಏನೋ ಹೇಳಲು ಹೊರಟ ಮಲ್ಲಯ್ಯ, ಮಾತನ್ನು ನುಂಗಿಕೊಂಡು ಹೊರನಡೆದ.

“ಮೇಡಂ ಒತ್ತಾರೆ ಇಂದ 10ನೇ ಕಿತಾ ಕಾಫಿ ತರಿಸ್ಕೊಳ್ತಿದ್ದಾರೆ. ನಂಗೇನ್ ಅದೇ ಕ್ಯಾಮೆ ಅನ್ಕೊಂಡ್ ಬಿಟ್ಟವ್ರೆ..” ಎಂದು ಗೊಣಗಾಡುತ್ತಿದ್ದ ಮಲ್ಲಯ್ಯನ ಮಾತು ಕಚೇರಿಯ ಬೇರೆ ಸಿಬ್ಬಂದಿಗಳ ಕಿವಿಗೆ ಬಿದ್ದಿತು.

“ಮನೇಲಿ ಏನೋ ಜಗಳವಿರಬೇಕು”, ಒಬ್ಬ ಸಿಬ್ಬಂದಿ ಹೇಳಿದರು. “ಮದುವೆಯಾದ ಮೇಲೆ ತಲೆ ನೋವು ಜಾಸ್ತಿ ಅಂತ ಗೊತ್ತಿತ್ತು. ಅದು ನಮ್ಮಂತವರಿಗೆ ಅನ್ಕೊಂಡೆ… ಇವರ ಮನೇಲೂ ಅದೇ ಕಥೆನಾ???” ಕಿಸಕ್ಕೆಂದು ನಕ್ಕುಬಿಟ್ಟಳು ಮತ್ತೊಬ್ಬಳು.

ನಗುವ ವಿಚಾರ ಹೌದು. ಆದರೆ ಸತ್ಯವಾಗಿತ್ತು. ಬಿಂದು ಸರ್ಕಾರಿ ಕಚೇರಿಯಲ್ಲಿ ದೊಡ್ಡ ಹುದ್ದೆಯಲ್ಲಿದ್ದಳು. ಪ್ರಾಮಾಣಿಕತೆ, ಸಹೃದಯತೆಗೆ ತನ್ನ ಇಲಾಖೆಯಲ್ಲಿ ಹೆಸರು ಸಂಪಾದಿಸಿದ್ದಳು. ಈಗಿನ ಕಾಲದ ಹೊಸ ವಿಚಾರಗಳನ್ನು ಅಳವಡಿಸಿಕೊಂಡಿದ್ದಳು. ಹಾಗಂತ ಸಂಸ್ಕಾರ ಸಂಸ್ಕೃತಿ ಮರೆತಿರಲಿಲ್ಲ.

ಮದುವೆ ಆಗಿ ಮೂರೇ ತಿಂಗಳು ಕಳೆದಿತ್ತು. ಹಿರಿಯರು ನಿಶ್ಚಯಿಸಿದ್ದ ಅನುಕೂಲಸ್ಥರ ಮನೆ. ಒಬ್ಬನೇ ಮಗ, ಕಾಲೇಜೊಂದರಲ್ಲಿ ಪ್ರಾಧ್ಯಾಪಕ. ಅತ್ತೆ ಮಾವ ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದರು. ಮದುವೆಯಲ್ಲಿ ಒಬ್ಬಳೇ ಸೊಸೆಗೆ ಮೈ ತುಂಬಾ ಚಿನ್ನ ಹೊದಿಸಿದ್ದರು. “ಡಾಲರ್ ಸೊಸೆ ಅಲ್ವಾ… ಒಂದೇ ವರ್ಷದಲ್ಲಿ ವಸೂಲಿ ಮಾಡಿಕೊಡ್ತಾಳೆ” ಎಂದು ಹಿಂದೆ ಮಾತಾಡಿಕೊಳ್ಳುತ್ತಿದ್ದರು.

ಈಗ ಮೂರು ತಿಂಗಳಿಂದ ಬಿಂದುಗೆ ವಿಪರೀತ ತಲೆ ನೋವು. ಕೆಲಸದಲ್ಲಿ ಏಕಾಗ್ರತೆ ಕಡಿಮೆಯಾಗತೊಡಗಿತು. ವೈದ್ಯರ ಬಳಿ ಇದಕ್ಕೆ ಉತ್ತರವೇ ಇರಲಿಲ್ಲ. ದೇಹದ ಎಲ್ಲ ಪರೀಕ್ಷೆಗಳಲ್ಲೂ ಎಲ್ಲ ನಾರ್ಮಲ್. ಯಾರ ಕಣ್ಣೋ ಏನೋ. ವಿಧಿ ಇಲ್ಲದೆ ದೇವರ ಮೊರೆ ಹೋಗಬೇಕಾಯಿತು. ಕಂಡ ಕಂಡ ದೇವರಲ್ಲಿ ಹರಕೆ ಹೊತ್ತುಕೊಂಡರು. ಕಡಿಮೆಯಾಗೋ ಮಾತೇ ಇಲ್ಲ.

ಒಮ್ಮೆ ಹೊನ್ನಾವರದಲ್ಲಿ ಒಬ್ಬ ಖ್ಯಾತ ಜ್ಯೋತಿಷಿಯ ಮನೆಗೆ ತಲೆ ನೋವಿನ ಬಗ್ಗೆ ವಿಚಾರಿಸಲು ಹೋದರು. ಅದು ತೋಟದ ಮನೆ. ಬಯಲುಸೀಮೆಯಿಂದ ಕಾರಿನಲ್ಲಿ ಹೋಗುವಾಗಲೇ ಪ್ರಕೃತಿ ಸೌಂದರ್ಯಕ್ಕೆ ನೋವಿನ ಬೇಗೆ ಅರ್ಧ ಮರೆತಳು. ತಲುಪುವುದು ಸಂಜೆಯಾಯಿತು.

ಗುರುಗಳು ಗಂಡ ಹೆಂಡಿರನ್ನು ಕೂರಿಸಿದರು. ಒಮ್ಮೆ ಇಬ್ಬರನ್ನೂ ಮೇಲಿಂದ ಕೆಳಗೆ ನೋಡಿದರು. ಬಿಂದುವನ್ನು ಕಂಡು ಅಕ್ಕರೆಯಿಂದ ನುಡಿದರು, “ಹೇಗಿದೆ ನಮ್ಮ ತೋಟ?” “ಚೆನ್ನಾಗಿದೆ ಗುರೂಜಿ.. ನಮಗೆ ಇನ್ನು ಕೆಲ ಕಾಲ ನಿಮ್ಮ ತೋಟದಲ್ಲಿ ಸುತ್ತಾಡಬೇಕು ಅನ್ನಿಸ್ತಿದೆ”, ಎಂದಳು ಬಿಂದು. “ಓಹ್.. ಖಂಡಿತ. ಹಾ, ಅದಿಕ್ಕೆ ಮುಂಚೆ ನನಗೊಂದು ಸಹಾಯ ಮಾಡ್ತಿಯಾ? ನಿನ್ನ ಮೂಗುತಿ ಅತ್ಯಂತ ಸುಂದರವಾಗಿದೆ. ಆಕರ್ಷಕವಾಗಿದೆ. ನನ್ನ ಮಗಳಿಗೂ ಮಾಡಿಸಬೇಕು. ನನಗೆ ಕೊಡು. ಆಚಾರಿಗೆ ತೋರಿಸಿ ಕೊಡುವೆ”, ಎಂದರು. ಬಿಂದು ಹೆಮ್ಮೆಯಿಂದ, “ನಮ್ಮತ್ತೆ ಮಾಡಿಸಿಕೊಟ್ಟಿದ್ದು. ವಜ್ರದ್ದು”, ಎಂದಳು.

ಗುರುಗಳು ಮಂದಹಾಸ ಬೀರುತ್ತಾ, "ನೀನು ತೋಟ ಸುತ್ತಿಕೊಂಡು, ರಾತ್ರಿ ಮಲಗು. ನಾಳೆ ಬೆಳಗ್ಗೆ ನನ್ನನ್ನು ಬಂದು ನೋಡಿ. ನಿಮ್ಮ ಸಮಸ್ಯೆಗೆ ಪರಿಹಾರ ತಿಳಿಸುವೆ" ಎಂದರು. "ಆಗಲಿ" ಎಂದು ತೋಟವೆಲ್ಲ ಸುತ್ತಾಡಿ, ಮಲಗಿದರು.

ಬೆಳಗ್ಗೆ ಗುರುಗಳ ಹತ್ತಿರ ಹೋದಾಗ, ಗುರುಗಳು ಅವರಿಗೆ ಮೂಗುತಿ ಹಿಂತಿರುಗಿಸುತ್ತಾ ಕೇಳಿದರು, "ನಿದ್ದೆ ಸರಿಯಾಗಿ ಬಂತಾ? ತಲೆ ನೋವು ಹೇಗಿದೆ?" "ಅರೆರೆ... ನಿನ್ನೆಯಿಂದ ತಲೆ ನೋವಿನ ಬಗ್ಗೆ ಮರೆತೇಬಿಟ್ಟೆ!" ಎಂದಳು ಬಿಂದು.

"ನಿನ್ನ ತಲೆ ನೋವಿಗೆ ಕಾರಣ ಈ ಮೂಗುತಿಯ ಹರಳು. ಅದು ಬೆಳಕನ್ನು ನೇರವಾಗಿ ನಿನ್ನ ಕಣ್ಣುಗಳಿಗೆ ಬಿಂಬಿಸುತ್ತಿದೆ. ಕಣ್ಣಿಗೆ ದಣಿವಾದಾಗ ತಲೆ ನೋವು ಸಹಜ. ಇದನ್ನು ಹಾಕಬೇಡ. ಎಲ್ಲ ಸರಿ ಹೋಗುತ್ತೆ" ಎಂದು ಹೇಳಿ ಕಳಿಸಿದರು. ಕೊನೆಗೂ ಅತ್ತೆಯೇ (ಅವರ ಉಡುಗೊರೆ) ತಲೆ ನೋವಿಗೆ ಕಾರಣವೆಂದು ತಿಳಿಯಿತು.

***

ಕರುನಾಡ ರಾಮಾಯಣ

– ಸಿಂಧು ಹರಿಥಸ್

(ರಾಮನ ಚರಿತ್ರೆಯಲ್ಲಿ ಕರ್ನಾಟಕದ ಹಾಗೂ ಕರ್ನಾಟಕದ ಜನರ ಪಾತ್ರಗಳನ್ನು ಎತ್ತಿ ಹಿಡಿಯುವ ಒಂದು ಪ್ರಯತ್ನ ಈ ಪ್ರಬಂಧ. ಇಲ್ಲಿ ಕೆಲವು ಘಟನೆಗಳನ್ನು ಉದ್ದೇಶಪೂರ್ವಕವಾಗಿಯೇ ಬಿಟ್ಟಿದ್ದೇನೆ.)

ರಾಮಾಯಣದ ಅರಣ್ಯ ಕಾಂಡ

ಪಂಚವಟಿಯಲ್ಲಿ ರಾಮ, ಸೀತೆ ಲಕ್ಷ್ಮಣರು ತಮ್ಮ ನೆಲೆಯೂಡಿರುವ ಸಂದರ್ಭದಲ್ಲಿ ರಾಮ ಲಕ್ಷ್ಮಣರ ಅನುಪಸ್ಥಿತಿಯಲ್ಲಿ ರಾವಣನು ಮೋಸದಿಂದ ಸೀತೆಯನ್ನು ಅಪಹರಿಸುತ್ತಾನೆ. ವಿಷಯ ತಿಳಿದ ರಾಮ ಲಕ್ಷ್ಮಣರು, ಸೀತೆಯ ಹುಡುಕಾಟದಲ್ಲಿ ಅಲೆಯುತ್ತಿದ್ದಾಗ, ಅವರಿಗೆ ಜಟಾಯು ಎಂಬ ಪಕ್ಷಿಯ ಭೇಟಿಯಾಗುತ್ತದೆ. ರಾವಣನು ಸೀತೆಯನ್ನು ದಕ್ಷಿಣದತ್ತ ಕರೆದೊಯ್ದದ್ದನ್ನು ಪ್ರತ್ಯಕ್ಷವಾಗಿ ಕಂಡು, ರಾವಣನೊಂದಿಗೆ ಹೋರಾಡಿ ಗಾಯಗೊಂಡಿದ್ದ ಜಟಾಯು ಅಸುನೀಗುತ್ತಾನೆ. ಜಟಾಯುವಿನ ಅಂತ್ಯಸಂಸ್ಕಾರಗಳನ್ನು ಮುಗಿಸಿ, ಅವನ ಸುಳಿವಿನಂತೆ ರಾಮ ಲಕ್ಷ್ಮಣರು ದಕ್ಷಿಣದತ್ತ ಪಯಣ ಬೆಳೆಸುತ್ತಾರೆ.

ದಕ್ಷಿಣದಲ್ಲಿ ಸಾಗಿದಾಗ ಅವರಿಗೆ ಒಂದು ರಮ್ಯವಾದ ಸರೋವರವು ಎದುರಾಗುತ್ತದೆ. ಅದು, ಇಂದಿನ ಕರ್ನಾಟಕದಲ್ಲಿಯ ಹಂಪಿಯ ಬಳಿ, ತುಂಗಭದ್ರಾ ನದಿಯ ಸಮೀಪದಲ್ಲಿನ ಪಂಪಾ ಸರೋವರ. ಈ ಸರೋವರವು ಪುರಾಣಗಳಲ್ಲಿ ಅಗ್ರ ಸ್ಥಾನ ಹೊಂದಿರುವ ಪಂಚ ಸರೋವರಗಳಲ್ಲಿ ಒಂದು. ಈ ತೀರ್ಥದ ವರ್ಣನೆಯನ್ನು ಅತಿ ಸುಂದರವಾಗಿ ಮಾಡಲಾಗಿದೆ. ಇಲ್ಲಿ ರಾಮನು ಸೀತೆಯನ್ನು ಬಹಳವಾಗಿಯೇ ನೆನೆದು, ಅವಳ ವಿಯೋಗದ ದುಃಖವನ್ನು ಅನುಭವಿಸುತ್ತಾನೆ.

ನಂತರ, ಮತಂಗ ಪರ್ವತದಲ್ಲಿರುವ ಮತಂಗ ಮುನಿಗಳ ಆಶ್ರಮವನ್ನು ಪ್ರವೇಶಿಸುತ್ತಾರೆ. ಮತಂಗ ಮುನಿಗಳ ನಿಧನದ ನಂತರ ಅವರ ಶಿಷ್ಯಳಾದ ಶಬರಿಯು ಅಲ್ಲಿಯೇ ರಾಮನಿಗಾಗಿ ಕಾದಿರುತ್ತಾಳೆ. ಅವಳು ರಾಮ ಲಕ್ಷ್ಮಣರನ್ನು ಉಪಚರಿಸುತ್ತಾಳೆ. ಸೀತೆಯ ಹುಡುಕಾಟದ ವಿಚಾರ ತಿಳಿದ ಮೇಲೆ, ಕಿಷ್ಕಿಂಧೆಯಲ್ಲಿ ಸುಗ್ರೀವನ ಸಹಾಯ ಪಡೆಯಲು ಸೂಚಿಸುತ್ತಾಳೆ. ಶಬರಿ ರಾಮನ ಬಳಿಯೇ ಇಹಲೋಕವನ್ನು ತ್ಯಜಿಸುತ್ತಾಳೆ. ಶಬರಿಯ ಅಪರಕರ್ಮಗಳನ್ನು ಮುಗಿಸಿ ಕಿಷ್ಕಿಂಧೆಯತ್ತ ರಾಮಲಕ್ಷ್ಮಣರು ಸಾಗುತ್ತಾರೆ.

ಕಿಷ್ಕಿಂಧೆಯು ತುಂಗಭದ್ರಾ ನದಿಯ ದಡದಲ್ಲಿರುವ ಬೆಟ್ಟಗಾಡು ಪ್ರದೇಶ. ಅಲ್ಲಿ ರಾಮನಿಗೆ ಮೊದಲು ಹನುಮನ ಭೇಟಿಯಾಗುತ್ತದೆ. ರಾಮಾಂಜನೇಯರ ಸಂದರ್ಶನದ ನಂತರ ಹನುಮಂತನು ರಾಮನ ಕಥೆಯನ್ನು ಸುಗ್ರೀವನಿಗೆ ವಿವರಿಸುತ್ತಾನೆ. ಸುಗ್ರೀವನು ಮಾನವನ ಹಾಗೆ ಕಂಡರೂ, ಉದ್ದವಾದ ಬಾಲ ಚೂಪಾದ ಉಗುರುಗಳನ್ನು ಹೊಂದಿ ಕಪಿಯಂತೆ ಭಾಸವಾಗುತ್ತಾನೆ. ಹೀಗೆ ಕಾಣುವವರನ್ನು ವಾನರರು ಎಂದು ಕರೆಯುತ್ತಾರೆ. ವಾನರ ಶಬ್ದದ ಯಥಾವತ್ ಅರ್ಥ ಕಪಿ ಎಂದು. ಆದರೆ, "ವನಮ್ ರಾತಿ ಇತಿ ವಾನರಃ" ಅರ್ಥಾತ್, ವನವನ್ನು ಆಶ್ರಯಿಸಿದವರು / ಅವಲಂಬಿತರು ವಾನರರು ಎಂಬುದನ್ನು ಗ್ರಹಿಸಬೇಕಾಗುತ್ತದೆ. ಬೆಟ್ಟ-ಗುಡ್ಡ-ಕಾಡು ಪ್ರದೇಶಗಳಲ್ಲಿ ಇದ್ದ ವಾನರರು ಅಲ್ಲಿ ಕೋತಿ, ಕರಡಿ ಇತ್ಯಾದಿ ಪ್ರಾಣಿಗಳ ವೇಷವನ್ನು ಧರಿಸುತ್ತಾರೆ. ಇದಕ್ಕೆ ಪೂರಕವಾಗಿ ವಾಲ್ಮೀಕಿ ರಾಮಾಯಣದಲ್ಲಿ ಅನೇಕ ಶ್ಲೋಕಗಳು ಕಾಣಸಿಗುತ್ತವೆ. ಅಲ್ಲದೆ ವಾನರರ ಕರ್ಮ, ಧರ್ಮಾಚರಣೆಗಳು ಶಾಸ್ತ್ರಗಳ ವಿಧಿಯಲ್ಲಿಯೇ ನಡೆಯುತ್ತದೆ. ಅವರು ನಾನಾ ಕ್ಷೇತ್ರಗಳಲ್ಲಿ ಪಾಂಡಿತ್ಯವನ್ನು ಹೊಂದಿರುತ್ತಾರೆ.

ಸೀತೆಯ ಅಪಹರಣವನ್ನು ತಿಳಿದ ಸುಗ್ರೀವನು ಸೀತೆಯ ಹುಡುಕಾಟಕ್ಕಾಗಿ ನಾಕು ದಿಕ್ಕುಗಳಲ್ಲಿ ನಾಕು ತಂಡಗಳನ್ನು ಕಳಿಸುತ್ತಾನೆ. ಭೂಗೋಳವನ್ನು ಚೆನ್ನಾಗಿ ಅರಿತಿದ್ದ ಅವನು, ನಾಕೂ ದಿಕ್ಕುಗಳನ್ನು, ಅಲ್ಲಿ ಸಿಗುವ ತಾಣಗಳನ್ನು ನಿಖರವಾಗಿ ತನ್ನ ತಂಡಗಳಿಗೆ ವಿವರಿಸುತ್ತಾನೆ. ಪೂರ್ವ, ಪಶ್ಚಿಮ ಹಾಗೂ ಉತ್ತರ ದಿಕ್ಕುಗಳಲ್ಲಿ ಸೀತೆಯ ಸುಳಿವು ಸಿಗುವುದಿಲ್ಲ. ಆದರೆ ಪಶ್ಚಿಮ

ಘಟ್ಟಗಳನ್ನು ಅನುಸರಿಸಿ ದಕ್ಷಿಣ ದಿಕ್ಕಿನತ್ತ ತೆರಳಿದ್ದ ಹನುಮಂತನು ಭರತಖಂಡವನ್ನು ದಾಟಿ, ಲಂಕೆಯನ್ನು ತಲುಪಿ, ಸೀತೆಯನ್ನು ಸಂಧಿಸುತ್ತಾನೆ. ವಾನರನ ಆಗಮನದ ವಿಚಾರ ತಿಳಿದ ರಾವಣ, ಹನುಮಂತನ ಬಾಲಕ್ಕೆ ಬೆಂಕಿ ಹಚ್ಚುತ್ತಾನೆ. ಅದೇ ಕಿಚ್ಚಿನಿಂದ ಹನುಮಂತನು ಲಂಕೆಯನ್ನೇ ಸುಟ್ಟುಬಿಡುತ್ತಾನೆ.

ಸೀತೆ ಲಂಕೆಯಲ್ಲಿರುವುದನ್ನು ತಿಳಿದ ಮೇಲೆ, ರಾಮ ಲಕ್ಷ್ಮಣರು ಸುಗ್ರೀವ, ಹನುಮಂತ, ಜಾಂಬವಂತ ಮೊದಲಾದ ವಾನರೋತ್ತಮರೊಂದಿಗೆ ವಾನರ ಸೇನೆಯ ಸಮೇತ ಲಂಕೆಯತ್ತ ಸಾಗುತ್ತಾರೆ. ಹನುಮಂತನಂತೂ ಹಿಂದೂ ಮಹಾಸಾಗರವನ್ನು ತನ್ನ ಶಕ್ತಿಯಿಂದ ಜಿಗಿದು ದಾಟಿದ್ದನು. ಆದರೆ ಇದು ಇತರರಿಗೆ ಅಸಾಧ್ಯ. ಹೀಗಿರುವಾಗ, ವಾನರ ಸೈನ್ಯದಲ್ಲಿದ್ದ ವಿಶ್ವಕರ್ಮನ ಪುತ್ರನೂ ಆದ ನಲನು, ಭರತಖಂಡದಿಂದ ಲಂಕೆಯ ವರೆಗೆ ಸೇತುವೆಯನ್ನು ಕೇವಲ ಐದು ದಿನಗಳಲ್ಲಿ ನಿರ್ಮಿಸುತ್ತಾನೆ.

ಮುಂದೆ ರಾಮ ರಾವಣರ ಯುದ್ಧ ಪ್ರಾರಂಭವಾಗುತ್ತದೆ. ವಾನರರು, ಅಸ್ತ್ರ ಶಸ್ತ್ರ ಅಷ್ಟೇ ಅಲ್ಲದೆ, ಸುತ್ತಲೂ ಸಿಕ್ಕ ಸಂಪನ್ಮೂಲಗಳನ್ನು ಅಂದರೆ ಕೊಂಬೆಗಳು, ಬಂಡೆಗಳು ಇತ್ಯಾದಿ ವಸ್ತುಗಳನ್ನು ಬಳಸಿಯೂ ಯುದ್ಧ ಮಾಡುವಲ್ಲಿ ನೈಪುಣ್ಯತೆಯನ್ನು ಹೊಂದಿರುತ್ತಾರೆ. ಹೀಗೇ ಯುದ್ಧದಲ್ಲಿ ರಾವಣನ ವಿರುದ್ಧ ವೀರಾವೇಶಗಳಿಂದ ಹೋರಾಡುತ್ತಾರೆ.

ಮೇಘನಾದನ ಪ್ರಹಾರದಿಂದ ಮೂರ್ಛಿತನಾಗಿದ್ದ ಲಕ್ಷ್ಮಣನ ಚಿಕಿತ್ಸೆಗೆ ಹಿಮಾಲಯದಲ್ಲಿ ಸಿಗುವ ಸಂಜೀವಿನಿಯ ಅವಶ್ಯಕತೆ ಒದಗುತ್ತದೆ. ಆಗ ಹನುಮನು ಹಾರಿ, ಹಿಮಾಲಯಕ್ಕೆ ಹೋಗುತ್ತಾನೆ. ಅಲ್ಲಿ ಸಂಜೀವಿನಿಯ ಗುರುತು ಸಿಗದ ಕಾರಣ, ಪರ್ವತದ ಒಂದು ಭಾಗವನ್ನೇ ಮುರಿದು ಲಂಕೆಗೆ ತರುತ್ತಾನೆ. ಸಂಜೀವಿನಿಯಿಂದ ಲಕ್ಷ್ಮಣನು ಗುಣಮುಖನಾಗುತ್ತಾನೆ. ತರುವಾಯ, ರಾಮನಿಂದ ರಾವಣನ ವಧೆಯಾಗಿ ಯುದ್ಧವು ಸಮಾಪ್ತಿಯಾಗುತ್ತದೆ.

ರಾಮನು ತನ್ನ ಗೆಲುವಿಗೆ ವಾನರರ ಮೈತ್ರಿ ಹಾಗು ಪರಾಕ್ರಮವು ಮುಖ್ಯವಾದ ಕಾರಣ ಎಂದು ಅಭಿನಂದಿಸುತ್ತಾನೆ.

ಈ ಕಲಿಯುಗದಲ್ಲಿ, ರಾಮಜನ್ಮಭೂಮಿಯಾದ ಅಯೋಧ್ಯೆಯನ್ನು ಮೊಘಲ್ ದೊರೆಯಾದ ಬಾಬರನು ೧೬ನೇ ಶತಮಾನದಲ್ಲಿ ಧ್ವಂಸ ಮಾಡಿ, ಅಲ್ಲಿ ಮಸೀದಿಯನ್ನು ಕಟ್ಟಿಸಿದ್ದನು. ನಂತರ ೧೯೯೨ರಲ್ಲಿ ಹಿಂದೂ ಹೋರಾಟಗಾರರು ಮಸೀದಿಯನ್ನು ತೆರವುಗೊಳಿಸಿದರು. ಅನೇಕ ವರ್ಷಗಳ ಕಾಲ ಸಂಘರ್ಷದಲ್ಲಿದ್ದ ಈ ವಿಚಾರವು, ೨೦೧೯ರಲ್ಲಿ ಭಾರತೀಯ ಪುರಾತತ್ವ ಸಮೀಕ್ಷೆಯ ಪುರಾವೆಗಳ ನೆರವಿನಿಂದ ಸರ್ವೋಚ್ಚ ನ್ಯಾಯಾಲಯವು ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಿಸಲು ತೀರ್ಪು ನೀಡಿತು. ೨೦೨೦ರಲ್ಲಿ ಭೂಮಿಪೂಜೆ ನಡೆದು, ೨೦೨೪ರಲ್ಲಿ ದೇವಸ್ಥಾನವು ಲೋಕಾರ್ಪಣೆಗೊಂಡಿತು. ನವ ನಿರ್ಮಿತ ದೇಗುಲದಲ್ಲಿರುವ ರಾಮಲಲ್ಲ ವಿಗ್ರಹವನ್ನು ಅರುಣ್ ಯೋಗಿರಾಜ್ ಎಂಬ ಮೈಸೂರು, ಕರ್ನಾಟಕ ಮೂಲದ ಶಿಲ್ಪಿಯು ಕೆತ್ತಿದನು.

ಹೀಗೆ, ತ್ರೇತಾಯುಗದಲ್ಲಿ ಸೀತೆಯ ಹುಡುಕಾಟ ಮತ್ತು ವಿಮೋಚನೆಯಲ್ಲಿ ಕರುನಾಡಿನ ಯೋಗದನವು ಮಹತ್ವವಾದದ್ದು ಹಾಗೂ ಕಲಿಯುಗದಲ್ಲಿ ರಾಮನ ಜನ್ಮಭೂಮಿಗೆ ಹಿಂದಿರುಗುವಿಕೆಯಲ್ಲಿ ಕರ್ನಾಟಕವು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ.

***

'ಬೆಳಕು-ಕತ್ತಲು' ಎಂಬ ಬೆರಗು

- ಕಮಲಾಕ್ಷಿ ಸಿ.ಆರ್.

ಬೆಳಕನ್ನು ಜ್ಞಾನಕ್ಕೆ, ಕತ್ತಲನ್ನು ಅಜ್ಞಾನಕ್ಕೆ ಹೋಲಿಸುತ್ತೇವೆ. ಅಜ್ಞಾನವನ್ನು ಓಡಿಸುವ ದಿವ್ಯ ಶಕ್ತಿ ಜ್ಞಾನಕ್ಕೆ ಮಾತ್ರವಿದೆ ಎಂದೇ ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ ಎಂದು ವ್ಯಾಖ್ಯಾನಿಸಲಾಗುತ್ತದೆ. ಹಗಲಿನ ಹಿಂದೆ ಇರುಳು ಬರುವಂತೆ, ಬೆಳಕಿನ ಜೊತೆಗೆ ಕತ್ತಲು ಬಂದರೂ, ಬೆಳಕಿಗೇ ಹೆಚ್ಚಿನ ಮಹತ್ವ.

ಆದರೆ ಅನುಭವ ಮಂಟಪದ ಶೂನ್ಯ ಪೀಠಾಧ್ಯಕ್ಷರಾಗಿದ್ದ ಅಲ್ಲಮ ಪ್ರಭುಗಳು ಬೆಳಕು ಹಾಗೂ ಕತ್ತಲು ಎರಡೂ ಸಮವಾದವು ಎಂದಿದ್ದಾರೆ.

ಅಪರಿಮಿತದ ಕತ್ತಲೆಯೊಳಗೆ
ವಿಪರೀತದ ಬೆಳಕನಿಕ್ಕಿದವರಾರೋ?
ಕತ್ತಲೆಯೂ ಅದೆ! ಬೆಳಕೂ ಅದೆ!
ಒಂದಕ್ಕೊಂದು ಅಂಜದು!
ಇದೇನು ಚೋದ್ಯವೋ?
ಆನೆಯೂ ಸಿಂಹವೂ
ಒಂದಾಗಿ ಉಂಬುವುದ ಕಂಡು
ಬೆರಗಾದೆನು ಕಾಣಾ ಗುಹೇಶ್ವರ!

ಕತ್ತಲು ಮತ್ತು ಬೆಳಕು ಪರಸ್ಪರ ಪ್ರತಿಸ್ಪರ್ಧಿಗಳಂತೆ. ಒಂದೇ ನಾಣ್ಯದ ಎರಡು ಮುಖಗಳಂತೆ ಒಂದರ ಹೊರತು ಇನ್ನೊಂದಕ್ಕೆ ಅಸ್ಥಿತ್ವವೇ ಇರದು. ಕತ್ತಲನ್ನು ನುಂಗಿ ಬೆಳಕು ಉದಯಿಸಿದರೆ, ಬೆಳಕನ್ನುಂಡು ಕತ್ತಲು ಆವರಿಸುತ್ತದೆ. ಅವರೆಡು ಒಂದನ್ನು ಉಂಡು ಇನ್ನೊಂದು ಅಸ್ತಿತ್ವಕ್ಕೆ ಬರುತ್ತವೆ. ಬೆಳಕಿನ ಜೊತೆಗೆ ಕತ್ತಲಿದೆ ಎಂಬುದಕ್ಕೆ ಸೂಚ್ಯವಾಗಿ 'ದೀಪದ ಕೆಳಗೆ ಕತ್ತಲು' ಎಂಬ ನಾಣ್ಣುಡಿ ಪ್ರಚಲಿತದಲ್ಲಿದೆ. ಆದರೆ ಅದೇಕೋ ಎಲ್ಲರೂ ಬೆಳಕಿಗಾಗಿ ಹಂಬಲಿಸಿ, ಕತ್ತಲನ್ನು ನಿರ್ಲಕ್ಷಿಸುವರು. ಬೆಳಕಿನಲ್ಲಿ ನಡೆಯುವಷ್ಟೇ ನೈಸರ್ಕಿಕ ವಿದ್ಯಮಾನಗಳು ನಡೆದರೂ ಕತ್ತಲಿನನ್ನು ಕಡೆಗಣಿಸುವುದು ವಿಪರ್ಯಾಸ.

ನವ ಮಾಸ ತಾಯಿ ಗರ್ಭದ ಕತ್ತಲ ಲೋಕದಲ್ಲಿ ಭ್ರೂಣವಾಗಿ ರೂಪುಗೊಂಡು ಜನ್ಮ ತಳೆಯುತ್ತಾನೆ. ಭೂಮಿಗೆ ಪಾದಾರ್ಪಣೆ ಮಾಡಿದ ಕ್ಷಣ ಮೊದಲ ಬಾರಿ ಬೆಳಕಿನ ದರ್ಶನವಾಗುತ್ತದೆ. ಅಲ್ಲಿಂದ ಮುಂದೆ ಪ್ರತಿದಿನವೂ ಬೆಳಕಿನ ಕುರಿತೇ ಧ್ಯಾನ ಮಾಡುತ್ತಾನೆ. ಬೆಳಕು ಜೀವನದ ದಾರಿ ತೋರುವ ಗುರುವಾಗಿ ಬಿಡುತ್ತದೆ. ಬೆಳಕಿಗೆ ಅದೆಷ್ಟು ಹೊಂದಿಕೊಂಡು ಬಿಡುವನೆಂದರೆ, ಕತ್ತಲಿನಲ್ಲಿ ಇರುವುದು, ಕತ್ತಲನ್ನು ಸಹಿಸಿಕೊಳ್ಳುವುದು ಅಪರಾಧ ಎಂಬಂತೆ ಭಾವಿಸುತ್ತಾನೆ. ಮನುಷ್ಯ ಎಚ್ಚರವಾಗಿರುವಾಗಲೆಲ್ಲ ತನ್ನ ಸುತ್ತ ಸದಾ ಬೆಳಕು ಇರುವಂತೆ ನೋಡಿಕೊಳ್ಳುತ್ತ, ಕತ್ತಲಿನಿಂದ ದೂರ ಸರಿಯುತ್ತಾನೆ. ಬೆಳಕು ಅಭಿವೃದ್ಧಿಯ, ವೈಭೋಗದ, ಸುಖದ ಸಂಕೇತವಾಗಿದೆ ಎನಿಸುತ್ತದೆ. ಅದೇ ಕತ್ತಲೆಯು ವಿನಾಶದ, ಭೀತಿಯ, ಅರಾಜಕತೆಯ ಸಂಕೇತ ಎಂದು ಭಾವಿಸಲ್ಪಟ್ಟಿದೆ.

ಆದರೆ ಬೆಳಕು ಕತ್ತಲೆಗಳ ಪಾತ್ರವನ್ನು ಅವಲೋಕಿಸಿದರೆ ಅವರೆಡು ಒಂದೇ ನಾಣ್ಯದ ಎರಡು ಮುಖಗಳಂತೆ ಎಂದರಿವಾಗುತ್ತದೆ. ಬೆಳಕು ನಮ್ಮ ಬಾಹ್ಯ ಜಗತ್ತಿನ ಪರಿಚಯವನ್ನು ಮಾಡಿಸುತ್ತದೆ. ವಸ್ತುಗಳ ಮೇಲೆ ಬಿದ್ದ ಬೆಳಕು ಪ್ರತಿಫಲಿಸಿ, ನಮ್ಮ ಕಣ್ಣನ್ನು ಪ್ರವೇಶಿಸಿ ಮೆದುಳು ಅವುಗಳನ್ನು ಗ್ರಹಿಸಿದಾಗ ಗುರುತಿಸಲು ಸಾಧ್ಯವಾಗುತ್ತದೆ. ವಸ್ತುಗಳ ಭೌತ ರೂಪ, ಬಣ್ಣ, ಆಕಾರವನ್ನು ಗುರುತಿಸಲು ಸಾಧ್ಯವಾಗುತ್ತದೆ. ಮುಂದುವರೆದು, ವಸ್ತುಗಳ ಗುಣ, ರೂಪವನ್ನು ವೃದ್ಧಿಸುವ ಯತ್ನ ನಿರಂತರವಾಗಿರುವುದು ಈ ಬೆಳಕಿನಿಂದಲೇ. ಅಂದರೆ, ಬೆಳಕಿನಿಂದಾಗಿ ಸೌಂದರ್ಯದ ಶೋಧನೆ ಹೆಚ್ಚಾಗಿದೆ ಎನ್ನಬಹುದು.

ಕತ್ತಲಿನ ಪಾತ್ರವನ್ನು ಅವಲೋಕಿಸಿದರೆ, ಸೃಷ್ಟಿಯ ವೈಚಿತ್ರಗಳು, ವಿಸ್ಮಯಗಳೆಲ್ಲವನ್ನೂ ರಹಸ್ಯವಾಗಿಡುವುದು ಕತ್ತಲು. ಗಿಡ ಚಿಗುರೊಡೆಯುವುದು, ಮೊಗ್ಗು ಹೂವಾಗಿ ಅರಳುವುದು, ಹೂವು ಕಾಯಾಗಿ ಹಣ್ಣಾಗುವುದು, ಪಕ್ಷಿಗಳು ಮೊಟ್ಟೆಯಿಟ್ಟು ಮರಿಯಾಗುವುದು ಹೀಗೆ ಸೃಷ್ಟಿಯ ಬಹಳಷ್ಟು ರಹಸ್ಯ ಕ್ರಿಯೆಗಳು ಕತ್ತಲಲ್ಲೇ ನಡೆಯುವುದು.

ಕತ್ತಲಿಗೆ ಹೆದರಿ ಕಣ್ಮುಚ್ಚಿ ಕುಳಿತರೆ, ಕತ್ತಲಿನಲ್ಲಿ ಅಡಗಿರುವ ಸೌಂದರ್ಯ ಕಾಣಿಸುವುದಿಲ್ಲ. ಅದೇ ಕತ್ತಲಿನಲ್ಲಿ ಬಾನಿನೆಡೆಗೆ ತಲೆ ಎತ್ತಿ ನೋಡಿದರೆ, ಆಗಸದಲ್ಲಿ ಶುಭ್ರ ಆಕಾಶದ ತುಂಬಾ ಹೊಳೆಯುವ ನಕ್ಷತ್ರಗಳು, ಗ್ರಹಗಳ ಚಲನೆಯನ್ನು ಕಣ್ತುಂಬಿಕೊಳ್ಳ ಬಹುದು. ಕತ್ತಲು ಮನಸ್ಸು, ದೇಹಕ್ಕೆ ವಿಶ್ರಾಂತ ಭಾವ ನೀಡಿ ಶಾಂತ ಭಾವ ಮೂಡಿಸುತ್ತದೆ. ಕತ್ತಲು ಜನರನ್ನು ಒಗ್ಗೂಡಿಸುವ ಶಕ್ತಿ. ಕತ್ತಲು ಬೆಳಕಿನಂತೆ ವರ್ಣ ತಾರತಮ್ಯ ಮಾಡದೆ ಸಮಾನ ಭಾವ ತೋರುತ್ತದೆ.

ಬೆಳಕಿನಿಂದಾಚೆ ಎಲ್ಲವೂ ಕತ್ತಲೆ. ಎಷ್ಟೇ ಬೆಳಕಿನಲ್ಲಿ ಇದ್ದರೂ ಕಣ್ಣು ಮುಚ್ಚಿ ಕುಳಿತರೆ ಕಗ್ಗತ್ತಲೆಯೇ. ಆ ರೀತಿ ಕಣ್ಣು ಮುಚ್ಚಿ ಧ್ಯಾನ, ಯೋಗಾಸಕ್ತರಾಗಿ ಮನಸ್ಸಿನ ನಿಯಂತ್ರಣ ಸಾಧಿಸಲು ಸಾಧ್ಯ. ಧ್ಯಾನಾಸಕ್ತರಾಗಿ ಸುಪ್ತ ಚೇತನವನ್ನು ಪ್ರಾರ್ಥಿಸಿದಾಗ ಅಗೋಚರ ಅದಮ್ಯ ಜ್ಞಾನದ ಬೆಳಕನ್ನು ಕಾಣಲು ಸಾಧ್ಯ.

ಜ್ಞಾನ ಅಜ್ಞಾನಗಳೂ ಬೆಳಕು ಕತ್ತಲಿನಂತೆಯೇ. ಅಜ್ಞಾನಿಯಾಗಿದ್ದವ ಅಕ್ಷರ, ಅನುಭವಗಳ ನೆರವಿನಿಂದ ಜ್ಞಾನಿಯಾಗುತ್ತಾನೆ. ಜ್ಞಾನಿಯಾದೆನೆಂಬ ಅಹಮ್ಮಿಕೆಗೆ ಒಳಗಾದರೆ ಅವನಿಗೇ ತಿಳಿಯದಂತೆ ಮತ್ತೆ ಅಜ್ಞಾನಿಯಾಗುತ್ತಾನೆ. ಜ್ಞಾನವನ್ನು ಹಂಚಿದಷ್ಟೂ, ಸಮಾಜದೊಡನೆ ಮಿಳಿತವಾದಷ್ಟೂ ಜ್ಞಾನ ಹದಗೊಳ್ಳುತ್ತದೆ. ಗೊನೆ ಇಟ್ಟ ಬಾಳೆ ಬಾಗುವಂತೆ ಜ್ಞಾನ ಹೆಚ್ಚಿದಷ್ಟೂ ವಿನಯ ಹೆಚ್ಚಾಗಿ ವ್ಯಕ್ತಿತ್ವ ಬೆಳಕಿನಂತೆ ಪ್ರಖರವಾಗಬೇಕು.

ಹೀಗೆ ಬೆಳಕು, ಕತ್ತಲು ಎರಡೂ ಮನುಷ್ಯನ ಜೀವನದಲ್ಲಿ ಪ್ರಭಾವ ಬೀರುತ್ತವೆ. ಬೆಳಕಿನಿಂದ ಕತ್ತಲು, ಕತ್ತಲಿನಿಂದಾಗಿ ಬೆಳಕು ಗೋಚರಿಸುವುದು ಬೆರಗು. ದೀಪದ ಕೆಳಗೆ ಕತ್ತಲು ಎನ್ನುವಂತೆ, ಸುಖ ದುಃಖ ಎರಡೂ ಒಂದರ ಹಿಂದೆ ಒಂದು ಎಂದು ಪರಿಗಣಿಸಿ ಇವೆರಡನ್ನು ಸಮಾನವಾಗಿ ಸ್ವೀಕರಿಸಿ ಮುನ್ನಡೆವುದೇ ಬದುಕಿನ ತಿರುಳು ಅಲ್ಲವೆ?

***

ಸವಿ ನೆನಪು

- ಅನ್ನಪೂರ್ಣ ಸುಬ್ಬರಾವ್

ನವಂಬರ್ ತಿಂಗಳು ಬಂತೆಂದರೆ ಗಲ್ಲಿ ಗಲ್ಲಿಗಳಲ್ಲಿ ಕನ್ನಡ ಕಾರ್ಯಕ್ರಮಗಳ ಸಂಭ್ರಮವೋ ಸಂಭ್ರಮ. ಹಾರಾಡುವ ಕೆಂಪು ಹಳದಿ ಬಣ್ಣದ ಬಾವುಟ, ವೇದಿಕೆಯಲ್ಲಿ ಕನ್ನಡ ಗೀತೆಗಳು, ಸಾಂಸ್ಕೃತಿಕ ಚಟುವಟಿಕೆ, ನಾಡು ನುಡಿಯ ಬಗ್ಗೆ ಭಾಷಣ. ಪ್ರಶಸ್ತಿ ಪ್ರದಾನ. ರಕ್ತದಾನ ಶಿಬಿರ. ಅನ್ನದಾನ ಹೀಗೆ ಅನೇಕ ಕಾರ್ಯಕ್ರಮಗಳು ತಿಂಗಳು ಪೂರ್ತಿ ನಡೆಯುತ್ತಲೇ ಇರುತ್ತವೆ. ಅಂಥದ್ದೇ ಒಂದು ಸಂದರ್ಭದಲ್ಲಿ ನಾನು ಭಾಗವಹಿಸಿದ ನೆನಪನ್ನು ಇಲ್ಲಿ ಹಂಚಿಕೊಳ್ಳುತ್ತೇನೆ.

ಯಾವುದೋ ಸಮಾರಂಭಕ್ಕೆಂದು ಊರಿಗೆ ಹೋದ ಸಂದರ್ಭದಲ್ಲಿ ರಾಜ್ಯೋತ್ಸವದಂದು ಒಂದು ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಅದೃಷ್ಟ ಎಂದೇ ಭಾವಿಸುತ್ತೇನೆ. ಅಲ್ಲಿನ ಕನ್ನಡಾಭಿಮಾನಿಗಳು ಆಚರಿಸುತ್ತಿದ್ದ ರಾಜ್ಯೋತ್ಸವದಲ್ಲಿ ಗಾಯನ ಸ್ಪರ್ಧೆ ನಡೆಯುತ್ತಿತ್ತು. ಖುಷಿಯಿಂದ ಕೇಳುತ್ತಾ ಕುಳಿತವಳಿಗೆ ನಾನೂ ಹಾಡಬೇಕೆಂಬ ಬಯಕೆ ಹುಟ್ಟಿದ್ದು ನಿಜ. ಆದರೆ ಅದು ಸ್ಪರ್ಧೆ. ಅವಾಕಾಶ ಸಿಗಲಾರದು ಎಂದು ನನಗೆ ಗೊತ್ತು. ಸ್ಪರ್ಧೆ ಮುಗಿದಮೇಲೆ ಅಂಕಗಳನ್ನು ತೀರ್ಮಾನಿಸುವ ತನಕ ಬೇರೆ ಕಾರ್ಯಕ್ರಮಗಳು ಮುಂದುವರಿದು, ಮಧ್ಯೆ ಮಧ್ಯೆ ಯಾರಾದರೂ ಆಸಕ್ತಿ ಇರುವವರು ಹಾಡಬಹುದು ಎಂದು ಧ್ವನಿವರ್ಧಕದ ಮೂಲಕ ಹೇಳಿದ್ದು ಕೇಳಿ, ತಾನೇ ತಾನಾಗಿ ಒದಗಿಬಂದ ಅವಕಾಶವನ್ನು ಬಿಡುವುದಾದರೂ ಹೇಗೇ..?
ಕನ್ನಡ ಗೀತೆಯೊಂದನ್ನು ಹಾಡುವುದರ ಮೂಲಕ ಅನಾಯಾಸವಾಗಿ ದೊರೆಯಿತು ಅವಕಾಶ.

ನಿಮಗೆ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸುವ ಆಸಕ್ತಿ ಇದೆಯೇ ಎಂದು ಅವರೇ ಕೇಳಿದಾಗಲಂತೂ ಕುಣಿದಾಡುವಷ್ಟು ಸಂತೋಷ. ನನಗೆ ತುಂಬ ಇಷ್ಟವಾದ ಹವ್ಯಾಸ ಆದ್ದರಿಂದ ಭಾಗವಹಿಸಲು ಹೆಸರು ನೋಂದಾಯಿಸಿದೆ.

ರಸಪ್ರಶ್ನೆಯಲ್ಲಿ ಭಾಗವಹಿಸಲು ಆಸಕ್ತಿ ಇರುವವರಿಗೆ ನಿಮ್ಮ ಜೊತೆಗೆ ಯಾರು ಬೇಕೋ ಆವರನ್ನು ಆಯ್ಕೆಮಾಡಿಕೊಳ್ಳುವ ಆವಕಾಶವನ್ನು ನಮಗೇ ಕೊಟ್ಟದ್ದೂ ಒಂದು ವಿಶೇಷ. ಪರಿಚಯ ಇಲ್ಲದಿದ್ದರೂ ಆಸಕ್ತಿ ತೋರಿ ಮುಂದೆ ಬಂದವರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಂಡು, ಇಬ್ಬಿಬ್ಬರ ನಾಲ್ಕು ತಂಡ ಮಾಡಿಕೊಂಡೆವು. ನನ್ನ ತಂಡದ ಹೆಸರು ಮಲ್ಲಿಗೆ. ನನ್ನ ಜೊತೆಗಾತಿ ಮಾಲ. ಅವರು ಕೇಳುವ ಪ್ರತಿ ಪ್ರಶ್ನೆಗೂ ಉತ್ತರ ಕೊಡುವ ಮೂಲಕ, ಪ್ರತಿ ಪದಕ್ಕೂ ತಡವರಿಸದೆ ಕನ್ನಡದಲ್ಲಿ ಅರ್ಥ ಹೇಳಬೇಕು ಎನ್ನುವುದು ಅಂದಿನ ವಿಷಯವಾಗಿತ್ತು. ಇಷ್ಟೆತಾನೆ ಅನ್ನಿಸಿದರೂ ಯಾವ ಪದ ಬರುವುದೋ ಗೊತ್ತಿಲ್ಲ. ಆ ಪದಕ್ಕೆ ಆರ್ಥ ತಕ್ಷಣ ಹೊಳೆಯುತ್ತದೋ ಇಲ್ಲವೋ ಗೊತ್ತಿಲ್ಲ. ಆದರೂ ಮುಂದೆ ಬಂದಾಗಿದೆ. ಪ್ರಯತ್ನ ಮಾಡೇಬಿಡುವ ಅನ್ನಿಸಿತು. ಅದು ಹೇಗೆ ನನಗೆ ಸಾಧ್ಯವಾಯ್ತೋ ಗೊತ್ತಿಲ್ಲ. ಕನ್ನಡಮ್ಮನ ಆಶೀರ್ವಾದ ಅಂದುಕೊಳ್ಳುವೆ. ಹೆಚ್ಚು ಸರಿ ಉತ್ತರಗಳನ್ನು ಕೊಡಲು ನನಗೆ ಸಾಧ್ಯವಾಯ್ತು. ನನ್ನ ತಂಡ ಮೊದಲನೇ ಬಹುಮಾನಕ್ಕೆ ಆಯ್ಕೆಯಾಯ್ತು.

ನಾನು ಏನೂ ಉತ್ತರ ಕೊಡದೇ ಇದ್ದರೂ ನಿನ್ನ ಜೊತೆ ಭಾಗವಹಿಸಿ ಮೊದಲನೇ ಬಹುಮಾನ ಪಡೆಯುವ ಸೌಭಾಗ್ಯ ನನ್ನದಾಯಿತು ಎಂದು ನನ್ನ ಜೊತೆ ಭಾಗವಹಿಸಿದ ಜೊತೆಗಾತಿಗೆ ಅತೀವ ಆನಂದ. ನನಗೂ ಅಷ್ಟೇ ಸಂತೋಷ ಆಗಿತ್ತು.

ಇಷ್ಟು ಕನ್ನಡದ ಪದಗಳು, ಆರ್ಥ ಗೊತ್ತಾಗಿದ್ದೇ ಇವರಿಂದ ಅಂದರೆ ತಪ್ಪಿಲ್ಲ. ಹಾಗಾಗಿ ಆವರನ್ನು ಕೃತಜ್ಞತಾ ಭಾವದಿಂದ ನೆನೆಯಲೇಬೇಕು. ಅವರಿಗೆ ನನ್ನ ತುಂಬು ಹೃದಯದ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಅರ್ಪಿಸುತ್ತೇನೆ.

ಅವರು ಬೇರೆ ಯಾರೂ ಅಲ್ಲ. !!
ಕನ್ನಡದ ಕಟ್ಟಾ ಅಭಿಮಾನಿ ಹಿರಿತೆರೆ ಕಿರುತೆರೆ ಕಲಾವಿದರಾದ ನಮ್ಮೆಲ್ಲರ ನೆಚ್ಚಿನ ನಟ ಸುಚೇಂದ್ರ ಪ್ರಸಾದ್ ಅವರು. ಕನ್ನಡ ಅವರ ಬಾಯಿಂದ ಕೇಳುವುದೇ ಖುಷಿ. ಅವರೊಡನೆ ಪ್ರಯಾಣ ಮಾಡುವ ಒಂದು ಸಂದರ್ಭದಲ್ಲಿ ದಾರಿ ಸವೆಸಲು ನಮಗೆ

ಒಂದು ಆಟ ಕಲಿಸಿಕೊಟ್ಟರು. ಕನ್ನಡದಲ್ಲಿ ಪ್ರತಿ ಅಕ್ಷರಕ್ಕೂ ಒಂದೊಂದು ಪದ, ಆ ಪದಕ್ಕೆ ಅರ್ಥ ಇದೆ ಎಂದು ಒಂದು ಆಟದ ಮೂಲಕ ಹೇಳಿಕೊಟ್ಟವರು. ಹಾಡುಗಳ ಅಂತ್ಯಾಕ್ಷರಿ ಕೇಳಿದ್ದುಂಟು. ಪದಗಳ ಅಂತ್ಯಾಕ್ಷರಿ ಆಟದಲ್ಲಿ ಕನ್ನಡದ ಒಂದು ಪದ ಹೇಳಿದರೆ ಆದರ ಕೊನೆಯ ಅಕ್ಷರದಿಂದ ಮತ್ತೊಂದು ಪದ ಹೇಳಬೇಕು. ಆ ಅಕ್ಷರದಿಂದ ಪದ ಇಲ್ಲ ಎನ್ನುವಂತೆಯೇ ಇಲ್ಲ. ಹೀಗೆ ಗಂಟೆಗಟ್ಟಲೆ ಅಂತ್ಯಾಕ್ಷರಿ ಮುಂದುವರಿದರೂ ಪದಗಳು ಮಾತ್ರ ಹುಟ್ಟಿಕೊಳ್ಳುತ್ತಲೇ ಇರುತ್ತವೆ. ಕೊನೆ ಎನ್ನುವುದೇ ಇಲ್ಲ. ಅಬ್ಬಬ್ಬಾ..!! ಎಷ್ಟೊಂದು ಪದಗಳಿವೆ ಎಂದು ಆಶ್ಚರ್ಯವಾಗುತ್ತದೆ. ಇಂತಹ ಅದ್ಭುತವಾದ ಆಟದ ನೆರವಿನಿಂದಲೇ ಬಹುಶಃ ನನಗೆ ಅದೇ ವರದಾನವಾಗಿ ಬಹುಮಾನ ಪಡೆಯುವ ಸುಯೋಗ ಒದಗಿಬಂತೆಂದು ಭಾವಿಸುತ್ತೇನೆ. ಪ್ರತಿ ರಾಜ್ಯೋತ್ಸವದ ದಿನದಂದು ಹಸಿರಾದ ನೆನಪು ಮನದಲ್ಲಿ ಹಾದು ಹೋಗುತ್ತದೆ. ಈ ಸಂದರ್ಭದ ಮೂಲಕ ಅವರನ್ನು ನೆನಪು ಮಾಡಿಕೊಂಡು ನಿಮ್ಮೊಂದಿಗೆ ಹಂಚಿಕೊಳ್ಳುವ ಮನಸಾಯಿತು.

ಕನ್ನಡ ಬಳಸಿದಷ್ಟೂ ಪ್ರತಿ ಅಕ್ಷರಕ್ಕೂ ಪದಗಳು ಹುಟ್ಟಿಕೊಳ್ಳುತ್ತಲೇ ಇರುತ್ತವೆ. ಕನ್ನಡದ ಪದಗಳು ಬರಿದಾಗದ ಶಬ್ದ ಭಂಡಾರ. ಕೊನೆಯಿರದ ತುದಿಯಂತೆ. ಬಗೆದಷ್ಟೂ ಬಗೆ ಬಗೆಯ ರತ್ನಗಳ ಹಾಗೆ.

ಕನ್ನಡದ ಅಬ್ಬರ ರಾಜ್ಯೋತ್ಸವಕ್ಕೆ, ನವೆಂಬರ್ ತಿಂಗಳಿಗೆ ಮಾತ್ರ ಸೀಮಿತವಾಗಿರದೆ ಸರ್ವಕಾಲಕ್ಕೂ ಕನ್ನಡವೇ ಮಂತ್ರವಾಗಲಿ ಎನ್ನುವುದೇ ಎಲ್ಲರ ಸದಾಶಯವಾಗಿರಲಿ.

***


ಕೃತಿ ಪರಿಚಯ

‘ಬದುಕು’

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕಾದಂಬರಿ

ಲೇಖಕಿ : ಡಾ. ಗೀತಾ ನಾಗಭೂಷಣ

ಪುಸ್ತಕ ಪರಿಚಯ: ಪೂರ್ಣಿಮ ಭಗವಾನ್



ಪ್ರಕಾಶಕರು : ಸಪ್ನ ಬುಕ್ ಹೌಸ್
ಪ್ರಥಮ ಮುದ್ರಣ : ೨೦೦೧
ಹನ್ನೊಂದನೇ ಮುದ್ರಣ : ಜನವರಿ ೨೦೨೩

ನಾನು ಇತ್ತೀಚಿಗೆ ಓದಿ ಮುಗಿಸಿದ ಬೃಹತ್ ಕಾದಂಬರಿ ಶ್ರೀಮತಿ ಗೀತಾ ನಾಗಭೂಷಣ್ ರವರು ಬರೆದಿರುವ "ಬದುಕು". ಉತ್ತರ ಕರ್ನಾಟಕದಲ್ಲಿ ವಾಸಿಸುತ್ತಿರುವ ಒಂದೇ ಕುಟುಂಬದ ನಾಲ್ಕು ತಲೆಮಾರುಗಳ ಜೀವನವನ್ನು ಬರಹದ ಯಾವುದೇ ಚೌಕಟ್ಟುಗಳಿಗೆ ಒಳಪಡಿಸದೆ ನೈಜವಾಗಿ, ನಿರ್ಭಿಡೆ ಯಿಂದ ವಿಶದವಾಗಿ ವಿವರಿಸಿದ್ದಾರೆ ಲೇಖಕಿ.

ಗ್ರಾಮ್ಯ ಭಾಷೆಯಲ್ಲಿ ದುರ್ಬಲ ವರ್ಗದ ಗ್ರಾಮೀಣ ಜನರ ಅಂದಿನ ಬದುಕನ್ನು ಎಳೆಎಳೆಯಾಗಿ ಬಿಡಿಸಿರುವ ಬೃಹತ್ ಕಾದಂಬರಿ "ಬದುಕು". ದೈನಂದಿನ ಆಗುಹೋಗುಗಳನ್ನು ಕೂಲಂಕಷವಾಗಿ ಅಭ್ಯಸಿಸಿ ಕುತೂಹಲ ಕಾರಿಯಾಗಿ, ಮನೋಜ್ಞವಾಗಿ, ಹಂತ ಹಂತವಾಗಿ ತೆರೆದಿಟ್ಟಿದ್ದಾರೆ. ಪ್ರತಿಯೊಂದು ಪಾತ್ರದ ಒಳಹೊಕ್ಕು ಮನದ ಭಾವನೆಗಳನ್ನು, ಹೊಯ್ದಾಟವನ್ನು ಎಳೆ ಎಳೆಯಾಗಿ ಬಿಡಿಸಿ ಓದುಗರ ಕಣ್ಣ ಮುಂದೆ ಅಂದಿನ ಜನಜೀವನದ ಸಹಜ ಚಿತ್ರಣವನ್ನು ಮೂಡಿಸಿರುತ್ತಾರೆ. ನಾಲ್ಕು ತಲೆಮಾರುಗಳ ಜನಜೀವನದ ವಿನ್ಯಾಸವನ್ನು ಪದರ ಪದರವಾಗಿ ಸುಂದರವಾಗಿ ಹೆಣೆದಿದ್ದಾರೆ. ಆರಂಭದಲ್ಲಿ ಓದಲು ತುಸು ಕಷ್ಟವೆನಿಸಿದರೂ ಕಾದಂಬರಿಯ ಭಾಷೆಯು ಪರಿಚಿತವಾಗಿ ಮುಂದೆ ಓದುತ್ತಾ ಹೋದಂತೆ ಸರಳವಾಗಿ ಸುಲಭವಾದಂತೆನಿಸಿ ಪ್ರತಿ ಹಂತದಲ್ಲೂ ಕುತೂಹಲವನ್ನು ಕಾಯ್ದಿರಿಸಿಕೊಳ್ಳುತ್ತದೆ.

ಅಸಂಖ್ಯಾತ ಘೋಷಪಡಪಟ್ಟಿಯ ಶೂದ್ರ, ದಲಿತ ಹೆಣ್ಣು ಮಕ್ಕಳಿಗೆ ಸಮರ್ಪಿತವಾದ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕಾದಂಬರಿ "ಬದುಕು", ಕೆಳವರ್ಗದ ಅನಕ್ಷರಸ್ಥ, ಅಮಾಯಕ ದಲಿತ ಹೆಂಗಸರ ಶೋಷಣೆಯನ್ನು, ಅವರೆದೆಯಲ್ಲಿ ಹೆಪ್ಪುಗಟ್ಟಿರುವ ಸಂಕಟವನ್ನು, ಅವರು ಎದುರಿಸುವ ಕಷ್ಟ ಕಾರ್ಪಣ್ಯಗಳನ್ನು ದಾಖಲಿಸಿದೆ.

ಕಾಮ, ಕುಡಿತ, ಹಸಿವು ಮೂರನ್ನೂ ಬದುಕಿನ ಅವಿಭಾಜ್ಯ ಅಂಗವಾಗಿ ಮಾಡಿಕೊಂಡಿದ್ದ ವರ್ಗದ ಜನರ ಬದುಕನ್ನು, ಅವರ ದೈನಂದಿನ ಬದುಕಿನಲ್ಲಿ ಎದುರಾಗುವ ಜ್ವಲಂತ ಸಮಸ್ಯೆಗಳನ್ನು ವಿಶೇಷ ಕಾಳಜಿಯಿಂದ ತೋರಿಸಿದ್ದಾರೆ ಲೇಖಕಿ.

ದುಡಿಯುವ ವರ್ಗದ, ಕಪ್ಪು ಮಂದಿಯ ಜೀವನದ ರೀತಿ ನೀತಿ, ರಿವಾಜು ರೂಢಿ, ಅಳು ನಗು, ಪ್ರೀತಿ ಪ್ರಣಯ, ಕಾಮ ಪ್ರೇಮ, ಹಾದರ, ಕಳವು, ಹಸಿವು, ವೈರತ್ವ, ಸಾಮಾಜಿಕ ಕಳಕಳಿ, ಇನ್ನಿತರ ಹವ್ಯಾಸಗಳನ್ನೆಲ್ಲ ಒಳಗೊಂಡಿರುವ ಸಾಂಸ್ಕೃತಿಕ ದಾಖಲೆ "ಬದುಕು". ಭಾಷೆಯ ದೃಷ್ಟಿಯಿಂದಲೂ "ಬದುಕು" ಬಹಳ ವಿಶಿಷ್ಟ. ವ್ಯವಸ್ಥೆಯ ಕ್ರೌರ್ಯಕ್ಕೆ ಬಹಳಷ್ಟು ಅನಕ್ಷರಸ್ಥ ಅಮಾಯಕ ಹೆಂಗಸರು ಬಲಿಯಾಗಿ ಹಿಂಸೆಗೀಡಾಗಿ ಶೋಷಿಸಲ್ಪಟ್ಟಿದ್ದಾರೆ. ಅದರ ದುರಂತ ಚಿತ್ರಣವನ್ನು ಸವಿಸ್ತಾರವಾಗಿ ಕಟ್ಟಿಕೊಡುವ ಬೃಹತ್ ಕಾದಂಬರಿ "ಬದುಕು".

ಪಗಡಿ ಬಜಾರ, ಚೆನ್ನಮ್ಮನ ದಂಡೆ, ಕಲಬುರ್ಗಿ ಶರಣಬಸಪ್ಪನ ತೇರು, ಸಾವಳಗಿ ಶಿವಲಿಂಗೇಶ್ವರನ ಗುಡಿ ಕಳಸಗಳ ಚಿತ್ತಾರ ಎಲ್ಲವನ್ನೂ ಒಳಗೊಂಡಿದೆ. ಸೂರ್ಯೋದಯ, ಸೂರ್ಯಾಸ್ತಗಳನ್ನು ಸುತ್ತಲಿನ ಪರಿಸರದ ಜೀವ ಜಗತ್ತಿಗೆ ಹೋಲಿಸಿರುವ ವೈಶಿಷ್ಟ್ಯ ವಿಭಿನ್ನವಾಗಿದೆ.

ಬಡವರು, ಸಿರಿವಂತರು ಅನ್ನದೇ ಎಲ್ಲ ಜಾತಿಯ ಮಂದಿಗೆ ಬೇಕಾದಾಗ ಬಂದು ನಿಂತು ಸಹಾಯಹಸ್ತ ಚಾಚುತ್ತಿದ್ದ ಹೃದಯ ಶ್ರೀಮಂತ ಜಮಾದಾರ ಮಲ್ಲಪ್ಪ. ಭೇದಭಾವವಿಲ್ಲದೆ ತೋಟದ ಆಳುಗಳಿಗೆ, ಪರಿಚಿತರಿಗೆ ಎಲ್ಲರಿಗೂ ಮನೆಯವರಂತೆಯೇ ಒಂದೇ ತೆರನಾದ ಗಟ್ಟಿಯಾದ ಚಹ, ಊಟತಿಂಡಿ ಒದಗಿಸುವ ಧಾರಾಳ ಸ್ವಭಾವ. "ಮಠಕ್ಕೆ ಹೊಂಟೀನಿ, ಕುಡಿದು ಹೋಗಬಾರದು ಮಗಾ" ಎನ್ನುವ ಶಿಸ್ತು, ನಿಯಮ ಪಾಲನೆ.

ಜಮಾದಾರ ಮಲ್ಲಪ್ಪನ ಅವ್ವ ಸಿದ್ದವ್ವನ ಗರ್ಭಪಾತವನ್ನು "ಅನೇಕ ಬಾರಿ ಬಸಿರಾದರೂ ಸಹ ಮೂರು ತಿಂಗಳು, ನಾಲ್ಕು ತಿಂಗಳು, ಐದು ತಿಂಗಳು ತುಂಬುವುದರ ಒಳಗೇ ಆಕೆಯ ಮೈಯಾಗಿನ ಜಕಣಿ ದೆವ್ವ ಆಕೆಯ ಕಿಬ್ಬೊಟ್ಟೆಯಾಗಿನ ಹಸಿ ಫಲಾನೇ ತಿಂದು ನುಂಗಿ ನೀರು ಕುಡಿದು ಬಿಡುತ್ತಿತ್ತಂತೆ" ಎನ್ನುತ್ತಾರೆ. ಹೊರಳಾಡಿ, ಅತ್ತುಕರೆದು, ನರಳಾಡಿ ಒಂದು ದಿನ ಸಿದ್ದವ್ವ ಮುತ್ತೈದೆಯಾಗಿ ತೀರಿಹೋದಳು. ಅಪ್ಪ ಪರಮೇಸೂರ ಮಗನನ್ನು ಅಂಗೈಯಲ್ಲಿನ ಲಿಂಗದ ಹಾಗೆ ಬೆಳೆಸಿ, ಮಗನಿಗೋಸ್ಕರ ಇನ್ನೊಂದು ಮದುವೆಯಾಗದೆ ದೈಹಿಕ ಬಯಕೆ ತೀರಿಸಲು ಜೋಗಣಿ ಲಕ್ಕವ್ವನ ಮಗ್ಗುಲಿಗೆ ಹೋದ ವಿಷಯ ಹಳ್ಳಿಯಲ್ಲೆಲ್ಲಾ ಗುಲ್ಲಾಯಿತು.

ಕೆಮ್ಮು, ಹಾದರಗಳು ಬಹಳ ದಿನ ಮುಚ್ಚಿಡಲು ಆಗುವುದಿಲ್ಲ ಎನ್ನುವಂತೆ ಜಮಾದಾರ ಮಲ್ಲಪ್ಪನ ಸಂಸಾರದ ಹೊರಗಿನ ಹೆಂಗಸರ ಚಾಳಿ ತಿಳಿದ ಪತ್ನಿ ಮಲ್ಲವ್ವ ಅತ್ತೂ ಕರೆದು ಗಲಾಟೆ ಮಾಡಿದರೂ ಸಹ ಏನೂ ಪ್ರಯೋಜನವಾಗಲಿಲ್ಲ. ಮಲ್ಲವ್ವ ಬಸಿರಾದ ಮೇಲೆ ಮಲ್ಲಪ್ಪನ ಹೊರಗಿನ ಹೆಂಗಸರ ಚಾಳಿ ನಿಂತುಹೋಗಿ ಗಂಡ ಹೆಂಡತಿ ಇಬ್ಬರೂ ಅನ್ಯೋನ್ಯವಾಗಿ ಸಂಸಾರ ಮಾಡುತ್ತಿದ್ದರು.

ಗಂಡ ಹೆಣ್ತೀದು ಏಳೇಳು ಜನುಮದ ಸಂಬಂಧ ಅಂತಾರಲ್ಲ ಅದೆಲ್ಲ ಸುಳ್ಳು, ಪಿರೀತಿ ಸಂಬಂಧದ ಮುಂದೆ ಈ ಮದವಿ ಸಮ್ಮಂದಂಬಾದು ಕಾಸಿನ ಕಿಮ್ಮತ್ತಿಲ್ಲ ಎನ್ನುವ ಕಾಶಮ್ಮ. ಗಂಡ "ಮಾರ್ತಾಂಡನ ಪ್ರೀತಿ ಜಾಸ್ತಿ ಆದಂಗೆಲ್ಲ ಯಾಕೋ ನನಗ ಅವನ ಮ್ಯಾಲ ಸಿಟ್ಟು ಬರ್ಲಕ್ ಶುರುವಾಯಿತು" ಎನ್ನುತ್ತಾಳೆ. "ಕಡೆ ಸರ್ತಿ ನನ್ನ ಕಾಶಿ ಮಾರಿ ನೋಡಕ್ಕೆ ಅನು ಮಾಡಿಕೊಡು ಅಣ್ಣ" ಎಂದು ಬೇಡಿಕೊಳ್ಳುವ ಮಾರ್ತಾಂಡ.

"ಪಿರೀತಿ ಇಸ್ವಾಸ, ಮಾಯಾ, ಮಮತಾದ ಮುಂದ ಈ ಕುಲ ಜಾತಿಗೇನೂ ಕಿಮ್ಮತ್ತಿಲ್ಲಂತ" ಸಾಬೀತು ಮಾಡುವ ಫತರೂ. ಗಂಡನ ನೆರಳಾಗಿ ನಡಿಯೋ ಗರತಿ ಫಾತಿಮಾ.

ಸಾವ್ಕಾರ ಗುರ್ಲಿಂಗಪ್ಪನ ಮಗ ಲಿಂಗರಾಜನ ಪ್ರೇಮದ ಸುಳಿಯಲ್ಲಿ ಸಿಲುಕಿ ಅತೀವವಾಗಿ ಪ್ರೀತಿಸುತ್ತಿದ್ದ ಪತಿ ಮಾರ್ತಾಂಡನನ್ನು ಬಿಟ್ಟು ತಾಯ್ತಂದೆಯರು ಇದ್ದ ಹಳ್ಳಿಯಲ್ಲೇ ಲಿಂಗರಾಜನ ತೋಟದ ಮನೆಯಲ್ಲಿ ಇರಲು ಬಂದ ಕಾಶಮ್ಮ. ಕಾಶಮ್ಮನ ಪ್ರೀತಿ ಪ್ರೇಮದ ಇತಿಹಾಸ ತಿಳಿದೂ ತಿಳಿದೂ ಬೋಳೇ ಮನುಷ್ಯ ಮಾರ್ತಾಂಡನಿಗೆ ಮದುವೆ ಮಾಡಿಕೊಟ್ಟ ಭಾವ ಹಾಲಪ್ಪನ ಕರುಳು ಚುರ್ ಎಂದಿತ್ತು.

"ಈ ಸಮಯ ಎಂಬುದು ಎಲ್ಲರಕ್ಕಿಂತ ದೊಡ್ಡ ಡಾಕ್ಟರ್ ಸಾಹೇಬ ನೋಡು, ದಿನಗಳದಂಗೆಲ್ಲ ಎಲ್ಲಾ ಗಾಯಗೊಳಿಗೆ ಮುಲಾಮು ಹಚ್ಚಿ ಆರಾಮ ಮಾಡಿದೆ" ಎನ್ನುವಳು ಮಲ್ಲಪ್ಪ ಕೂಡಿಕೆ ಮಾಡಿಕೊಂಡು ಸಾಯುವವರೆಗೂ ಜೊತೆಯಾಗಿದ್ದ ಈರವ್ವ.

ಕೆಂಪಗೆ ಬಾಣಂತಿ ಅಗ್ಗಿಷ್ಟಿಯೊಳಗಿನ ಕೆಂಡದಂಗಿದ್ದ ಸೂರ್ಯ ಹಳದಿಯಾಗಿ ಬೆಳ್ಳಗಾಗಲಿಕ್ಕತ್ತಿದ್ದ. ಕೋಳಿಗಳು ತಮ್ಮ ತಮ್ಮ ಹಿಂಡು ಮರಿಗಳೊಂದಿಗೆ ಹಿತ್ತಲಲ್ಲಿ ತಿಪ್ಪೆ ಕೆದರುತ್ತಿದ್ದವು. ಅಂಗಳದಲ್ಲಿ ಚೆಲ್ಲಾಡಿದ್ದ ಮುಸ್ಸಂಜೆಯ ರಂಗು ರಂಗಿನ ಬೆಳಕು ಮಸುಕಾಗುತ್ತಾ ಕಪ್ಪು ಕವಿಯತೊಡಗಿತ್ತು. ಅಂಗಳದ ಆಚೆಗಿದ್ದ ಗಿಡಮರಗಳು ಮುದ್ದೆಯಾಗತೊಡಗಿದ್ದವು. ಬೆಳಗು ಮೈ ಒಡಮುರಿದು ಆಕಳಿಸಿ ಕಣ್ಣು ತೆರೆಯಿತು.

ಪ್ರಣಯದ ಆಟದಲ್ಲಿ ತೊಡಗಿದ್ದ ಕಾಡು ಬೆಕ್ಕಿನ ಜೋಡಿಯೊಂದು ಕೆಂಗಣ್ಣು ಮಾಡಿ ತಕರಾರು ತೆಗೆದು ಸಿಟ್ಟಿನಿಂದ ಸರಿದು ಹೋಯಿತು. ಹೀಗೆ ಅಲ್ಲಲ್ಲಿ ಸುಳಿಯುವ ಅಲಂಕಾರಗಳು.

ಒಟ್ಟಾರೆಯಾಗಿ ಹೇಳುವುದಾದರೆ ಒಮ್ಮೆ ಓದಿ ಮತ್ತೆ ಮತ್ತೆ ಮೆಲುಕು ಹಾಕುವ ಉತ್ತಮ ಕಾದಂಬರಿ ಬದುಕು

***

ಸಣ್ಣ ಕತೆ

ಭುವನೇಶ್ವರಿಯ ಕನಸು

– ನಾಗರತ್ನ ಚಂದ್ರಶೇಖರ

"ಅಮ್ಮ ಕವನ, ಒಂದು ಲೋಟ ತಣ್ಣಗಿರೋ ನೀರು ತಂದುಕೊಡು ಮಗಳೇ" ಪೊನ್ನಪ್ಪ ಮಾಸ್ಟರ್ ಬೆವರೊರೆಸುತ್ತ ಮನೆಯೊಳಗೇ ಬರುತ್ತಲೇ, ಮಗಳನ್ನು ನೀರು ತರಲು ಕೂಗಿದರೆ ಬಂದವಳು ಅವರ ಹೆಂಡತಿ ಭುವನೇಶ್ವರಿ, ಅರ್ಥಾತ್ ಭುವನ. ಗಂಡನ ಕೈಗೆ ನೀರು ತುಂಬಿದ ಗಿಂಡಿ ಕೊಟ್ಟು ಅವನ ಕೈಲಿದ್ದ ತುಂಬಿದ ಚೀಲವನ್ನು ತೆಗೆದುಕೊಂಡಳು. "ಕವನ ಬೆಳಗ್ಗೆನೇ ಗಂಡನ ಮನೆಗೆ ಹೋದ್ಲು, ಹಬ್ಬದ ಕೆಲಸ ಇದೆ, ಮಕ್ಳು ಸ್ಕೂಲಿಂದ ಬರುವಷ್ಟರಲ್ಲಿ ಮುಗಿಸಬೇಕು ಅಂತ." ಚೀಲದಿಂದ ಒಂದೊಂದೇ ಸಾಮಾನುಗಳನ್ನು ತೆಗೆದು ಟೇಬಲ್ ಮೇಲೆ ಇಡತೊಡಗಿದಳು. ಒಂದೆರಡು ಸೇಬು, ಎರಡು ಸೀಬೆ, ಒಂದು ಚಿಪ್ಪು ಬಾಳೆಹಣ್ಣು, ಸುಮಾರಾಗಿದ್ದ ಒಂದು ದಾಳಿಂಬೆ, ಕೊಟ್ಟಕೊನೆಗೆ ಸಿಕ್ಕಿದ್ದು ಒಂದು ಶಾಲು ಹಾಗೂ ಕಾಗದದ ಕವರಿನಲ್ಲಿದ್ದ 500 ರೂಪಾಯಿ. ಕವರಿನಲ್ಲಿದ್ದ ದುಡ್ಡನ್ನು ಗಂಡನತ್ತ ನೀಡುತ್ತಾ ಅವನ ಮುಖ ನೋಡಿ ಒಂದು ತರಹ ನಕ್ಕಳು. "ಹಣ್ಣುಗಳು ವಾರಕ್ಕಾಗೋ ಅಷ್ಟೇನೋ ಇವೆ. ಆದರೆ ಈ 500 ರೂಪಾಯಿ?"

"ಅದು ನನ್ನ ಪ್ರಯಾಣದ ಖರ್ಚು. ಪಾಪ, ಆ ಸಂಘದವರು ಅಷ್ಟು ಕೊಟ್ಟಿದ್ದೆ ಹೆಚ್ಚು. ನನಗೆ ಗೊತ್ತಿತ್ತು. ಅದಕ್ಕೇ ನಾನು ಸಿಟಿ ಬಸ್ನಲ್ಲಿ ಹೋಗಿ ಬಂದಿದ್ದು. ಆಟೋನೋ ಟ್ಯಾಕ್ಸಿನೋ ಆಗಿದ್ರೆ ಸಾವಿರ ರೂಪಾಯಿನೇ ಬೇಕಾಗುತ್ತಿತ್ತು". ಪೂರ್ತಿ ನೀರು ಕುಡಿದು ಫ್ಯಾನ್ ಕೆಳಗೆ ಕೂತು ಬೆವರೊರಸಿಕೊಳ್ಳತೊಡಗಿದರು, ಪೊನ್ನಪ್ಪ.

"ಆ ಐನೂರು ರೂಪಾಯಿ ನೀನೇ ಇಟ್ಕೊ. ಕವನಗೆ ಕೊಟ್ಟಿಡು. ಹಬ್ಬಕ್ಕೆ ಏನಾದರೂ ತಗೊಳ್ತಾಳೆ".

"ಹುಂ.. ಹಬ್ಬಕ್ಕೆ ರೂ.500ಕ್ಕೆ ನಂಗೊಂದು ಸೀರೆ, ಅವಳಿಗೂ ಒಂದು ಸೀರೆ, ನಿಮಗೊಂದು ಶರ್ಟು, ಎಲ್ಲಾ ತಗೊಂಡು ಮಿಕ್ಕಿದಕ್ಕೆ ಒಂದು ಕೆ.ಜಿ. ಮೈಸೂರ್ ಪಾಕು ತಗೋಳ್ತೀವಿ ಬಿಡಿ". ಗಂಡನ ಮಾತಿಗೆ ಮೂತಿ ಸೊಟ್ಟ ಮಾಡಿ ನಕ್ಕಳು ಭುವನ. ಅವಳ ವ್ಯಂಗ್ಯದ ಮಾತುಗಳು ಅವರಿಗೆ ಹೊಸದಲ್ಲ. ಅವರ ಸಾಹಿತ್ಯದ ಶಕ್ತಿ, ಸಾಮರ್ಥ್ಯಗಳ ತೂಕದ ಪರೀಕ್ಷೆ ಆದಾಗಲೆಲ್ಲಾ ಇಂಥ ಮಾತುಗಳನ್ನು ಕೇಳುತ್ತಲೇ ಇದ್ದರು.

ಹೊನ್ನಪ್ಪ ಮಾಸ್ಟರ್‌ಗೆ ರಿಟೈರ್ ಆದಮೇಲೆ ಕೈ ತುಂಬಾ ಪಿಂಚಣಿ ಏನೋ ಬರುತ್ತಿತ್ತು. ಸ್ವಂತ ಮನೆ, ಒಬ್ಬಳೇ ಮಗಳು, ಒಬ್ಳೇ ಹೆಂಡ್ತಿ! ಸಾಹಿತ್ಯದ ಸಾಂಗತ್ಯ ಸಂತೃಪ್ತಿಯ ಬದುಕು ಮನೆ ಮೂಲೆ ಮೂಲೆಗಳಲ್ಲೂ ಪುಸ್ತಕಗಳ ರಾಶಿ. ಅದರಲ್ಲಿ ಇವರು ಬರೆದಿದ್ದು ಮಾತ್ರ ಬೆರಳೆಣಿಕೆ ಅಷ್ಟೇ. ಮೂವತ್ತು ವರ್ಷಗಳ ಹಿಂದೆ ಅವರ ಮೊದಲ ಕವನ ಪ್ರಕಟವಾದ ಮೇಲೆ ಹುಟ್ಟಿದ ಮಗಳಿಗೆ ಕವನ ಅಂತಲೇ ಹೆಸರಿಟ್ಟಿದ್ದರು. ಕವನ ಏನೋ ಬೆಳಿತಾ ಇದ್ಳು. ಆದರೆ ಕವನ ಬರೆಯುವ ಆಸಕ್ತಿ ಮಾತ್ರ ಆನಂತರ ಇವರಿಗೆ ಕಡಿಮೆ ಆಯಿತು. ಕವನಕ್ಕಿಂತ ಕಥೆ, ಕಾದಂಬರಿ ಬರೆಯೋದೇ ಹೆಚ್ಚು ಲಾಭ ಅಂತ ಇವರಿಗೆ ಅನಿಸಿದ್ದು ನಿಜಾನೆ. ಪಂಪ, ರನ್ನ, ಜನ್ನ, ಪೊನ್ನರಂತಹ ಕವಿಗಳು ಜನಿಸಿದ ಕರುನಾಡಿನಲ್ಲಿ ಪೊನ್ನ ಅಂತ ಹೆಸರಿಟ್ಕೊಂಡಿರೋದೇ ತಮಗೆ ಸಿಕ್ಕ ಭಾಗ್ಯ ಎಂದುಕೊಂಡರು.

ತಮಿಳು ಹುಡುಗರೇ ಹೆಚ್ಚಾಗಿ ತುಂಬಿದ್ದ ಶಾಲೆಯಲ್ಲಿ ಕನ್ನಡದ ಮಾಸ್ತರಿಕೆ ಮಾಡುವಾಗಲೆಲ್ಲ ತಮ್ಮ ಎಣೆ ಇಲ್ಲದ ಭಾಗ್ಯವನ್ನು ನೆನೆದು ಭಾವುಕರಾಗುತ್ತಿದ್ದರು. ಕನ್ನಡ ಕಲಿಯದ ಮಕ್ಕಳಿಗೆ ತಮಿಳು ಬಾರದ ಮೇಷ್ಟ್ರು. ಹಠ ಬಿಡದ ತಿವಿಕ್ರಮನಂತೆ, ಆ ಮಕ್ಕಳು ಪರೀಕ್ಷೆಯಲ್ಲಿ ಪಾಸಾಗುವ ತನಕ ಬೆನ್ನು ಬಿಡದ ಬೇತಾಳದ ದಿನಚರಿ ಇವರದು.

ಪ್ರತಿ ವರ್ಷ ನವೆಂಬರ್ ತಿಂಗಳಿಡೀ ಪೊನ್ನಪ್ಪ ಮಾಸ್ತರಿಗೆ ವಸಂತಕಾಲ. ಸಭೆ ಸಮಾರಂಭಗಳು, ಸನ್ಮಾನಗಳು ಹೀಗೆ ಹುಡುಕಿಕೊಂಡು ಬಂದಾಗಲೆಲ್ಲ ಅವರಿಗೆ ತಾವು ಒಬ್ಬ ಸಾಹಿತಿ ಎನ್ನುವುದು ನೆನಪಾಗುತ್ತಿತ್ತು. ಹಣ್ಣು, ಹೂವು, ಹಾರ, ಶಾಲುಗಳು ಮನೆಗೆ ಬಂದಾಗ ಭುವನೇಶ್ವರಿಯ ಮುಖವೂ ಇಷ್ಟಗಲ.

ಯಾವಾಗಾದರೂ ಒಮ್ಮೆ ಹಳ್ಳಿಗೆ ಹೋದಾಗ ಅಲ್ಲಿದ್ದ ತಮ್ಮನ ಮಕ್ಕಳು, ಮೊಮ್ಮಕ್ಕಳಿಗೆಲ್ಲ ಪೆಟ್ಟಿಗೆಯಲ್ಲಿ ಜಮಾಯಿಸಿಟ್ಟ ಶಾಲುಗಳಲ್ಲಿ ಐದಾರನ್ನು ಕೊಟ್ಟು ಬರುತ್ತಿದ್ದರು. ಹಳ್ಳಿ ಮನೆಯಲ್ಲಿದ್ದ ಆ ಮಕ್ಕಳು ಬಣ್ಣ ಬಣ್ಣದ ಶಾಲುಗಳಿಂದ ಲಂಗ, ಫ್ರಾಕ್ ಇತ್ಯಾದಿಗಳನ್ನು ಟೈಲರ್ ರಾಮಣ್ಣನಿಂದ ವಿಶಿಷ್ಟವಾಗಿ ಹೊಲಿಸಿಕೊಳ್ಳುತ್ತಿದ್ದರು ಕೂಡ. ಮಗಳು ಕವನಗಳಿಗೆ ಶಾಲುಗಳೆಂದರೆ ಅದು ಯಾಕೋ ಅಲರ್ಜಿ. ಮನೆಯ ಬೆಡ್ ಶೀಟು, ಕಿಟಕಿ, ಬಾಗಿಲುಗಳಿಗೆಲ್ಲ ಅವುಗಳಿಂದಲೇ ಅಲಂಕಾರ ಮಾಡುವ ತಾಯಿಯದು ಉಳಿತಾಯವೋ ಇಲ್ಲ ಕಲಾ ಪ್ರೌಢಿಮೆಯೋ? ಅಂತೂ ಅವಳಮ್ಮ ಭುವನೇಶ್ವರಿ ಎಂದು ಹೆಸರಿಟ್ಟು ಕೊಂಡಿದ್ದು ಸಾರ್ಥಕ ಎಂದು ಅಕ್ಕಪಕ್ಕದವರು ಹಿಂಬದಿ ಆಡಿಕೊಳ್ಳುತ್ತಿದ್ದುದು ಅವಳ ಕಿವಿಗೆ ಬಿದ್ದಿತ್ತು.

"ಅಲ್ರೀ.. ಯಾರ್ ಯಾರಿಗೋ ರಾಜ್ಯೋತ್ಸವದ ಪ್ರಶಸ್ತಿ ಕೊಡುತ್ತಾರಲ್ಲ. ಪಾಪ ನಿಮ್ಮೆಜಮಾನ್ರಿಗೆ ಒಂದು ಸಾರಿನಾದ್ರೂ ಕೊಡಬೇಡವೆ?" ಎಂದು ಕುಟುಕುವ ಮಂದಿಗೆ ಕಡಿಮೆ ಇರಲಿಲ್ಲ. ಪಾಪ ಅವಳಿಗೂ ಮದುವೆಯಾಗುವ ಮುಂಚೆ ಗೊತ್ತಿರಲಿಲ್ಲ ತನ್ನ ಗಂಡ ಒಬ್ಬ ಸಾಹಿತಿಯೆಂದು. ಮನೆಗೆ ತಿಂಗಳ ದಿನಸಿ ಸಾಮಾನಿನ ಪಟ್ಟಿಯನ್ನು ಕಾಗುಣಿತ ತಪ್ಪಿಲ್ಲದೆ ಬರೆಯುವಷ್ಟು ಜಾಣತನವಷ್ಟೆ ಅವಳದು. ಸಾಹಿತ್ಯದ ಗಂಧಗಾಳಿ ಇಲ್ಲದಿದ್ದರೂ ಗಂಡ ಬರೆದು ಬರೆದೂ ದಬಾಕುತ್ತಿದ್ದ ಕಾಗದ ತುಂಡುಗಳನ್ನೆಲ್ಲ ಆಶ್ಚರ್ಯದಿಂದ, ಕುತೂಹಲದಿಂದ ಹಾಗೂ ತಾಳ್ಮೆಯಿಂದ ರದ್ದಿಗೆ ಬಿಸಾಡದೆ ಜೋಪಾನವಾಗಿ ತೆಗೆದು ಇಡುತ್ತಿದ್ದಳು. ಮೊನ್ನೆ ಮೊನ್ನೆ ಟಿವಿಯಲ್ಲಿ ಯಾರಿಗೋ ಸನ್ಮಾನ ಮಾಡುತ್ತಾ ಆಯೋಜಕರು ಹೇಳುತ್ತಿದ್ದ ಮಾತು "ಎಲ್ಲಾ ಪುರುಷ ಸಾಧಕರ ಯಶಸ್ಸಿನ ಹಿಂದೆ ಅವರ ಹೆಂಡತಿಯರು ಇರುತ್ತಾರೆ" ಎಂದು. ಇದಕ್ಕೇ ಇರಬೇಕು. ಗಂಡ ಭಾಗವಹಿಸಿದ್ದ ಸಮಾರಂಭದ ಫೋಟೋ ಪತ್ರಿಕೆಯಲ್ಲಿ ಕಂಡಾಗಲೆಲ್ಲಾ ಒಳಗೊಳಗೆ ಬೀಗುತ್ತಿದ್ದಳು. ಅಕ್ಕಪಕ್ಕದವರಿಗೆ ತಪ್ಪದೇ ಸುದ್ದಿ ಸಚಿತ್ರವಾಗಿ ಬಿತ್ತರವಾಗುತ್ತಿತ್ತು ಕೂಡ.

‘‘ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರತಿ ವರ್ಷ ಕೊಡುವರಲ್ಲ, ಆಗ ಕೈ ತುಂಬಾ ಹಣ, ಕೊರಳಿಗೆ ಚಿನ್ನದ ಪದಕ ಹಾಕುವುದು ಏಕೆ ಗೊತ್ತೇ? ಈ ಸಾಹಿತಿಗಳೆಲ್ಲಾ ಹೆಂಡತಿಯರಿಗೆ ಆಗಾಗ ಬರಿ ಬಾಯಿ ಮಾತಿನಲ್ಲೇ ಚಿನ್ನ, ರನ್ನ, ಅಂತ ಕಾಗೆ ಹಾರಿಸುತ್ತಿದ್ದರೆ, ಈಗಲಾದರೂ ಅವರಿಗೆ ಹಾಕಿದ ಚಿನ್ನದ ಪದಕ ಕೊಡಲಿ’’ ಎಂದವಳು ಭುವನೇಶ್ವರಿಯ ಆಪ್ತ ಗೆಳತಿ ಪದ್ಮ. ಇನ್ನು ಆ ಪಕ್ಕದ ಮನೆ ಪರಿಮಳ ಏನ್ ಹೇಳ್ತಾಳೆ ಗೊತ್ತಾ? "ರೀ.. ಭುವನ, ನಿಮ್ಮೆಜಮಾನ್ರು ಅಷ್ಟೊಂದು ಬರೀತಾರೆ. ಅಲ್ಲಿ ಇಲ್ಲಿ ಸನ್ಮಾನ, ಅದೂ ಇದು ಅಂತ ಹೋಗ್ತಾನೆ ಇರ್ತಾರೆ. ಒಂದು ಸರಿನಾದರೂ ನೀವ್ಯಾಕೆ ಅವರ ಜೊತೆ ಹೋಗಲ್ಲ?" ಅಂತ. ಪಾಪ ಎದುರುಗಡೆ ಹೆಂಡ್ತಿ ಇದ್ರೆ ಪೊನ್ನಪ್ಪ ಮಾಸ್ತರಿಗೆ ಭಾಷಣ ಮಾಡಕ್ಕೆ ಬಾಯೇ ಬರಲ್ಲ ಅನ್ನೋ ಸತ್ಯ ಯಾರಿಗೂ ಗೊತ್ತಿಲ್ಲ ಸದ್ಯ. ಎಸ್.ಎಸ್.ಎಲ್.ಸಿ ಫೇಲ್ ಆಗಿದ್ದ ಭುವನೇಶ್ವರಿಗೆ ಅಡಿಗೆಗೆ ಉಪ್ಪು, ಹುಳಿ, ಖಾರ ಎಷ್ಟೆಷ್ಟು ಹಾಕ್ಬೇಕು ಅನ್ನೋ ಪಾಕವಿದ್ಯೆಯಲ್ಲಿ ಪರಿಣಿತಿ ಇದ್ದ ಹಾಗೆ, ಗಂಡನ ಕಾವ್ಯಕನ್ನಿಕೆಯರ, ಕಥಾನಾಯಕಿಯರ ಪರಿಚಯ ಮಾಡಿಕೊಳ್ಳುವ ಆಸೆಯೋ, ಆಸಕ್ತಿಯೋ ಇರಲಿಲ್ಲ. ಇದ್ದದ್ದು ಒಂದೇ ಒಂದು ಆಸೆ. ಗಂಡನಿಗೆ ಬೇಗ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸಿಗಲಿ ಎಂದು. ಕೈ ತುಂಬಾ ಹಣ ಅವರೇ ಇಟ್ಟುಕೊಳ್ಳಲಿ. ಆದರೆ ಅವರ ಕೊರಳಿಗೆ ಹಾಕಿದ ಚಿನ್ನದ ಪದಕ ತನಗೆ ಸಿಗುವಂತಾಗಲಿ ಎಂದು. ಎಲ್ಲಾ ಪುರುಷರ ಯಶಸ್ಸಿನ ಹಿಂದೆ ಹೆಣ್ಣುಮಕ್ಕಳು ಇರುತ್ತಾರೆ ಎನ್ನುವ ಸತ್ಯ ನಿಜವಾಗಬೇಕಲ್ಲವೆ? ಭುವನೇಶ್ವರಿಯ ಆಸೆ, ಕನಸು ಮುಂದಿನ ವರ್ಷಕ್ಕಾದರೂ ನೆರವೇರಲಿ ಎಂದು ಹಾರೈಸೋಣವೇ?

***

ಜಾನಪದ ಕತೆಗಳು

– ವಿಠ್ಠಲ ಇಜೇರಿ

ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲಿ ಜಾನಪದದ ಹಿನ್ನೆಲೆ ಇರುತ್ತದೆ. ಜಾನಪದ ಸಂಸ್ಕೃತಿ ಸ್ವಾರಸ್ಯಮಯವಾಗಿರುತ್ತದೆ. ಅದರಲ್ಲಿ ಹಾಡುಗಳು, ನರ್ತನ, ಕತೆಗಳು, ಆಟಗಳು ಇತ್ಯಾದಿ ಗುರುತಿಸಿಕೊಳ್ಳುತ್ತವೆ. ಈ ಸಮಯದಲ್ಲಿ ಅಮೇರಿಕಾದಲ್ಲಿ ವ್ಯಾಪಕವಾಗಿ ಆಚರಿಸಲಾಗುತ್ತಿರುವ ಹಾಲೋವಿನ್ ಅದೊಂದು ರೀತಿಯ ಪಿತೃ ಪಕ್ಷದ ಆಚರಣೆಯಂತಿದ್ದರೂ ಅದೊಂದು ಜಾನಪದ ಆಚರಣೆಯೇ. ಜಾನಪದ ಸಾಹಿತ್ಯದಲ್ಲಿ ಕಥೆ ಹೇಳುವುದು, ಕತೆ ಕೇಳುವುದು, ಕತೆ ಬರೆಯುವುದು ಒಂದು ಸಾಮಾನ್ಯ ಮತ್ತು ಸಹಜ ಪ್ರಕ್ರಿಯೆ. ಮನುಷ್ಯನ ಮನಸ್ಸನ್ನು ಹಗುರುಗೊಳಿಸಿ ಮುಂದಿನ ಕಾರ್ಯಕ್ಕೆ ಅವನಲ್ಲಿ ಸ್ಫೂರ್ತಿ ತುಂಬುವಲ್ಲಿ ಕತೆಗಳ ಪಾತ್ರ ಹಿರಿದು. ಒಂದೆಡೆ ಮನೋರಂಜನೆ ಒದಗಿಸಿದರೆ, ಅದರೊಂದಿಗೆ ನೀತಿ, ತತ್ವ, ಮನೋವಿಕಾಸ ಹೀಗೆ ಬಹು ಪ್ರಯೋಜನಕಾರಿ ಅಂಶಗಳು ಜೊತೆಗೂಡಿರುತ್ತವೆ. ಜಾನಪದ ಕಥೆಗಳಿಗೆ ನಿಜ ಜೀವನದ ನಿಯಮಗಳು ಅನ್ವಯವಾಗುವುದಿಲ್ಲ. ಇಲ್ಲಿ ಪ್ರಾಣಿ ಪಕ್ಷಿಗಳು ಮಾತಾಡುತ್ತವೆ. ಅತಿಮಾನುಷ ಘಟನೆಗಳು ನಡೆಯುತ್ತವೆ. ಕಲ್ಪನೆಯ ಪ್ರಸಂಗಗಳು ಸಂಭ್ರಮಿಸುತ್ತವೆ. ಮಾಯೆ, ಮಂತ್ರ, ಅತೀಂದ್ರಿಯ ಶಕ್ತಿಗಳು ಗೋಚರವಾಗುತ್ತವೆ. ಕತೆಯಲ್ಲಿ ಬರುವ ಸನ್ನಿವೇಶಗಳು ಹೇಗೇ ಇದ್ದರೂ ಉದ್ದೇಶ ಸ್ಪಷ್ಟವಾಗಿ ಮೇಲೆ ತಿಳಿಸಿದ ಸದುದ್ದೇಶವೇ ಆಗಿರುತ್ತದೆ. ಈಗ 'ದೇಶ ವಿದೇಶಗಳ ಸ್ವಾರಸ್ಯಕರ ಕತೆಗಳು' (ಸಂಗ್ರಹ, ಡಾ.ಬಿ. ಆರ್. ಸುಹಾಸ್, ಪ್ರಕಟಣೆ, ಸಪ್ನಾ ಬುಕ್ ಹೌಸ್) ಈ ಪುಸ್ತಕದಲ್ಲಿಯ 'ಧೂರ್ತ ಭಿಕ್ಷುಕ' ಎಂಬ ಶ್ರೀಲಂಕಾ ಕತೆಯನ್ನು ನೋಡೋಣ.

ಒಂದು ಹಳ್ಳಿಯಲ್ಲಿ ಜಮೀನುದಾರ ಗಂಡ ಹೆಂಡತಿ ವಾಸವಿದ್ದರು. ಅವರ ಮನೆಯಲ್ಲಿ ಕಲುಹಮಿ ಎಂಬ ಕೆಲಸದ ಹೆಂಗಸು ಇದ್ದಳು. ಆಕೆ ಬಹಳ ಶ್ರಮಜೀವಿ ಮತ್ತು ಪ್ರಾಮಾಣಿಕಳಾಗಿದ್ದಳು. ಜಮೀನುದಾರರು ಮತ್ತು ಅವನ ಹೆಂಡತಿಗೆ ಆಕೆಯ ಮೇಲೆ ತುಂಬಾ ವಿಶ್ವಾಸ. ಒಮ್ಮೆ ಕಳ್ಳನೊಬ್ಬ ಜಮೀನುದಾರರ ಮನೆಗೆ ನುಗ್ಗಲು ಯತ್ನಿಸಿದಾಗ ಕಲುಹಮಿ ದಿಟ್ಟತನದಿಂದ ಅವನನ್ನು ಹೊಡೆದು ಓಡಿಸಿದ್ದಳು. ಅಂದಿನಿಂದ ಯಾವ ಅನಪೇಕ್ಷಿತ ವ್ಯಕ್ತಿಯೂ ಆ ಮನೆಯತ್ತ ಸುಳಿಯುತ್ತಿರಲಿಲ್ಲ. ಆದರೆ ದುರ್ದೈವದ ಸಂಗತಿ ಏನೆಂದರೆ ಆಕೆ ಅಕಸ್ಮಾತ್ತಾಗಿ ತೀರಿಕೊಂಡಳು. ಈ ಘಟನೆಯನ್ನು ತಿಳಿದ ಕಳ್ಳ, ಭಿಕ್ಷುಕನ ವೇಷ ಧರಿಸಿ ಭಿಕ್ಷೆಗೆ ಬಂದ. ಜಮೀನುದಾರನ ಹೆಂಡತಿ ತುಂಬಾ ಮುಗ್ಧೆ. ಅವನಿಗೆ ಭಿಕ್ಷೆ ನೀಡುತ್ತಾ "ಎಲ್ಲಿಂದ ಬಂದೆಯಪ್ಪ?" ಎಂದು ಪ್ರಶ್ನಿಸಿದಳು. ಅವನು ಧೂರ್ತ. "ಅಮ್ಮಾ, ನಾನು ಪರಲೋಕದಿಂದ ಬಂದಿರುವೆ" ಅಂದ. ಜಮೀನುದಾರನ ಪತ್ನಿ "ಹೌದೇ? ಅಲ್ಲಿ ನಮ್ಮ ಕಲುಹಮಿಯನ್ನು ಕಂಡಿರುವೆಯಾ?" ಅನ್ನಲು ಅವನು "ಅಮ್ಮಾ, ನಾನು ಆಕೆ ಜೊತೆಯಲ್ಲೇ ಇರುವುದು. ನಾನು ಆಕೆಯನ್ನು ಮದುವೆಯಾಗಿರುವೆ, ಆಕೆಯೇ ನಿಮ್ಮ ಮನೆಗೆ ಭಿಕ್ಷೆಗೆ ಹೋಗಿ, ತುಂಬಾ ಒಳ್ಳೆಯ ಜನ" ಎಂದು ಹೇಳಿ ಕಳಿಸಿದ್ದಾಳೆ" ಅಂದ.

ಜಮೀನುದಾರನ ಪತ್ನಿಗೆ ಆನಂದವಾಗಿ "ಹೌದೇ, ನೋಡು ಆಕೆಯ ಒಡವೆ ಮತ್ತು ಬಟ್ಟೆಗಳು ನಮಲ್ಲಿವೆ ತೆಗೆದುಕೊಂಡು ಹೋಗಿ ಕಲುಹಮಿಗೆ ತಲುಪಿಸುವೆಯಾ? ಎಂದು ಆಕೆಯ ಬಟ್ಟೆ ಮತ್ತು ಒಡವೆಗಳನ್ನು ಗಂಟುಕಟ್ಟಿ ಕೊಟ್ಟಳು. ಭಿಕ್ಷುಕ ವೇಷದ ಕಳ್ಳನ ರೊಟ್ಟಿ ತುಪ್ಪದಲ್ಲಿ ಜಾರಿ ಬಿತ್ತು. ಆ ಗಂಟಿನೊಡನೆ ಕೂಡಲೇ ಜಾಗೆ ಖಾಲಿ ಮಾಡಿದ. ಸ್ವಲ್ಪ ಸಮಯದಲ್ಲಿ ಜಮೀನುದಾರ ಮನೆಗೆ ಬಂದರು. ಹೆಂಡತಿ ಕಲುಹಮಿ ಒಡವೆ, ಬಟ್ಟೆ ಕಳುಹಿಸಿದ ಸಮಾಚಾರ ತಿಳಿಸಿದಳು. ಜಮೀನುದಾರರಿಗೆ ಹೆಂಡತಿ ಮೋಸಹೋದ ವಿಷಯ ಅರ್ಥವಾಗಿ ಆ ಭಿಕ್ಷುಕ ಹೋದ ದಿಕ್ಕಿನಲ್ಲಿ ಕುದುರೆ ಏರಿ ಹೊರಟ. ಒಂದಿಷ್ಟು ದೂರ ವೇಗವಾಗಿ ಹೋದಾಗ ಕಳ್ಳ ಭಿಕ್ಷುಕ ಕಣ್ಣಿಗೆ ಬಿದ್ದ. ಅವನು ಜಮೀನುದಾರರನ್ನು ಕಂಡು ಗಂಟು ಸಹಿತ ಮರವೇರಿದ. ಜಮೀನುದಾರ ಗಟ್ಟಿ, ಅವರೂ ಮರವೇರತೊಡಗಿದರು. ಕಳ್ಳನಿಗೆ ಫಜೀತಿಗಿಟ್ಟುಕೊಂಡಿತು. ಎಷ್ಟಾದರೂ ಕಳ್ಳನಲ್ಲವೇ, ಅವನ ಕಳ್ಳಬುದ್ಧಿ ಕೆಲಸ ಮಾಡಿತು. ಜಮೀನುದಾರ ಮೇಲೆ ಮೇಲೆ ಹತ್ತುವಾಗ ಮರದಿಂದ ನೆಗೆದು ಅಲ್ಲಿದ್ದ ಕುದುರೆ ಏರಿ ಓಟ ಕಿತ್ತ ಜಮೀನುದಾರ ನಿರಾಶೆಯಿಂದ ಕೆಳಗಿಳಿದು ಕೂಗಿದ. "ಆಯಿತು ಅಳಿಯಂದಿರೆ, ಕಲುಹಮಿಗೆ ವಸ್ತ್ರ, ಒಡವೆ ನನ್ನ ಹೆಂಡತಿಯ ಕಾಣಿಕೆ, ಕುದುರೆ ನಾನು ಕೊಟ್ಟ ಕಾಣಿಕೆ ಎಂದು ಹೇಳು " ಹೀಗೆ ಅನ್ನುತ್ತಾ ಮನೆಯ ಕಡೆಗೆ ಹೊರಟ.

***

ವರ್ತನೆಯವರು

– ಸುಜಾತಾ ರವೀಶ್

ಪ್ರಲಾಪಿಸಬೇಡ ನೆನೆದು ಹಪಹಪಿಸಿ ಕಳೆದುಹೋದದ್ದನ್ನ
ಕಾಲ ಏಕಾಏಕಿ ಬಂದು ಮೇದದ್ದನ್ನ
ನೆನೆ ಇದನು ಮರೆಯದೆ
ಲುಕ್ಸಾನಿಗದೆ ಮರುಗದೆ
ಕಳೆದುಕೊಂಡದ್ದು ನಿನ್ನೊಡನೆ ಇದ್ದಷ್ಟು ದಿನ ಹಿಗ್ಗ ನೀಡಿದ್ದನ್ನ
(ಕೆ.ಎಸ್.ನಿಸಾರ್ ಅಹ್ಮದ್ ಅವರ 'ಕಳೆದದ್ದಕ್ಕೆ ಕೊರಗಬೇಡ' ಕವನ)

ಅಂದು ವಾಯುವಿಹಾರ ಮುಗಿಸಿ ಬಂದ ರವೀಶ್ "ನೋಡು, ದಿನಾ ಹಾಲಿನ ಪ್ಯಾಕೆಟ್ ತೊಗೋತಿದ್ನಲ್ಲ ಪಾಪ ಆ ವ್ಯಕ್ತಿ ಕರೋನಾ ಬಂದು ಹೋಗಿಬಿಟ್ನಂತೆ" ಎಂದು ಪೇಚಾಡಿಕೊಂಡರು. ಯಾಕೋ ನನಗೆ ಥಟ್ಟಂತ ನನ್ನ ಬಾಲ್ಯ ನೆನಪಾಯಿತು. ಅಂದು ನನ್ನ ಹುಟ್ಟಿದ ಹಬ್ಬ. ಅಂದೇ ಬೆಳಿಗ್ಗೆ ನಮ್ಮ ಮನೆಗೆ ಮೊಸರು ವರ್ತನೆಗೆ ಹಾಕುತ್ತಿದ್ದವಳ ಮರಣದ ಸುದ್ದಿಯೂ ಬಂತು. ಅಮ್ಮ ಹುಟ್ಟುಹಬ್ಬವನ್ನೇ ಮರುದಿನಕ್ಕೆ ಪೋಸ್ಟ್‌ಪೋನ್ ಮಾಡಿ ಅವಳ ಮರಣದ ಶೋಕಾಚರಣೆ ಆಚರಿಸಿದರು. ನನ್ನ ಮುಖ ಕೊಂಚ ಗಡಿಗೆ ಗಾತ್ರ ಆಗಿದ್ದು ಸುಳ್ಳಲ್ಲ.

ವರ್ತನೆಯೆಂದರೆ ನಿಘಂಟಿನಲ್ಲಿ ನಡವಳಿಕೆ ರೂಢಿ ಎಂದು ಅರ್ಥ. ಆದರೆ ಜನಸಾಮಾನ್ಯರ ಭಾಷೆಯಲ್ಲಿ ದಿನವೂ ಅಥವಾ ನಿಯಮಿತವಾಗಿ ವಸ್ತುಗಳನ್ನು ಸರಬರಾಜು ಮಾಡಿ ತಿಂಗಳಿಗೊಮ್ಮೆ ಹಣ ಪಡೆಯುವವರಿಗೆ ವರ್ತನೆಯವರು ಎಂದು ಕರೆಯುವ ಅಭ್ಯಾಸ.

ಪ್ರತಿಯೊಂದಕ್ಕೂ ಅಂಗಡಿಯನ್ನು ಅವಲಂಬಿಸದ ಕಾಲ ಅದು. ಮನೆಯ ಬಾಗಿಲಿಗೆ ಹಾಲು ಮೊಸರು ಹೂವು ತರಕಾರಿ ಎಲ್ಲವನ್ನೂ ಒದಗಿಸುತ್ತಿದ್ದರು. ಒಮ್ಮೊಮ್ಮೆ ಈಗಿನ ಆನ್‌ಲೈನ್ ಸೇವೆಗಳನ್ನು ನೋಡಿದಾಗ ಅದೇ ನೆನಪಾಗುತ್ತದೆ. ಆದರೆ ಆಗಿನ ಆತ್ಮೀಯತೆ, ಪರಿಚಯದ ಭಾವ ಇಂದಿನ ತಲುಪಿಸುವ ವ್ಯವಸ್ಥೆಗಳಿಗೆಲ್ಲಿ ಬರಬೇಕು?

ಹಾಲಿನ ಗಡಿಗೆಗಳನ್ನು ಬಿದಿರಿನ ಬುಟ್ಟಿಯಲ್ಲಿ ಇಟ್ಟುಕೊಂಡು ಬರುತ್ತಿದ್ದ ಹಾಲಿನ ಮಹದೇವಮ್ಮ ನನ್ನ ನೆನಪಿನಿಂದ ಏಕೋ ಇನ್ನೂ ಮರೆಯಾಗಿಯೇ ಇಲ್ಲ. ಹಸಿರು ಅಥವಾ ಕೆಂಪು ಚೌಕಳಿಯ ಹತ್ತಿ ಸೀರೆ, ಎಲ್ಲದಕ್ಕೂ ಬಿಳಿ ರವಿಕೆಯನ್ನೇ ತೊಟ್ಟು ಹಣೆತುಂಬ ಕಾಸಗಲ ಕುಂಕುಮ ಇಟ್ಟ ನಲವತ್ತೈದು ಐವತ್ತರ ಆಸುಪಾಸಿನ ಮಹಿಳೆ. ಸಾಸಿವೆ ಎಳ್ಳು ಬೆರೆಸಿದಂಥ ಬಣ್ಣದ ನೆರೆತಲೆ. ಕಾಡು ಹೂವಾದರೂ ಸರಿ, ಹೂ ಮುಡಿಯದೆ ಇರುತ್ತಿರಲಿಲ್ಲ. ಕೈತುಂಬಾ ಜರುಗಲು ಸಾಧ್ಯವಿರದಷ್ಟು ಗುತ್ತನಾಗಿ ಹಸಿರುಬಳೆ ತೊಡುತ್ತಿದ್ದಳು. ತಪ್ಪದೆ ರೇಡಿಯೋದ 7.35ರ ಕನ್ನಡ ವಾರ್ತೆಯ ಸಮಯಕ್ಕೆ ಹಾಲು ತರುತ್ತಿದ್ದ ಅವಳ ಸಮಯಪಾಲನೆ ನಿಜಕ್ಕೂ ಆಶ್ಚರ್ಯ. ಆಗ ಲೀಟರ್ ಕಾಲ ಅಲ್ಲ, ಪಾವು ಸೊಲಿಗೆಗಳಲ್ಲಿ ಅಳತೆ. ಹೆಚ್ಚು ಹಾಲು ತೆಗೆದುಕೊಂಡ ದಿನ ಒಂಟಿಕೊಪ್ಪಲ್ ಕ್ಯಾಲೆಂಡರಿನಲ್ಲಿ ' + ' ಚಿಹ್ನೆ ಹಾಕಿ ಎಷ್ಟು ಹೆಚ್ಚು ಎಂದು ಬರೆಯುವ ಕೆಲಸ. ಹಾಗೆಯೇ ತೆಗೆದುಕೊಳ್ಳದ ,ಕಡಿಮೆ ತೆಗೆದುಕೊಂಡಾಗ ' – ' ಚಿಹ್ನೆ ಹಾಕಿ ಗುರುತು ಮಾಡುತ್ತಿದ್ದುದು. ತಿಂಗಳ ಕೊನೆಯಲ್ಲಿ ಅವಳು ಹೇಳಿದ ಲೆಕ್ಕ ನಮ್ಮದಕ್ಕೆ ತಾಳೆಯಾಗುತ್ತಿತ್ತು ಅಷ್ಟೊಂದು ಮನೆಗಳ ಲೆಕ್ಕಾಚಾರ ಬಾಯಿಯಲ್ಲೇ ನೆನಪಿಡುವ ಅವಳ ಬುದ್ಧಿವಂತಿಕೆ ನಿಜಕ್ಕೂ ಶ್ಲಾಘನೀಯವೇ. ಮಕ್ಕಳ ಮದುವೆ ಮಾಡಿದಾಗಲೆಲ್ಲ ನವವಧುವರರನ್ನು ಕರೆದುಕೊಂಡು ಬಂದು ಆಶೀರ್ವಾದ ಕೊಡಿಸುತ್ತಿದ್ದಳು. ವಾರದಲ್ಲಿ ಒಂದೋ ಎರಡೋ ದಿನ ಹನ್ನೊಂದು ಗಂಟೆಗೆ ವಾಪಸ್ಸು ಹೋಗುವಾಗ ಅಮ್ಮ ಕೊಟ್ಟ ತಿಂಡಿ/ ಊಟವನ್ನು ಮಾಡಿ ಹೋಗುತ್ತಿದ್ದಳು. ಬೆಳಿಗ್ಗೆ ಬಂದಾಗ ಒಮ್ಮೊಮ್ಮೆ ಕೇಳಿ ಕಾಫಿ ಕುಡಿಯುತ್ತಿದ್ದಳು. ನಾನು ದೊಡ್ಡವಳಾದಾಗ ಕೊಬ್ಬರಿ ತುಪ್ಪ ಆರೈಕೆಗೆಂದು ಅಕ್ಕರೆಯಿಂದ ತಂದುಕೊಟ್ಟದ್ದು ಇನ್ನೂ ಹಸಿರು. ನನ್ನ ಕಡೆಯ ತಂಗಿಗೆ ಒಂದು ಪುಟ್ಟ ಗಿಂಡಿಯ ತುಂಬಾ ಹಾಲು ಕೊಡುತ್ತಿದ್ದಳು; ಅದಕ್ಕೆ ಲೆಕ್ಕವಿಡುತ್ತಿರಲಿಲ್ಲ.

ಮೊಸರಿನ ಗಂಗಮ್ಮ ಇವಳಿಗಿಂತ ಭಿನ್ನ. ಸ್ವಲ್ಪ ನಾಜೂಕಿನ ನಾರಿ.. ಆಗಿನ ಕಾಲದ ಲೆಕ್ಕದಲ್ಲಿ ಸ್ಟೈಲ್ ವಾಲಿ. ಮೂವತ್ತರ ಒಳಗಿನ ವಯಸ್ಸು. ಮಧ್ಯಾಹ್ನ ಹನ್ನೊಂದು ಗಂಟೆ ಸಮಯಕ್ಕೆ ಬರುತ್ತಿದ್ದಳು. ನಾವು ಶಾಲೆಗೆ ಹೋಗದ ದಿನಗಳಲ್ಲಿ ಮಾತ್ರ ಅವಳ ದರ್ಶನ ಭಾಗ್ಯ. ಮೊಸರು ಮಜ್ಜಿಗೆಯ ಗಡಿಗೆಗಳನ್ನು ಬಿದಿರಿನ ಬುಟ್ಟಿಯಲ್ಲಿ ಒಪ್ಪವಾಗಿ ಇಟ್ಟುಕೊಂಡು ಬಂದು ಅಚ್ಚುಕಟ್ಟಾಗಿ ಅಳೆದುಕೊಡುತ್ತಿದ್ದಳು. ಇವಳಿಗೋ ಲೆಕ್ಕದ ಗಂಧವೇ ಇಲ್ಲ. ಅದನ್ನು ಮುಚ್ಚಿಟ್ಟುಕೊಳ್ಳಲು "ನೀವು ಕೊಟ್ಟಷ್ಟು ಕೊಡಿ, ಮೋಸ ಮಾಡೋರಲ್ಲ ಬಿಡಿ" ಅಂದುಬಿಡುತ್ತಿದ್ದಳು. ಪಾಪ ಒಂಬತ್ತು ತಿಂಗಳು ತುಂಬುವವರೆಗೂ ಗರ್ಭಿಣಿ ಹೆಂಗಸು ಬಂದು ಮೊಸರು ವ್ಯಾಪಾರ ಮಾಡ್ತಿದ್ದಳು. ಹೆರಿಗೆಯಲ್ಲಿ ಕಷ್ಟವಾಗಿ ಸತ್ತುಹೋದಳು. ಈ ಪ್ರಸಂಗವನ್ನೇ ನಾನು ಮೇಲೆ ಹೇಳಿದ್ದು.

ಮನೆಯ ತೋಟದಲ್ಲಿ ರಾಶಿ ಹೂ ಬಿಟ್ಟಿದ್ದರಿಂದ ಹೂವಿಗೆ ವರ್ತನೆಯವರಿರಲಿಲ್ಲ. ಆದರೆ ಒಬ್ಬ ಹಣ್ಣು ಮುದುಕಿ ಹತ್ತಿರದ ಹಳ್ಳಿಯಿಂದ ಸಂಪಿಗೆ, ಕೆಂಡಸಂಪಿಗೆ ಹೂ ತರುತ್ತಿದ್ದರು. ಬಂದಾಗಲೆಲ್ಲ ಅಮ್ಮ ಬೋಣಿ ಮಾಡಬೇಕು, ಕಾಫಿ ತಿಂಡಿತೀರ್ಥ ಕೊಡಬೇಕು ಅವರಿಗೆ. ಒಂದು ಪೈಸೆಗೆ ಒಂದು ಸಂಪಿಗೆ ಹೂವು. ಹತ್ತು ಇಪ್ಪತ್ತು ಸಂಪಿಗೆ ಹೂಗಳನ್ನು ಪೋಣಿಸಿ ದಿಂಡೆ ಮಾಡಿ ಮುಡಿದುಕೊಳ್ಳುತ್ತಿದ್ದೆವು. ಆಕೆಯ ಹೆಸರೇನೋ ಮರೆತು ಹೋಗಿದೆ. ಆದರೆ ಏಕವಚನದಲ್ಲಿ ಮಾತನಾಡಿಸಿ ಆನಂತರ ನಮ್ಮ ತಂದೆಯಿಂದ ಬೈಗುಳ ಮತ್ತು ಹಾಗೆ ಮಾಡಬಾರದೆಂಬ ಧೀರ್ಘ ಲೆಕ್ಚರ್ ಕೇಳಿದ್ದು ಮರೆತಿಲ್ಲ. ಭಿಕ್ಷುಕರನ್ನೂ ಬಹುವಚನದಿಂದ ಮಾತನಾಡಿಸುವ ನನ್ನ ಅಭ್ಯಾಸಕ್ಕೆ ಇದು ನಾಂದಿಯಾಗಿತ್ತು.

ಹಾಗೆಯೇ ದೂರದ ಎಲೆತೋಟದ ಬಳಿಯಿಂದ ತಂದು ವಿಳ್ಳೆಯದೆಲೆ ಕವಳಿಗೆ ಲೆಕ್ಕದಲ್ಲಿ ಕೊಡುತ್ತಿದ್ದ ಎಲೆಯ ನಂಜಮ್ಮ ಸಹ ಒಬ್ಬರು ವರ್ತನೆಯವರು. ಅವರ ಕಿವಿಯ ತೂತು ತುಂಬಾ ದೊಡ್ಡದಾಗಿದ್ದು ಈಗ ನಾವು ಗೌರಿ ಬಾಗಿನಕ್ಕೆ ಇಡುವ ಬಳೆ ಬಿಚ್ಚೋಲೆಯನ್ನೇ ಕಿವಿಗೆ ಧರಿಸಿಕೊಳ್ಳುತ್ತಿದ್ದುದು ನಮ್ಮ ಬೆರಗಿಗೆ ಆಗ ಕಾರಣವಾಗಿತ್ತು. ಆಕೆಯೂ ಬಂದಾಗಲೆಲ್ಲಾ ಕಾಫಿ ಕೇಳಿ ಕುಡಿಯುತ್ತಿದ್ದರು. ಒಮ್ಮೊಮ್ಮೆ ಮಾತ್ರ ಊಟ ಮಾಡುತ್ತಿದ್ದರು.

ಇನ್ನೊಬ್ಬ ವ್ಯಕ್ತಿ ಸೈಕಲ್ನಲ್ಲಿ ಬೇರೆ ಬೇರೆ ಡಬ್ಬಗಳನ್ನು ಕಟ್ಟಿಕೊಂಡು ಬಂದು ಎಣ್ಣೆ ಮಾರುತ್ತಿದ್ದುದು ನೆನಪು. ಕಡಲೆಕಾಯಿ ಎಣ್ಣೆ, ಎಳ್ಳೆಣ್ಣೆ, ಕೊಬ್ಬರಿ ಎಣ್ಣೆ, ಹರಳೆಣ್ಣೆ ಇದೆಲ್ಲಾ ಆತನ ಬಳಿಯೇ ತೆಗೆದುಕೊಳ್ಳುತ್ತಿದ್ದುದು. ಪ್ರತೀ ಶನಿವಾರ ಬರುತ್ತಿದ್ದರು ಅನ್ನಿಸತ್ತೆ . ಆತನ ತಿಳಿನೀಲಿ ಷರಟು ಹಾಗೂ ತಲೆಗೆ ಕಟ್ಟಿಕೊಳ್ಳುತ್ತಿದ್ದ ಟವಲ್ ಇನ್ನೂ ಕಣ್ಣಿಗೆ ಕಟ್ಟಿದ ಹಾಗೆ ಇದೆ.

ಮತ್ತೊಬ್ಬರೂ ಹಾಗೆ ಸೈಕಲ್ಲಿನಲ್ಲಿ ಬರುತ್ತಿದ್ದರು. ಆಯಾ ಕಾಲದಲ್ಲಿ ಸಿಗುವ ಹಣ್ಣುಗಳನ್ನು ತಂದು ಮಾರುತ್ತಿದ್ದರು. ಆಗೆಲ್ಲಾ ಕೆಜಿಯ ಲೆಕ್ಕವೇ ಇಲ್ಲ. ಇಡೀ ಹಲಸು, ಗೂಡೆಗಟ್ಟಲೆ ಮಾವು, ಕಿತ್ತಳೆ, ಗೊನೆಬಾಳೆ ಹೀಗೆಯೇ. ತೆಂಗಿನಕಾಯಿಯಂತೂ ಪ್ರತಿ ಬಾರಿಯೂ ತರುತ್ತಿದ್ದರು. ಸೊಪ್ಪು, ತರಕಾರಿಯ ತಾಯಮ್ಮ, ಪೌರಕಾರ್ಮಿಕನಾಗಿ, ತೋಟದ ಕೆಲಸ ಮಾಡಲು ಬರುತ್ತಿದ್ದ ರಂಗಯ್ಯ ಎಲ್ಲರೂ ನೆನಪಿನಲ್ಲಿದ್ದಾರೆ. ಮನೆಗೆ ಬರುವ ಅತಿಥಿಗಳಿಗೆ ಕೊಡುವಂತೆ ಕಾಫಿ ತಿಂಡಿ ಊಟ ಕೊಟ್ಟು ಆದರಿಸುತ್ತಿದ್ದ ಅಮ್ಮ ಅವರಿಗೆಲ್ಲಾ ಅನ್ನಪೂರ್ಣೆಯೇ. ಹಬ್ಬಗಳ ವಿಶೇಷ ಭಕ್ಷ್ಯಗಳು, ಗೋಕುಲಾಷ್ಟಮಿ ತಿಂಡಿ, ಸಂಕ್ರಾಂತಿಯ ಎಳ್ಳು ಎಲ್ಲದರಲ್ಲೂ ಅವರಿಗೆ ಪಾಲು ಇದ್ದೇ ಇರುತ್ತಿತ್ತು. ಅದರ ಜೊತೆಗೆ ಮಕ್ಕಳನ್ನು ಚೆನ್ನಾಗಿ ಓದಿಸಿರಿ ಎಂಬ ಬೋಧನೆ ಕೂಡ. ಹಳೆಯ ಬಟ್ಟೆಗಳು, ಉಪಯೋಗಿಸಿದ ವಸ್ತುಗಳು ಇವನ್ನೆಲ್ಲಾ ನೆನಪಿನಲ್ಲಿಟ್ಟುಕೊಂಡು ಇವರಿಗೆ ಇವರಿಗೆ ಎಂದು ವಿತರಿಸುತ್ತಿದ್ದುದು, ಅವರ ಮನೆಯ ಸಮಾರಂಭಗಳಿಗೆ ಉಡುಗೊರೆ ಹಣ ಕೊಡುತ್ತಿದ್ದುದು, ಆಗ ಏನೂ ಅನಿಸದಿದ್ದರೂ ಈಗ ಅಮ್ಮ ಅಪ್ಪನ ವಿಶಾಲ ಮನೋಭಾವದ ಅರಿವಾಗಿಸುತ್ತಿದೆ.

ತೀರಾ ಬಡತನದ, ಹಾಲು ಕೊಳ್ಳಲು ಶಕ್ತಿಯಿರದ ಕುಟುಂಬವೊಂದಿತ್ತು. ಆ ಮನೆಯ ಮಗುವಿಗೆ ಅಂತ ಒಂದು ಲೋಟ ಹಾಲು ಕೊಟ್ಟು ಹೋಗ್ತಿದ್ದರು ವರ್ತನೆಯವರು ಆಗೆಲ್ಲಾ. ಈಗ ಆ ರೀತಿಯ ಜನರನ್ನು ಕಾಣಲು ಸಾಧ್ಯವೇ?

ಈಗಿನ ಹಾಗೆ ಸದಾ ಕೈಯಲ್ಲಿ ಹಣ ಓಡಾಡದ ಅಂದಿನ ದಿನಗಳಲ್ಲಿ ಸಂಬಳ ಬಂದ ಕೂಡಲೇ ಇವರಿಗೆಲ್ಲ ಹಣ ಪಾವತಿ. ಒಮ್ಮೆ ಹೆಚ್ಚು ಲೆಕ್ಕವಾದಾಗ ಸ್ವಲ್ಪ ಉಳಿಸಿಕೊಂಡು ಮುಂದಿನ ತಿಂಗಳಿಗೂ ಕ್ಯಾರಿ ಫಾರ್ವರ್ಡ್ ಮಾಡುತ್ತಿದ್ದುದು.

ಸಾವು. ಮದುವೆ. ಊರಿನ ಓಡಾಟ ಅಂತ ಹೆಚ್ಚುವರಿ ಖರ್ಚುಗಳು ಇದ್ದಾಗಲೂ ಅಷ್ಟೇ. ಎಲ್ಲ ಸಮಯಕ್ಕೂ ಫ್ಲೆಕ್ಸಿಬಲ್. ಹಾಗೆಯೇ ಅವರಿಗೆ ಹೆಚ್ಚಿನ ಅಗತ್ಯವಿದ್ದಾಗ ನಮ್ಮಿಂದ ಮುಂಗಡವಾಗಿ ಹಣ ತೆಗೆದುಕೊಂಡು ತಿಂಗಳು ತಿಂಗಳು ಉತ್ತಾರ ಹಾಕ್ಕೊಳ್ತಾ ಹೋಗುವುದು. ಆ ಲೆಕ್ಕಾಚಾರಗಳನ್ನು ಕೇಳಿದರೆ ಒಂಥರಾ ಖುಷಿಯ ಅನುಭವ. ಎಲ್ಲಾ ಬಾಯಿಮಾತಿನ ಗಣಿತ, ವಿಶ್ವಾಸದ ಲೆಕ್ಕಾಚಾರ.

ಬರೀ ವ್ಯಾವಹಾರಿಕವಾಗಿಯಲ್ಲದೆ ಪರಸ್ಪರ ಪ್ರೀತಿ ವಿಶ್ವಾಸ ನಂಬಿಕೆಗಳಿಂದ ಕೂಡಿದ ಸಂಬಂಧಗಳು ಅವು. ಒಬ್ಬರಿನ್ನೊಬ್ಬರ ಹರ್ಷಕ್ಕೆ ಸಂತಸಪಟ್ಟು ಸಂಕಟದಲ್ಲಿ ಸಹಾನುಭೂತಿ ತೋರುತ್ತಿದ್ದ ಅಂದಿನ ಕಾಲ ಸಮರಸದ ಪಾಠವನ್ನು ಸೋದಾಹರಣ ಕಲಿಸುತ್ತಿತ್ತು. ನಿಜ! ಜಾತಿಯ ಕಟ್ಟುಪಾಡುಗಳು ಆಗ ಸಮಾಜದಲ್ಲಿ ಇನ್ನೂ ಬಿಗಿಯಾಗಿತ್ತು. ಅದನ್ನು ಮೀರದೆಯೇ ಸೌಹಾರ್ದದ ನಂಟಿತ್ತು, ಮಿಡಿಯುವ ತುಡಿತವಿತ್ತು. ಜಾತಿಯ ಬೇಲಿಯನ್ನೂ ಮೀರಿ ಅಂತಃಕರಣದ ಸರಿತೆ ಹರಿಯುತ್ತಿತ್ತು. ಬರುಬರುತ್ತಾ ಅಂಗಡಿಗಳು ಮಾಲ್ಗಳು ಹೆಚ್ಚಿದಂತೆಲ್ಲಾ ವರ್ತನೆಯವರು ಕಡಿಮೆಯಾಗಿದ್ದಾರೆ. ಇದ್ದರೂ ಮೊದಲಿನಂತೆ ವ್ಯವಧಾನದಿಂದ ಕೂತು ಮಾತನಾಡುವಷ್ಟು, ಕಷ್ಟ ಸುಖ ವಿಚಾರಿಸುವಷ್ಟು ಸಮಯ, ತಾಳ್ಮೆ ಯಾರಿಗಿದೆ? ಕಾಲನ ನಾಗಾಲೋಟದಲ್ಲಿ ನಾವೂ ರೇಸಿಗೆ ಬಿಟ್ಟ ಕುದುರೆಗಳಂತೆ ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಓಡುತ್ತಲೇ ಇದ್ದೇವೆ. ವರ್ತನೆಯವರು ಇರಲಿ, ಮನೆಯವರ ಜತೆ ತಾನೆ ಸಮಾಧಾನದಿಂದ ಕುಳಿತು ಮಾತನಾಡುವ, ಹರಟೆ ಹೊಡೆಯುವ, ಕಷ್ಟಸುಖ ಹಂಚಿಕೊಳ್ಳುವ ಪುರುಸೊತ್ತಾದರೂ ನಮಗಿದೆಯೇ?

ವಿಲಾಪಿಸಬೇಡ ಕಳೆದುಕೊಂಡದ್ದಕ್ಕೆ
ನೀನೇ ಕಳೆದು ಹೋಗುವ ಮುನ್ನ
ಮೃತ್ಯು ಹೊತ್ತೊಯ್ದು ಮತ್ತೊಬ್ಬನಿಗೆ ಅರ್ಪಿಸುವ ಮುನ್ನ
ನಿನ್ನ ಜೀವದನರ್ಘ್ಯ ಅಪರಂಜಿಯನ್ನ – ಕೆ.ಎಸ್. ನಿಸಾರ್ ಅಹ್ಮದ್

ನಿಜ! "ಪುರಾಣಮಿತ್ಯೇವ ನ ಸಾಧುಸರ್ವಂ" ಎಂಬಂತೆ ನೆನಪಿನ ಭಿತ್ತಿಯ ಹರಳುಗಳನ್ನು ನೋಡಿ ನೆನೆದು ಖುಷಿಪಡಬೇಕು. ಇಲ್ಲದುದಕ್ಕೆ ಪರಿತಪಿಸಬಾರದು. ಕಾಲಪ್ರವಾಹದಲ್ಲಿ ಸಾಗಿಹೋಗುವ ಹುಲ್ಲು ಕಡ್ಡಿಯಂತೆ ಬದಲಾವಣೆಗಳಿಗೆ ತೆರೆದುಕೊಳ್ಳುತ್ತಾ ಹಳೆಯ ನೆನಪಿನ ಮೆಲುಕಿನ ಬೇರುಗಳಲ್ಲಿ ಹೊಸ ಅನುಭವದ ಚಿಗುರು ಪಲ್ಲವಿಸುತ್ತಿರಬೇಕು. ಇದುವೇ ಜೀವನ ಇದು ಜೀವ ತಾನೇ? "ಕಾಲಾಯ ತಸ್ಮೈ ನಮಃ ".

***

ಕನ್ನಡ ಕಲಿಯುವಿಕೆ – ಕಲಿಸುವಿಕೆ

– ಮನೋಹಂಸ

ನಾನು ಇಂದಿನ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಿಪಡಿಸುತ್ತಿರುವುದು ಒಬ್ಬ ಕನ್ನಡ ಶಿಕ್ಷಕಿ ಹಾಗೂ ಆಂಗ್ಲ ಭಾಷೆಯಲ್ಲಿ ಮಾತನಾಡುತ್ತಿರುವ ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆಯುತ್ತಿರುವ ಮಕ್ಕಳ ನಡುವೆ ಆಗುವ ಸಂಭಾಷಣೆ. ಈ ಸಂಭಾಷಣೆಗೆ ಕವನದ ರೂಪ ಕೊಟ್ಟು ಒಂದು ಮಟ್ಟಿಗೆ ಲಯವನ್ನು ಕೂಡಿಸಿ ಹಾಡಿನ ರೂಪದಲ್ಲಿ ಪ್ರಸ್ತುತಿಪಡಿಸುತ್ತಿದ್ದೇನೆ. ಇದಕ್ಕೂ ಮೊದಲು ಭಾಷೆಯ ಬಗ್ಗೆ ನನ್ನ ಅನಿಸಿಕೆಯ ಕೆಲವು ಸಾಲುಗಳು ಕೆಳಕಂಡಂತಿವೆ.

ಪ್ರಪಂಚದ ಯಾವುದೇ ಭಾಗದಲ್ಲಿ ಜನರು ಮಾತನಾಡನಾಡುವ ಭಾಷೆಯಲ್ಲಿ ಮೂರು ವಿಧಗಳಿರುತ್ತವೆ. ಒಂದು ಮಾತೃಭಾಷೆ, ಎರಡನೆಯದು ಕಚೇರಿಯ ವ್ಯಾವಹಾರಿಕ ಭಾಷೆ, ಮೂರನೆಯದು ಸ್ಥಳೀಯ ಭಾಷೆ. ಈ ಮೂರೂ ಭಾಷೆಗಳೂ ಒಂದೇ ಆಗಿದ್ದರೆ ಪುಣ್ಯ. ಆಗ ಯಾವ ಸಮಸ್ಯೆಯೂ ತಲೆದೋರುವುದಿಲ್ಲ. ಆದರೆ ಅವುಗಳು ಬೇರೆ ಬೇರೆ ಆಗಿದ್ದರೆ ಅವುಗಳನ್ನು ತಕ್ಕ ಮಟ್ಟಿಗೆ ಕಲಿಯಲೇಬೇಕು. ಭಾಷೆಯ ವಿಷಯದಲ್ಲಿ ವಿತಂಡವಾದ ಇರಬಾರದು. ಉದಾಹರಣೆಗೆ: ಕನ್ನಡಿಗರು ಗುಜರಾತಿಗೆ ಕೆಲಸದ ನಿಮಿತ್ತ ಹೋಗಿ ಅಲ್ಲಿ ಒಂದಷ್ಟು ಕಾಲ ನೆಲೆಸಬೇಕಾಗಿ ಬಂದರೆ ತಮ್ಮ ಮಾತೃಭಾಷೆ ಕನ್ನಡದ ಜೊತೆ, ವ್ಯಾವಹಾರಿಕವಾಗಿ ಆಂಗ್ಲ ಭಾಷೆ ಎಂದು ತೆಗೆದುಕೊಂಡರೆ ಸ್ಥಳೀಯ ಭಾಷೆಯಾದ ಗುಜರಾತಿ ಭಾಷೆ ತಕ್ಕ ಮಟ್ಟಿಗೆ ಕಲಿಯಲೇಬೇಕು. ಹಾಗೆಯೇ ಗುಜರಾತಿನವರು ಕನ್ನಡನಾಡಿಗೆ ಬಂದರೆ ಇದೇ ನಿಯಮ ಅನ್ವಯವಾಗುತ್ತದೆ. ಇದು ಜಾಗತಿಕ ಮಟ್ಟದಲ್ಲಿ ಎಲ್ಲರಿಗೂ ಅನ್ವಯಿಸುತ್ತದೆ.

ಈ ವಿಚಾರ ಒಂದು ಕಡೆಯಾದರೆ, ಮತ್ತೊಂದು ವಿಚಾರ, ಇದೇ ನಾಡಿನಲ್ಲಿ ಹುಟ್ಟಿ ಬೆಳೆದು ಮನೆಯಲ್ಲಿ ಮತ್ತು ಹೊರಗೆ ಮಾತೃಭಾಷೆಯಲ್ಲಿ ಮಾತನಾಡದೆ ಅನ್ಯ ಭಾಷೆಯಲ್ಲಿ ಮಾತನಾಡುವುದು ನಾಡಿನ ಭಾಷೆಗೆ ಅನ್ಯಾಯ ಮಾಡಿದಂತಾಗುತ್ತದೆ. ಇದನ್ನು ಹಿರಿಯರು ಶಿರಸಾವಹಿಸಿ ಪಾಲಿಸಿ ತಮ್ಮ ಕಿರಿಯರಿಗೆ, ಮಕ್ಕಳಿಗೆ ಮಾತೃಭಾಷೆಯಲ್ಲಿ ಮಾತನಾಡುವುದನ್ನು ಕಲಿಸಬೇಕು. ಆಗ ಮಾತ್ರವೇ ಭಾಷೆ ಉಳಿಯಲು ಸಾಧ್ಯ. ಬೆಳೆಯಲು ಸಾಧ್ಯ.

ಅದಾಗಿ ಈ ಒಂದು ಸಂಭಾಷಣೆ ಈ ಕವನದ ರೂಪದಲ್ಲಿ. ಇದನ್ನು ಹಾಡಿ ಪ್ರಸ್ತುತಿಪಡಿಸುತ್ತಿದ್ದೇನೆ.

ಕನ್ನಡ ಕಲಿಯುವಿಕೆ, ಕಲಿಸುವಿಕೆ

ಕನ್ನಡ ಶಿಕ್ಷಕಿ:
ಕನ್ನಡದಲ್ಲಿ ಮಾತಾಡಿ ಮಕ್ಕಳೇ
ಕನ್ನಡವನ್ನು ಪಾಲಿಸಿ ಮಕ್ಕಳೇ
ಕನ್ನಡ ನೆಲದ ಋಣವು ನಿಮ್ಮಯ
ಕಣ ಕಣದಲ್ಲಿರಬೇಕು ಮಕ್ಕಳೇ

ತಾತ ಅಜ್ಜಿ ಕನ್ನಡಿಗರೇ
ಅಪ್ಪ ಅಮ್ಮ ಕನ್ನಡಿಗರೇ
ಆದರೂ ಏಕೆ ನೀವು ಕನ್ನಡ
ಸರಿಯಾಗಿ ಕಲಿತಿಲ್ಲ ಮಕ್ಕಳೇ

ಮಕ್ಕಳು:
ಹೌ ಕ್ಯಾನ್ ವಿ ಟಾಕ್ ಇನ್ ಕನ್ನಡ
ಹೌ ಕ್ಯಾನ್ ವಿ ಯೂಸ್ ಕನ್ನಡ
ವಿ ಆರ್ ಇನ್ ಇಂಗ್ಲಿಷ್ ಮೀಡಿಯಮ್
ವಿ ನೋ ಓನ್ಲೀ ಇಂಗ್ಲೀಷ್ ಮೇಡಮ್

ಕನ್ನಡ ಶಿಕ್ಷಕಿ:
ಅಪ್ಪ ಅಮ್ಮ ಹೇಳುವುದಿಲ್ಲವೇ?
ಅಪ್ಪ ಅಮ್ಮ ಕಲಿಸುವುದಿಲ್ಲವೇ?
ಅಪ್ಪ ಅಮ್ಮನಿಗೆ ಕಲಿಸಲು ಹೇಳಿ
ಕಲಿಯಿರಿ ನೀವು ಅವರನು ಕೇಳಿ

ಮಕ್ಕಳು:
ಮಮ್ಮಿ ಡ್ಯಾಡಿ ಬೋತ್ ಆರ್ ವರ್ಕಿಂಗ್
ಮಮ್ಮಿ ಡ್ಯಾಡಿ ಟಾಕ್ ಇನ್ ಇಂಗ್ಲೀಷ್
ಓನ್ಲಿ ವಿತ್ ಅವರ್ ತಾತ ಆಂಡ್ ಅಜ್ಜಿ
ಮಮ್ಮಿ ಡ್ಯಾಡಿ ಟಾಕ್ ಇನ್ ಕನ್ನಡ

ಕನ್ನಡ ಶಿಕ್ಷಕಿ:
ಅಯ್ಯೋ ಇದು ಬಲು ಅಪಚಾರ
ಅಪ್ಪ ಅಮ್ಮನ ಭಾಷಾ ವ್ಯವಹಾರ
ಅವರಿಗೆ ಮೊದಲು ಬುದ್ಧಿ ಹೇಳಿ
ಕನ್ನಡ ಮಾತಾಡಲು ಅವರಿಗೆ ಹೇಳಿ

ಮಕ್ಕಳು:
ಇಫ್ ವಿ ಟಾಕ್ ಇನ್ ಕನ್ನಡ ಇನ್ ಸ್ಕೂಲ್
ಟೀಚರ್ ವಿಲ್ ಸ್ಕೋಲ್ಡ್ ಅಸ್ ಆಸ್ ಫೂಲ್
ಟೀಚರ್ ವಿಲ್ ಪುಟ್ ಆನ್ ಅಸ್ ಫೈನ್
ಕೆನಾಟ್ ಗೋ ಟು ಸ್ಕೂಲ್ ವಿತೌಟ್ ದಿ ಫೈನ್

ಕನ್ನಡ ಶಿಕ್ಷಕಿ:
ನಾನು ನಾಳೆಯೇ ನಿಮ್ಮ ಶಾಲೆಗೆ ಬರುವೆ
ಮುಖ್ಯೋಪಾಧ್ಯಾಯರ ಭೇಟಿ ಮಾಡುವೆ
ಕನ್ನಡ ಮಾತಾಡಿದರೆ ಫೈನ್ ಏಕೆಂದು ಕೇಳುವೆ
ಇದು ತಪ್ಪೆಂದು ಅವರಿಗೆ ಬುದ್ಧಿ ಹೇಳುವೆ

ಇಂದೇ ನಿಮ್ಮ ಅಪ್ಪ ಅಮ್ಮನನ್ನು ನೋಡುವೆ
ಮನೆಯಲಿ ಕನ್ನಡ ಮಾತಾಡಲು ಹೇಳುವೆ
ಮಕ್ಕಳಿಗೂ ಕನ್ನಡ ಕಲಿಸಿ ಎಂದು ಕೇಳುವೆ
ಇದು ಎಲ್ಲಾ ಕನ್ನಡಿಗರು ಮಾಡಬೇಕೆನ್ನುವೆ

ಕನ್ನಡ ಕಲಿಯಿರಿ ಕನ್ನಡ ಮಾತಾಡಿರಿ
ಕನ್ನಡ ಓದಿರಿ ಕನ್ನಡ ಬರೆಯಿರಿ
ಕನ್ನಡ ಕಲಿಸಿ ಕನ್ನಡ ಮೆರೆಸಿ
ಕನ್ನಡ ಬೆಳೆಸಿ ಕನ್ನಡ ಉಳಿಸಿ

ಕನ್ನಡವೇ ಸತ್ಯ ಕನ್ನಡವೇ ನಿತ್ಯ.

***

ನಮ್ಮ ಭಾಷೆಯ ಉಳಿವು ನಮ್ಮ ಕೈಯ್ಯಲ್ಲಿದೆ

– ಉಷಾರಾಣಿ ಟಿ.ಆರ್.

ಭಾಷೆ ಎನ್ನುವುದು ಒಂದು ಭಾವನಾತ್ಮಕ ವಿಷಯ. ಸಂವಹನ ಸಾಧನವೂ ಹೌದು; ನಮ್ಮ ಕನ್ನಡ ಭಾಷೆ ಭಾರತ ಸಂವಿಧಾನದ 8ನೇ ಅನುಸೂಚಿಯ 22 ಭಾಷೆಗಳಲ್ಲಿ ಒಂದಾಗಿದೆ. ಅದರಲ್ಲೂ ನಮ್ಮ ಕನ್ನಡ ಭಾಷೆ 2000 ವರ್ಷಗಳ ಅತ್ಯಂತ ಪ್ರಾಚೀನ ಭಾಷೆ. ಕನ್ನಡ ಭಾಷೆಯಲ್ಲೊಂದು ಗಟ್ಟಿತನವಿದೆ, ಮೃದುತ್ವವಿದೆ ಕಸ್ತೂರಿಯ ಸೊಬಗಿದೆ. ಇಷ್ಟಲ್ಲದೆ ಫರ್ಡಿನ್ಯಾಂಡ್ ಕಿಟೆಲ್ ಎನ್ನುವ ವಿದೇಶಿ ಪಾದ್ರಿ ಎಲ್ಲ ಭಾಷೆಗಳನ್ನೂ ತೊರೆದು 1894ರಲ್ಲಿ ಕನ್ನಡ ಭಾಷೆಗೆ ಮಾತ್ರವೇ ಶಬ್ದಕೋಶವನ್ನು ಬರೆದನೇ? ಕನ್ನಡ ಭಾಷೆ ಎಷ್ಟೊಂದು ವೈಜ್ಞಾನಿಕವಾಗಿದೆ ಎಂದರೆ ನಾವು ಉಚ್ಚಾರಣೆ ಮಾಡುವಂತೆಯೇ ಬರೆಯುತ್ತೇವೆ. ಹಿಂದಿಯಲ್ಲಿ ಒಂದು ಗಾದೆಯ ಮಾತಿದೆ 'ಹಾಥಿ ಕೆ ದಾಂತ್ ದಿಖಾನೆ ಕೆ ಔರ್ ಖಾನೆ ಕೆ ಔರ್' ಅಂತ. ಅಂದರೆ ಆನೆಯ ಹಲ್ಲು ತೋರಿಕೆಗೆ ಒಂದಾದರೆ ತಿನ್ನುವುದಕ್ಕೆ ಬೇರೆಯದೇ ಎಂದರ್ಥ. ಅಂತಹ ಪರಿಸ್ಥಿತಿ ಕನ್ನಡದಲ್ಲಿ ಇಲ್ಲವೇ ಇಲ್ಲ. ನುಡಿದಂತೆ ಬರೆಯುತ್ತೇವೆ. ಪದ ಪುಂಜಗಳಲ್ಲಿ ಒಂದು ಲಾಲಿತ್ಯವಿದೆ. ಪದಗಳ ಪ್ರಯೋಗಗಳಲ್ಲಿ ಸೌಂದರ್ಯವಿದೆ. ಪ್ರಾಚೀನತೆಯಲ್ಲಿ ದ್ರಾವಿಡ ಗುಂಪಿನ 20ಕ್ಕೂ ಹೆಚ್ಚು ಭಾಷೆಗಳಲ್ಲಿ ಕನ್ನಡವೂ ಸೇರಿದೆ. ಕರ್ನಾಟಕದ ಅಶೋಕನ ಶಾಸನವೊಂದರಲ್ಲಿ ಕಂಡುಬರುವ ಇಸಿಲ್ ಎಂಬ ಹೆಸರನ್ನು ಪ್ರೊ.ಡಿ.ಎಲ್.ನರಸಿಂಹಾಚಾರ್ ಅವರು ಕನ್ನಡ ಪದವೆಂದಿದ್ದಾರೆ. ಪುರಾವೆಗಳಿಂದ ತಿಳಿದು ಬರುವ ಅಂಶವೆಂದರೆ ಕನ್ನಡವು ಕ್ರಿ.ಶ. 5 ಅಥವಾ 6ನೇ ಶತಮಾನದ ವೇಳೆಗೆ ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ್ದ ಭಾಷೆಯಾಗಿತ್ತು.

ತೆಲುಗು ಲಿಪಿಯನ್ನು ಹೋಲುವ ಕನ್ನಡ ಲಿಪಿ ಹಳೆಯ ಕನ್ನರೀಸ್ ಲಿಪಿಯಿಂದ ಆವಿರ್ಭವಿಸಿದೆ ಎನ್ನಲಾಗುತ್ತದೆ. ವಿಶೇಷವೆಂದರೆ ಪ್ರತಿ ಕನ್ನಡ ಪದವೂ ಸ್ವರದಿಂದಲೇ ಅಂತ್ಯಗೊಳ್ಳುತ್ತದೆ. ಅನ್ಯ ಭಾಷಿಗರು ತಮ್ಮ ಭಾಷೆಯ ಪ್ರಭಾವದಿಂದ 'ಕನ್ನಡ್ 'ಎನ್ನುವುದನ್ನು ನಾವು ಕೇಳುತ್ತಿರುತ್ತೇವೆ. ಅಲ್ಲಿಂದಲೇ ನಾವು ಅವರನ್ನು ತಿದ್ದಲು ಪ್ರಾರಂಭಿಸಬೇಕು. ಏಕೆಂದರೆ ಈ ಅರ್ಧಾಕ್ಷರ ಪ್ರಯೋಗ ಈ ಹೊಸಗನ್ನಡದಲ್ಲಿಲ್ಲ.

ನಮ್ಮ ಕನ್ನಡ ಭಾಷೆಯನ್ನು ಮೂರು ವಿಭಾಗಗಳಾಗಿ ವಿಂಗಡಿಸಿದರೆ ಮೈಸೂರು-ಬೆಂಗಳೂರು ಕನ್ನಡ, ಮಂಗಳೂರು ಕನ್ನಡ ಮತ್ತು ಹುಬ್ಬಳ್ಳಿ-ಧಾರವಾಡ ಕನ್ನಡ ಎಂದು ಹೆಸರಿಸಬಹುದು. ಭಾಷೆಯಲ್ಲೂ ಎಷ್ಟೊಂದು ವೈವಿಧ್ಯವಿದೆ ಎಂದರೆ ನಮ್ಮ ಕಡೆ ಪಂದ್ಯದಲ್ಲಿ ಬಾಜಿ ಕಟ್ಟಿದರೆ ಉತ್ತರ ಕರ್ನಾಟಕದಲ್ಲಿ ಬಟಾಟೆ ಪಲ್ಯಕ್ಕೆ ಬಾಜಿ ಅನ್ನುವ ಪ್ರಯೋಗವಿದೆ. ನಮ್ಮ ಕಡೆ 'ತಿಂಡಿ' ಎಂದರೆ ನಮಗೆ ಉಪಾಹಾರ. ಆದರೆ ಹುಬ್ಬಳ್ಳಿ-ಧಾರವಾಡದ ಕಡೆ ನವೆ. 'ಕೂಗುವುದನ್ನು' ಮಂಗಳೂರಿನವರು 'ಅಳು' ಶಬ್ದಕ್ಕೆ ಬಳಸಿದರೆ ಮೈಸೂರು-ಬೆಂಗಳೂರಿನವರು 'ಕರೆಯುವುದಕ್ಕೆ' ಬಳಸುತ್ತಾರೆ. ಹೀಗೆ ಅನೇಕ ವೈಪರೀತ್ಯಗಳಿದ್ದರೂ ನಮ್ಮನ್ನೆಲ್ಲಾ ಒಂದುಗೂಡಿಸುವ ಶಕ್ತಿ ಎಂದರೆ ಅದು ಕನ್ನಡ. ಕವಿಯವಾಣಿಯಂತೆ 'ನಮ್ಮದಾದ ಭಾಷೆಯು ನಿಮ್ಮದಾದ ಭಾಷೆಯು ಸೊಗಸಾದ ಕನ್ನಡವು ಅಲ್ಲವೇ?"

ಅಮೋಘವರ್ಷ ಕನ್ನಡದಲ್ಲಿ ಕವಿರಾಜಮಾರ್ಗವನ್ನು ಬರೆದಾಗ ಆಂಗ್ಲ ಭಾಷೆ ಇನ್ನೂ ಕಣ್ಣು ಬಿಟ್ಟಿರಲಿಲ್ಲ ಹಿಂದಿ ಭಾಷೆ ಹುಟ್ಟಿರಲೇ ಇಲ್ಲ. ಬಹುಶಃ ಇದನ್ನೆಲ್ಲಾ ಗುರುತಿಸಿ ಶ್ರೀ ವಿನೋಬಾ ಭಾವೆ ಅವರು ಕನ್ನಡ ಲಿಪಿಯನ್ನು ವಿಶ್ವ ಲಿಪಿಗಳ ರಾಣಿ ಎಂದು ಕರೆದರು. ವಚನ ಸಾಹಿತ್ಯದ ಉಗಮದೊಂದಿಗೆ ಕನ್ನಡ ಭಾಷೆ ಸಾಮಾನ್ಯ ಜನರನ್ನೂ ತನ್ನ ಹತ್ತಿರಕ್ಕೆಳೆದುಕೊಂಡಿತು. ಅದರಲ್ಲಿರುವ ಪ್ರಸ್ತುತ ಪರಿಸ್ಥಿತಿಯ ವರ್ಣನೆ ಜನರಿಗೆ ಬಹಳ ಹತ್ತಿರವಾಯಿತು. ಕೊನೆಗೆ ವಿಶ್ವದಲ್ಲೇ ತನ್ನ ಉಪಸ್ಥಿತಿಯನ್ನು ಸಾಬೀತುಪಡಿಸಿತು.

ಕನ್ನಡ ಬಾರದವರಿಗೆ ಕನ್ನಡ ಕಲಿಯಲು ತುಂಬಾ ಕಷ್ಟ ಎಂದೆನಿಸುತ್ತದೆ. ಕಾಗುಣಿತ ಬರೆಯುವಾಗ ಅಲ್ಪಪ್ರಾಣ ಮತ್ತು ಮಹಾಪ್ರಾಣಗಳ ದೋಷದಿಂದಾಗಿ ಭಾಷೆಯ ಸೌಂದರ್ಯ ಕೆಡುತ್ತದೆ. ಇನ್ನೂ ಕೆಲವು 'ಹ' ಕಾರ 'ಅ' ಕಾರಪ್ರಿಯರಿರುತ್ತಾರೆ. ಅತ್ಯುನ್ನತ ಕನ್ನಡದ ಸಭೆಗಳಲ್ಲಿ ಅವರು "ಎಲ್ಲರಿಗೂ ಹಾದರದ ಸ್ವಾಗತವನ್ನು ಕೋರಿಬಿಡುತ್ತಾರೆ". ಕನ್ನಡ ಭಾಷೆ

ಪ್ರಾಚೀನವಾದುದು, 'ಇತಿಆಸ' ಪ್ರಸಿದ್ಧ ಎನ್ನುವ ನುಡಿಮುತ್ತುಗಳನ್ನು ಅನಾಯಾಸವಾಗಿ ಉದುರಿಸುತ್ತಾರೆ. ಬಹುಶ: ಅವರು ಬೆಳೆದು ಬಂದ ಪರಿಸರ ಅಥವಾ ವಾತಾವರಣ ಇವೆಲ್ಲದುರ ಪರಿಣಾಮವಾಗಿ ಉಚ್ಚಾರಣಾ ದೋಷಗಳು ಪಾಯಸದಲ್ಲಿ ಇಂಗಿನ ವಗ್ಗರಣೆ ಹಾಕಿದಂತೆ ಭಾಸವಾಗುತ್ತದೆ. ತಿಳಿದವರು ಇದನ್ನು ಹಾಸ್ಯಕ್ಕೆ ಉಪಯೋಗಿಸುವುದರ ಬದಲಾಗಿ ಅಂತಹವರನ್ನು ತಿದ್ದುವ ಸಾಹಸ ಮಾಡಿದರೆ ಬಹುಶ: ಅಲ್ಪ ಪ್ರಮಾಣದ ಸಾಧನೆ ಮಾಡಿದಂತಾಗುತ್ತದೆ. ಇದು ಕ್ರಮೇಣ ಸರಿಹೋಗಬೇಕೇ ಹೊರತು ಒಂದೇ ಬಾರಿ ಸರಿಯಾಗಿ ಬಿಡುತ್ತದೆ ಎನ್ನುವ ನಿರ್ಧಾರಕ್ಕೆ ಬರುವಂತಿಲ್ಲ. ಸ್ವೀಕರಿಸುವವರ ಮನಸ್ಥಿತಿ ತಿಳಿ ಹೇಳುವವರ ಭಾಷಾ ಸಾಮರ್ಥ್ಯ ಇಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ.

ನಾನು 7-8ನೇ ಈಯತ್ತೆಯಲ್ಲಿದ್ದಾಗ ನನ್ನ ತಾಯಿ ನನಗೆ ಉಕ್ತಲೇಖನವನ್ನು ನೀಡುತ್ತಿದ್ದರು. 'ಜನಾರ್ದನ' ಎನ್ನುವ ಪದ ಹೇಳಿದಾಗ ನಾನು 'ಜನಾರ್ಧನ' ಮಹಾಪ್ರಾಣವನ್ನು ಬರೆದೆ. ಅದನ್ನು ನೋಡಿದ ಕೂಡಲೇ ಅವರು 'ಮಧುಸೂದನ' ಎನ್ನುವ ಹೆಸರು ಹೇಳಿದರು. ಅದರಲ್ಲೂ ನಾನು 'ಮಧುಸೂಧನ' ಎಂದು ಬರೆದೆ. ಉಚ್ಚಾರಣೆ ಮಾಡುವಾಗ ತಮ್ಮ ತುಟಿಯ ಚಲನೆ ಮತ್ತು ಎಲ್ಲಿ ಒತ್ತು ನೀಡಲಾಗುತ್ತಿದೆ ಎಂಬುದನ್ನು ಗಮನಿಸುವಂತೆ ಹೇಳಿದರು. ತಕ್ಷಣ ನನಗೆ ಎಲ್ಲಿ ತಪ್ಪು ಮಾಡಿದ್ದೇನೆ ಎನ್ನುವುದು ತಿಳಿಯಿತು. ನನಗೆ ಅಲ್ಪಪ್ರಾಣ ಮಹಾಪ್ರಾಣಗಳನ್ನು ಕಲಿಸಲು ನನ್ನ ಮುಂದೆ ಒಂದು ದೀಪವನ್ನು ಹಚ್ಚಿಟ್ಟು ವ್ಯಂಜನಾಕ್ಷರಗಳನ್ನು ಉಚ್ಚರಿಸುವಂತೆ ಮಹಾಪ್ರಾಣ ಉಚ್ಚರಿಸುವಾಗ ದೀಪ ನಂದಿಸಬೇಕು ಎನ್ನುವ ಎಚ್ಚರಿಕೆಯನ್ನು ನೀಡಿದರು. ಈ ಪ್ರಯೋಗ ಅತ್ಯಂತ ಸಫಲವಾಯಿತು ಮತ್ತು ಬರೆಯುವಾಗ ಅಲ್ಪಪ್ರಾಣ ಮಹಾಪ್ರಾಣಗಳ ಅನುಮಾನ ಬಂದಾಗ ಬಾಯಲ್ಲಿ ಉಚ್ಚರಿಸುವ ಪದ್ಧತಿ ಬಹಳ ಸಹಾಯವಾಗುತ್ತದೆ. ಇಂದಿಗೂ ನಾನು ಆ ಪ್ರಯೋಗವನ್ನು ಮಾಡುತ್ತೇನೆ.

ಕನ್ನಡಿಗರು ತಮ್ಮ ಭಾಷೆಯ ಬಗ್ಗೆ ಅತ್ಯಂತ ಸಹೃದಯತೆಯನ್ನು ತೋರುವರು ಎನ್ನುವ ಮಾತಿದೆ. ಕಾರಣ ಅನ್ಯ ಭಾಷಿಗರನ್ನು ಅವರ ಭಾಷೆಯಲ್ಲಿಯೇ ಮಾತನಾಡಿಸುವ ಔದಾರ್ಯ ನಮ್ಮಲ್ಲಿದೆ ನಿಜ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎನ್ನುವಂತೆ ಅವರ ಭಾಷೆಯಿಂದಲೇ ಮಾತನಾಡಿಸಿ ನಿಧಾನವಾಗಿ ಕ್ಯಾಪ್ಸ್ಯುಲ್ ರೀತಿಯಲ್ಲಿ ಕನ್ನಡವನ್ನು ಆವರಿಗೆ ಕಲಿಸಬೇಕಾಗುತ್ತದೆ. ಇದನ್ನು ಕನ್ನಡಿಗರ ಜಾಣ್ಮೆ ಎನ್ನಲೇಬೇಕು. ನಮ್ಮ ಸ್ನೇಹಿತರೊಬ್ಬರು 'ದೀವಾಲಿ ಕೀ ಶುಭಕಾಮನಾಎ ಎನ್ನುತ್ತಿದ್ದರು. ಕನ್ನಡದಲ್ಲಿ ದೀವಾಲಿ ಎಂದರೆ ಪಾಪರ್ ಚೀಟಿ, ಹಾಗಾಗಿ ನೀವು ದೀಪಾವಳಿ ಎನ್ನಿ ಎಂದು ಹೇಳಿದ್ದೆ. ಈ ವರ್ಷ ಅವರು ಸೊಗಸಾದ ಕನ್ನಡದಲ್ಲಿ 'ದೀಪಾವಳಿಯ ಶುಭಾಶಯಗಳು' ಎಂದು ಶುಭ ಕೋರಿದರು.

ಇನ್ನು ನಮ್ಮವರೇ ಆದರೂ ಕಾಗುಣಿತ ದೋಷಗಳಿಂದ ಹೊರಬಂದಿರುವುದಿಲ್ಲ. ನಾಮಫಲಕಗಳನ್ನು ಬರೆಸುವಾಗ ಆಗುವ ಗೊಂದಲಗಳಂತೂ ಹೇಳತೀರದು "ಇಲಿ ಹಾಲು ದೊರೆಯುತ್ತದೆ", "ಇಲ್ಲಿ ಮಾತ್ರ ಮಾಡುವಂತಿಲ್ಲ". ಮತ್ತೊಂದು ಆಭಾಸ ಎಂದರೆ ಆಂಗ್ಲ ಭಾಷೆಯಲ್ಲಿ ಕನ್ನಡದ ನಾಮಫಲಕಗಳು. ಕೆಲವು ಆಂಗ್ಲ ಭಾಷೆಯ ಪದಗಳು ಎಷ್ಟೊಂದು ಹಾಸುಹೊಕ್ಕಾಗಿವೆ ಎಂದರೆ ಕನ್ನಡದಲ್ಲಿ ಹೇಳಿದರೂ ಅರ್ಥವಾಗದಷ್ಟು ಆವರಿಸಿಕೊಂಡಿವೆ. ಉದಾಹರಣೆಗೆ ಪೊಲೀಸ್, ಇಂಜಿನಿಯರ್, ಅಡ್ವೋಕೇಟ್ ಇತ್ಯಾದಿ ವೃತ್ತಿಪರ ಹೆಸರುಗಳು. ಮನೆಯಲ್ಲಿ ಹಿರಿಯರೊಬ್ಬರು ಕೆಲಸದಾಕೆಗೆ "ಸ್ವಲ್ಪ ಸ್ವಚ್ಛಾವಾಗಿ ಸಾರಿಸಮ್ಮ ಎಂದರೆ 'ಏನು ಏನು' ಎಂದು ಬಾಯಿ ಬಾಯಿಬಿಡುವ ಕೆಲಸದಾಕೆಗೆ 'ಕಿಲೀನಾಗಿ ಸಾರಿಸಮ್ಮ' ಎಂದರೆ ಮಾತ್ರ ಅರ್ಥವಾಗುತ್ತದೆ.

ಇತ್ತೀಚಿನ ನಮ್ಮ ಯುವಜನತೆ ಮಾತನಾಡುವಾಗ ಬಹು ಭಾಷೆಗಳ ಸಮ್ಮಿಶ್ರಣದಲ್ಲಿ ಮಾತನಾಡುವುದನ್ನು ಕೇಳಲು ಬಹಳ ಮುಜಗರವೇನಿಸುತ್ತದೆ. ಉದಾಹರಣೆಗೆ 'ವೈ ರಾ?", "ಕಂ ಡಾ", "ಹಲೋ ಮಚ್ಚಾ" ಇವೆಲ್ಲಾ ಕಿಟೆಲ್ ಶಬ್ದಕೋಶದಲ್ಲಾಗಲಿ ಜಿ.ವಿ. ಅವರ ಶಬ್ದಕೋಶದಲ್ಲಾಗಲಿ ಇಲ್ಲವಾದರೂ ಹೊಸ ಶಬ್ದ ಭಂಡಾರವು ಬಾಯಿಂದ ಬಾಯಿಗೆ ಹರಡಿ ಚಿರಪರಿಚಿತವಾಗಿವೆ. ಕೆಲವು ಸಮೂಹ ಮಾಧ್ಯಮಗಳಲ್ಲಿ ಊಟ ಆಯ್ತಾ ಎನ್ನುವ ಸೊಗಸಾದ ಕನ್ನಡ ಪದಕ್ಕೆ "ಬ್ಯಾಟಿಂಗ್ ಆಯ್ತಾ" ಎನ್ನುವ ಪ್ರಯೋಗವಿದೆ. ಹುಡುಕುತ್ತಾ ಹೋದರೆ ಒಂದು ವಾಕ್ಯದಲ್ಲಿ ಎಷ್ಟು ಕನ್ನಡ ಪದ ಇದೆ ಎಂದು ಹುಡುಕಬೇಕಾಗುತ್ತದೆ. ಕೆಲವೊಮ್ಮೆ ಕ್ರಿಯಾಪದಗಳು ಮಾತ್ರ ಕನ್ನಡದಲ್ಲಿದ್ದು ಮತ್ತೆಲ್ಲಾ ಪದಗಳು ಬೇರೆ ಭಾಷೆಯಲ್ಲಿರುತ್ತವೆ.

ಬದಲಾವಣೆ ಅನಿವಾರ್ಯ ಆದರೆ ನಮ್ಮತನವನ್ನು ಬಿಡದೆ ಸಾಧ್ಯವಾದಷ್ಟು ಮಟ್ಟಿಗೆ ಪ್ರೀತಿಯಿಂದ ಕನ್ನಡ ಪದದ ಬಳಕೆ ಮಾಡಿದರೆ ಕೇಳಲು ಇಂಪಾಗಿರುತ್ತದೆ ಎಂದು ಕ್ರಮೇಣ ಮನವರಿಕೆ ಮಾಡಿಕೊಟ್ಟರೆ ಸಾಧ್ಯವಾಗುತ್ತದೆ. ಅಸಾಧ್ಯವಂತೂ ಖಂಡಿತಾ ಅಲ್ಲ. ಒಮ್ಮೆ ರೈಲಿನಲ್ಲಿ ಪ್ರಯಾಣ ಮಾಡುವಾಗ ವೇಲ್ಸ್ ನಿಂದ ದಂಪತಿಗಳು ಭಾರತೀಯ ಭಾಷಾ ಸಂಸ್ಥಾನ, ಮೈಸೂರಿನಲ್ಲಿ ಅಧ್ಯಯನಕ್ಕಾಗಿ ಬರುತ್ತಿದ್ದರು. ನಮ್ಮ ವೇಲ್ಸ್ ಭಾಷೆ ಇತ್ತೀಚೆಗೆ ಸಾಯುತ್ತಿದೆ ಅದನ್ನು ಉಳಿಸಿ ಬೆಳೆಸಲು ನಾವು ಭಾಷಾ ಸಂಸ್ಥಾನಕ್ಕೆ ಬಂದಿದ್ದೇವೆ ಎನ್ನುವ ಮಾತನ್ನವರು ಆಡಿದರು. ಭಾಷೆ ಎನ್ನುವುದು ನಿರಂತರ ಹರಿಯುವ ನೀರು ಇದ್ದ ಹಾಗೆ. ಪೋಷಿಸಿ ಬೆಳೆಸುವುದು ನಮ್ಮ ಪ್ರತಿಯೊಬ್ಬರ ಕರ್ತವ್ಯ. ಬೇರೆಯವರು ಮಾಡಬೇಕಿತ್ತು ಎನ್ನುವುದಕ್ಕಿಂತ ನಾವೇ ಮಾಡೋಣ ಎನ್ನುವ ಸಂಕಲ್ಪದಿಂದ ಹೆಸರಾದ ಕನ್ನಡವನ್ನು ಉಸಿರಾಡುವಂತೆ ಮಾಡುವ ಹೊಣೆಗಾರಿಕೆಯನ್ನು ತೆಗೆದುಕೊಳ್ಳೋಣವೇ?

***

ಜೋಗಿತಿ

– ರಾಧಿಕಾ. ವಿ. ಗುಜ್ಜರ್

ಚುಕ್ಕಿ ಬಡಿದ ಮಾಟವಾದ ಹೊಳೆವ ಕೊಡ
ಸಂಸಾರದ ಗಂಧವಿರದ ತಾಮ್ರದ ಕೊಡ
ಸಿಗ್ಗಿಲ್ಲದೆ ನಿತ್ಯ ಬೆಳಗಿ ತೊಳೆಯುವ
ನನ್ನದೇ ಹಣೆಬರಹದಂತಹ ಕೊಡ

ಬಾಲ್ಯವು ಜೋಳಿಗೆಯಿರದ ಅಲೆದಾಟ
ಕೊಡದ ಸಾಲು ಚುಕ್ಕಿಗಳಂತೆ ಬಡಿದಾಟ
ಭವಿಷ್ಯಕ್ಕೊಂದು ಗೆರೆಯೇ ಇರದಾಟ
ಸಾಕಲಾರದವರಲ್ಲಿ ಮಮತೆಗೆ ಹುಡುಕಾಟ

ಆತ್ಮಲಿಂಗದ ಬೆಲೆಯನರಿಯದ ಜಗದಿ
ಲಿಂಗದ ಗುರುತಿಲ್ಲದ ನಾ ಪರದೇಸಿ
ಹೆತ್ತವರು ಇಳಿಸಲೋಸುಗ ತಲೆಭಾರ
ಹೊರಿಸಿದರೆನಗೆ ದೇವಿದೀಕ್ಷಾ ಭಾರ

ಬದುಕ ಕಹಿಯೇ ಬೇವಿನ ಕುಡಿಗಳಾಗಿ
ಹೊತ್ತ ತಲೆಯ ಕೊಡಕೆ ಅಲಂಕಾರವು
ನಿತ್ಯ ಸುಮಂಗಲಿ ಪಟ್ಟ ಪಡೆದಿದ್ದರು
ಮಂಗಳದ ಸೊನ್ನೆಯಳಿದು ಮಗಳಾಗೆನು

ಹೆರೆಯುತಿರುವೆ ಗಲ್ಲದ ಗಡ್ಡ, ಮೀಸೆ
ಗಡಸು ದೇಹ, ಏರುದನಿಯೇ ಅಸ್ತ್ರ
ದುಡಿಯಲು ಕುದುರೆಯ ಬಲವಿದ್ದರೂ
ದಗದ ಸಿಗಲಾರದ ಪಂಥದ ಪಾತ್ರ

ಅಲ್ಲೂ ಇಲ್ಲೂ ಎಲ್ಲೂ ಸಲ್ಲೆನೇನೋ?
ಅಸಲಿಗೆ ನರ ಜನ್ಮಕೆ ಸಲ್ಲೆನೇನೋ?
ಹೆಸರಿರದ ಕಾಯಕೆ ಕವಡೆ ಸರವೇ?
ಭಂಡಾರ, ಪರಡಿ, ಹಸಿರು ಬಳೆ, ದೇವಿ ಮುತ್ತೇ?

ಪ್ರಶ್ನೆಗಳ ಝಳಕೆ ಕರಗುವ ಕಣ್ಣೀರು
ಪ್ರಶ್ನಿಸಿದವು ದೇವಿಯ ಇದೆಂಥ ಜೀನು?
ಗೋಂಧಳದ ಏಕತಾರಿ ಬೀಗಿ ಕಂಪಿಸಿತು
ಬಿಗಿದ ಕಾಲುಗಳ ಗೆಜ್ಜೆ ಹೂಂಕರಿಸಿತು

ಶಿರದ ಕೊಡಕೆ ಕೈಯೊಂದನಿತ್ತವಳೆ
ಸೀರೆ ಬಿಗಿದು ಮೀಟಿ ಮೈ ಸೆಟೆದೆ
ನಿಗಿ ನಿಗಿ ಕೆಂಡದ ಕೆಂಪಿಗೆ ಕರಗುತ
ದೇವಿ ಹೊಕ್ಕಳೆನ್ನ ಸಾಂಬ್ರಾಣಿಯಂತೆ

ಭಕ್ತಿಯಿಂದ ಕುಣಿದು ಭಗವತಿ ದಾಸಿಯಾಗಿ
ಜೋಗಿತಿ ನಾ ಪಡೆದೆ ಪದೋನ್ನತಿಗೆ ರಹದಾರಿ
ರೇಣುಕಾಮಾತಾ ನೀನ್ನಾಲ್ಕ್ ಉಧೋ ಉಧೋ
ಸಪ್ತಶೃಂಗಿ ನಿನ್ನಾಲ್ಕ್ ಉಧೋ ಉಧೋ

ಉಧೋ ಉಧೋ ಉಧೋ ಉಧೋ

***

ಯತ್ನ ಮತ್ತು ವಿಫಲತೆ – ಲೇಖನ ಮಾಲೆ – 9

ಮ್ಯಾಡ್ ಮ್ಯಾಡ್ ಮ್ಯೂಸಿಕ್ ವರ್ಲ್ಡ್

– ಮಾಧುರಿ ಕೃಷ್ಣ

ಅಂದು ಬಿಡುವಾಗಿ ಸೋಫಾದಲ್ಲಿ ಮೈ ಚೆಲ್ಲಿಕೊಂಡು ಕುಳಿತಿದ್ದೆ. ಬಾಗಿಲೂ ತೆರೆದಿತ್ತು. ರಾಯಲ್ ಎನ್‌ಫೀಲ್ಡ್ ಬೈಕು ಗುಡುಗುಡಾಯಿಸಿಕೊಂಡು ಬಂದು ನಿಂತ ಸದ್ದಾಯಿತು. ಸೋದರಳಿಯ 'ಠಣಾರ್' ಎಂಬ ಶಬ್ದದೊಂದಿಗೆ ಗೇಟು ತೆರೆದು, ತಿರುಗಿ ಮುಚ್ಚದೇ ಒಳಗೆ ಪ್ರವೇಶಿಸಿ, "ಬೇಗ ಆಂಟೀ... ಹೊರಡಿ" ಎಂದ.

ಚಕಿತಳಾಗಿ ಸರಿಯಾಗಿ ಕುಳಿತುಕೊಳ್ಳಲೆತ್ನಿಸುತ್ತ "ಎಲ್ಲಿಗಪ್ಪಾ?'' ಎಂದೆ.

"ಹೇಳುತ್ತೇನೆ, ಮೊದಲು ನೀವೀಗ ಹೊರಡಿ!" ಎಂದು ಆಜ್ಞೆಯನ್ನೇ ಕೊಟ್ಟುಬಿಟ್ಟ!

"ಹಾಗೆಂದರೆ ಹೇಗೇ? ಎಲ್ಲಿಗೆಂದು ಹೇಳು.. ಅದೂ ಈ ಬಿಸಿಲಿಗೆ..!''

"ಅಯ್ಯೋ ಹೊರಡೀಪ್ಪಾ... ಈ ಸೀರೇನೇ ಸಾಕು, ಬಂದು ಬೈಕ್ ಹತ್ತಿ" ಎಂದು ಒಳಗಿಟ್ಟ ಕಾಲು ಹಿಂದೆ ತೆಗೆದು ಇದ್ದೊಂದು ಮೆಟ್ಟಿಲನ್ನು ಇಳಿದೇಬಿಟ್ಟ.

"ಬಂದು ಬಿಡಿ, ದಾರಿಯಲ್ಲಿ ಎಲ್ಲಾ ಹೇಳುತ್ತೇನೆ" ಎನ್ನುತ್ತಲೇ ಗೇಟನ್ನೂ ದಾಟಿ ಬೈಕ್ ಬ್ಯಾಲೆನ್ಸ್ ಮಾಡಿ ಕಿಕ್ ಹೊಡೆದೇಬಿಟ್ಟ. ಈ ಪಾಟಿ ಅವನ ಅವಸರಕ್ಕೆ ಗಡಿಬಿಡಿಗೊಂಡ ನಾನು, 'ಇವನಿಂದ ಇನ್ನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ!' ಎಂದು ಮನಗಂಡು ಕೆದರಿದ್ದ ತಲೆಗೂದಲನ್ನಾದರೂ ಬಾಚಿಕೊಳ್ಳೋಣವೆಂದು ಕೋಣೆಗೆ ಹೊರಟರೆ, ಊಟಾನಂತರ ತಪ್ಪದೆ ವಿಶ್ರಾಂತಿ ತೆಗೆದುಕೊಳ್ಳುವ ಯಜಮಾನರು, "ಎಲ್ಲ ಸರಿಯಿದೆ... ಹೋಗು ಹೋಗು, ನಿನ್ನ ಮುಖಕ್ಕೆ ಪೌಡರೇನೂ ಬೇಕಿಲ್ಲ. ನಾನು ಬಾಗಿಲು ಹಾಕಿಕೊಳ್ಳುತ್ತೇನೆ" ಎಂದವರು, "ಅವನು ಅದ್ಯಾವುದಾದರೂ ಕನ್ಯೆಯನ್ನು ನಿನಗೆ ಪರಿಚಯಿಸಲು ಹವಣಿಸಿರಬೇಕು, ತಡ ಮಾಡದೇ ಬೇಗ ಹೋಗು!" ಎಂದು ಪಟಾಕಿ ಹೊಡೆದುಬಿಟ್ಟರು.

ಯಜಮಾನರ ಈ ಪಟಾಕಿ ನನ್ನೆದೆಯಲ್ಲಿ ಸಿಡಿದು, 'ಇರಬಹುದು... ಇರಬಹುದು!' ಎಂಬ ಆಶಾವಾದವನ್ನು ಹುಟ್ಟಿಸಿ, ಪೌಡರೂ ಬೇಡ, ಬಾಚಿಕೊಳ್ಳುವುದೂ ಬೇಕಿಲ್ಲ! ಎಂಬ ದೃಢ ನಿರ್ಧಾರ ತಾಳಿ, ಕಾಲಿಗೊಂದು ಚಪ್ಪಲಿ ಸಿಕ್ಕಿಸಿಕೊಳ್ಳುತ್ತ, "ಗೇಟ್ ಹಾಕಿ ಬಿಡಿ" ಎಂದು ಓಡಿಕೊಂಡು ಹೋಗಿ, ಆಗಲೇ ಗುರ್ ಎನ್ನುತಿದ್ದ ಬೈಕನ್ನು ಹಾರಿ ಏರಿಕೊಂಡು ಸೋದರಳಿಯನ ಭುಜವನ್ನು ಮುಷ್ಟಿಯಲ್ಲಿ ಬಿಗಿ ಹಿಡಿದೆ. ಅಷ್ಟೇ ಅಲ್ಲ, ಮುಂದೆ ಸಾಗುತಿದ್ದಂತೆ ನನ್ನ ಮರ್ಕಟ ಮನಸ್ಸು ಸುಮ್ಮನಿರಲಾರದೇ, "ಏನು ಮಾರಾಯಾ, ಕ್ಲಾಸ್ ಮೇಟೋ ಅಥವಾ ಕಲೀಗೋ?" ಎಂದೇಬಿಟ್ಟೆ.

"ಸ್ವಲ್ಪ ಸುಮ್ಮನೆ ಕುಳಿತುಕೊಳ್ಳುತ್ತೀರಾ.. ಮೊದಲೇ ನಿಮ್ಮನ್ನು ಬ್ಯಾಲೆನ್ಸ್ ಮಾಡಲಾಗುತಿಲ್ಲ!'' ಎಂದು ಪರೋಕ್ಷವಾಗಿ ನನ್ನನ್ನು ದೂರಿಬಿಟ್ಟ. ಅಲ್ಲಿಗೆ ನಾನು, 'ಇವನೊಬ್ಬ ಬಾಕಿ ಇದ್ದ ನನ್ನ ತೂಕವನ್ನು ಎತ್ತಿ ತೋರಿಸಲು!" ಎಂದು ಗೊಣಗಿಕೊಂಡರೂ ಬೇಗನೇ ನನ್ನ ಊಹಾಲೋಕಕ್ಕೆ ಹಿಂದಿರುಗಿ, 'ಹೇಗಿದ್ದಾಳೋ, ಎತ್ತರ ಎಷ್ಟಿದ್ದಾಳೋ, ಬಣ್ಣ ಯಾವುದಿದೆಯೋ, ಖಂಡಿತ ಚೆಂದವೇ ಇರಬೇಕು ಈ ಮಾಣಿ ಅಟ್ರಾಕ್ಟ್ ಆಗಿದ್ದಾನೆಂದರೆ... ಹಾಗೆಯೇ ಕುಲ ಗೋತ್ರ ಮನೆತನಗಳೆಲ್ಲ ನಮಗೆ ಸರಿಯಾಗಿ ಇರಲಪ್ಪ ಓ ಉಡುಪಿ ಕೃಷ್ಣಾ! ಎಂದಂದುಕೊಳ್ಳುತ್ತಿರುವಾಗಲೇ ಬೈಕು ನಿಂತು ಸೋದರಳಿಯನ ಗಟ್ಟಿ ಕಂಠ ಒದರಿ ಬಂತು.

"ಇಳೀರಿ... ಆಂಟೀ.." ಫಕ್ಕನೆ ಬೆಚ್ಚಿದಂತಾಗಿ ಕಣ್ಣು ಬಿಟ್ಟೆ.. ಯಾವುದೋ ವೆಹಿಕಲ್ ಪಾರ್ಕಿಂಗ್ ಲಾಟ್!

‘‘ಇದು... ಇದೂ... ‘‘

.

"ಅದೆಲ್ಲ ಆಮೇಲೆ! ಈಗ ನನ್ನ ಹಿಂದೆ ವೇಗವಾಗಿ ಬನ್ನೀ " ಎಂದು ಭರದಿಂದ ನಡೆದು ಬಾಗಿಲೊಂದರೊಳಗೆ ನುಗ್ಗಿದ. ಒಳಗೆ ಅರೆ ಕತ್ತಲಿದ್ದರೂ ಮೊದಲ ಸಾಲಿಗೆ ಕೈ ಹಿಡಿದು ನಡೆಸಿಕೊಂಡು ಹೋಗಿ, "ಕುಳಿತಿರಿ ಆಂಟೀ.." ಎಂದು ನನ್ನನ್ನು ಕೂರಿಸಿ, ಇನ್ನಾರಿಗೋ, ‘‘ಥ್ಯಾಂಕ್ಸ್ ಕಣೋ " ಎಂದಂದು ರವೀಂದ್ರ ಕಲಾಕ್ಷೇತ್ರದ ಆ ಮಹಾವೇದಿಕೆಯ ಬದಿಯಲ್ಲಿದ್ದ ಮೂರು ಮೆಟ್ಟಿಲುಗಳನ್ನು ಸರಸರನೆ ಏರಿ ನೇಪಥ್ಯದ ಬಾಗಿಲೊಂದರಲ್ಲಿ ನುಸುಳಿ ಮಾಯವಾದ.

ಏನೊಂದೂ ಅರ್ಥೈಸಲಾಗದೆ ಪೆಚ್ಚಾಗಿ ಕುಳಿತ ನಾನು, ಫಕ್ಕನೆ ಝಗಮಗಿಸತೊಡಗಿದ ವೇದಿಕೆಯನ್ನು ನೋಡತೊಡಗಿದಾಗ ತಲೆಗೆ ಬಣ್ಣ ಬಣ್ಣದ ಹೂಗಳಿದ್ದ ಅಗಲ ತಲೆಪಟ್ಟಿ ಕಟ್ಟಿ, ಹಾಕಿದ್ದ ಶರ್ಟು ತೆಗೆದು, ಕಡು ಹಸಿರು ನೀಲಿ ಬಣ್ಣದ ಚಿತ್ರಗಳಿಂದ ಅಲಂಕೃತಗೊಂಡ ನಗ್ನ ಎದೆ ತೋಳುಗಳ ಮೇಲೆ ಗಿಟಾರ್ ತೂಗಾಡಿಸಿ ಮೀಂಟುತ್ತ, ಪ್ರಸಿದ್ಧ ಈಗಲ್ಸ್ ಬ್ಯಾಂಡ್‌ನ 'ಹೋಟೇಲ್ ಕ್ಯಾಲಿಫೋರ್ನಿಯಾ' ಎಂಬ ಲೇಟೆಸ್ಟ್ ಪಾಪ್ ಗೀತೆಯನ್ನು ಗಿಟಾರಿನ ಮಧುರ ಮೀಂಟನೊಂದಿಗೆ ಜೋಡಿಸುತ್ತ ಧನುರ್ವಾತ ಬಂದವನಂತೆ ತಲೆಯನ್ನೂ ಕೈ ಕಾಲುಗಳನ್ನೂ ಅದುರಿಸುತ್ತ ವೇದಿಕೆಯ ತುತ್ತತುದಿಗೆ ಬಂದು ನನ್ನನ್ನೇ ದಿಟ್ಟಿಸುತ್ತ ಕುಣಿಯತೊಡಗಿದ. ಅವನ ಹಿಂದೆಯೇ ನಾಲ್ಕಾರು ಹುಡುಗರೂ ಬಂದು ಸಾಥ್ ಕೊಟ್ಟರು. ಅಷ್ಟರಲ್ಲೇ ಅಲ್ಲಿ ಕಿಕ್ಕಿರಿದು ತುಂಬಿದ್ದ ಜನಸ್ತೋಮ ಹುಚ್ಚುಗಟ್ಟಿ ತಾವೂ ಎದ್ದುನಿಂತು ಅವನೊಂದಿಗೆ ಕೈಕಾಲು ವದರುತ್ತ ತಾವೂ ಕುಣಿಯತೊಡಗಿದರು.

'ಹೋಟೇಲ್ ಕ್ಯಾಲಿಫೋರ್ನಿಯಾ... ಆನ್ ಎ ಡಾರ್ಕ್ ಹೈ ವೇ.. ಕೂಲ್ ವಿಂಡ್ ಇನ್ ಮೈ ಹೇರ್....'' ಅಲ್ಲೊಂದು ಮ್ಯಾಡ್ ಮ್ಯಾಡ್ ಮ್ಯೂಸಿಕ್ ಪ್ರಪಂಚವೇ ಸೃಷ್ಟಿಯಾಯಿತು. ರಂಗದ ಮೇಲಿನ ಆ ಅಕರಾಳ ನೃತ್ಯ ಪ್ರದರ್ಶನದಲ್ಲಿ ಕನ್ಯೆಯೊಬ್ಬಳನ್ನು ಹುಡುಕುವ ನನ್ನ ಯತ್ನ ವಿಫಲಗೊಂಡು ಕುಸಿದು ಕುಳಿತುಬಿಟ್ಟೆ.

***

ಭಾರತದ ನಾರೀಶ್ವರಿಯರು

– ಶೀಲಾ ಅರಕಲಗೂಡು

ಜಗದಾದಿಯಿಂದಲೂ ಧೀ ಶಕ್ತಿ ತೋರುತಿಹ
ಭಾರತದ ನಾರಿಯರು ನಾವಲ್ಲವೆ? ॥ ಪಲ್ಲವಿ ॥

ಕೃತ ಯುಗವೊ ತ್ರೇತವೋ ದ್ವಾಪರವೊ ಕಲಿಯುಗವೊ
ಎಲ್ಲ ಕಾಲಗಳಲ್ಲು ನೋಡವಳ ಮಹಿಮೆ ।
ಭಾರತೀಯತೆಯನ್ನು ಅದರ ಸೊಗ ಸಾರವನು
ಎತ್ತಿ ಹಿಡಿದಿಹಳವಳು ಮುಗಿಲೆ ಸೀಮೆ ॥ ೧ ॥

ಪ್ರಕೃತಿಯಂತೆಯೆ ನಮ್ಮ ಭಾರತದ ಮಹಿಳೆಯರು
ಹಸಿರಾಗಿ ಕಂಗೊಳಿಸಿ ಜೀವ ತುಂಬುವರು ।
ಕಸವ ರಸವಾಗಿಸುತ ಫಲ ಪುಷ್ಪ ನೀಡುತ್ತ
ಸಂಸಾರ ನೊಗ ಹೊತ್ತು ತೇರೆಳೆವರು ॥ ೨ ॥

ಕ್ಷೇತ್ರ ಯಾವುದೆ ಇರಲಿ ತೊಡಗಿಕೊಳ್ಳುವಳವಳು
ಹೊಸತನವನದರಲ್ಲಿ ತೋರಬಲ್ಲವಳು ।
ಹಲ ಬಗೆಯ ಪಾತ್ರದಲಿ ದುಡಿಯುತ್ತ ಮಿಂಚುತ್ತ
ಬೇರೊಂದೆ ಮಜಲನ್ನು ಸೃಜಿಸುವವಳು ॥ ೩ ॥

ಸಂಗೀತ ಸಾಹಿತ್ಯ ವಿಜ್ಞಾನ ಚಿತ್ರಕಲೆ
ಸಕಲ ಕಲೆಗಳಲವರು ಮುಂಚೂಣಿಯಲ್ಲಿ ।
ಕಷ್ಟಗಳನೆದುರಿಸುತ ನೋವುಗಳ ನುಂಗುತ್ತ
ಗುರಿ ಬಿಡದೆ ಹೋರಾಡಿ ಗೆಲುವರಲ್ಲಿ ॥ ೪ ॥

ಇತಿಹಾಸ ಪುಟಗಳಲಿ ಬಂಗಾರದಕ್ಷರದಿ
ಕಾಣಬಹುದವರನ್ನು ಕೋಟಿ ಸಂಖ್ಯೆಯಲಿ ।
ಶೌರ್ಯವನು ಮೆರೆದಿರುವ ಸಾಮ್ರಾಜ್ಯ ಕಟ್ಟಿರುವ
ಮಹಿಳೆಯರ ಹೆಸರಿಹುದು ಕಥೆ ಕಥೆಯಲಿ ॥ ೫ ॥

ಶಿಷ್ಟರಿಗೆ ನಾರಿಯೊಲು ದುಷ್ಟರಿಗೆ ಮಾರಿಯೊಲು
ಸಮಯಕ್ಕೆ ತಕ್ಕಂತೆ ಕಾರ್ಯವೆಸಗುವಳು ।
ಮಹಿಳೆಯರ ಸನ್ಮಾನ ದೈವ ನೆಲೆಸುವ ತಾಣ
ಇದನರಿತ ಭಾರತಕೆ ವರವಾದಳು ॥ ೬ ॥

***

ಯೆಂಡ್ಕುಡುಕ ರತ್ನ ಮತ್ತು ಕನ್ನಡ ಪ್ರೇಮ!

- ಎಲ್. ಗಿರಿಜಾ ರಾಜ್

ಸಿರಿಕಂಠದ, ಅಪ್ಪಟ ಕನ್ನಡ ಪ್ರೇಮಿ ಎಂದೆನಿಸಿದ ರಾಜರತ್ನಂ ತಮ್ಮ ಅದ್ವಿತೀಯ ಮೇಧಾಶಕ್ತಿಯಿಂದ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೈಯಾಡಿಸಿ, ಕನ್ನಡ ಸಾರಸ್ವತ ಪ್ರಪಂಚಕ್ಕೆ ಅಪೂರ್ವ ಕೊಡುಗೆ ನೀಡಿದ ಅರಿತ, ನುರಿತ ಅನುಭವಿ ಬರಹಗಾರರು.

ಸಂಸ್ಕೃತ ಭೂಯಿಷ್ಟವಾದ ಕನ್ನಡ ಅಥವಾ ವಿಭ್ರಮ ವಿಲಾಸಗಳಿಂದ ರಚಿತವಾದ ದೊಡ್ಡ ದೊಡ್ಡ ಭಾವಾವೇಶದ ಕವನಗಳು, ಸಾಮಾನ್ಯನನ್ನು ಮುಟ್ಟಲಾರವೆಂದು ಮನಗಂಡು ತಾವು ಲೋಕಕ್ಕೆ ಸಮರ್ಥವಾಗಿ ಸಾರಬೇಕೆಂದಿದ್ದ ನೀತಿ ಮತ್ತು ಅನುಭವಾಮೃತವನ್ನು ಹಳೇ ಮೈಸೂರು ಭಾಷೆಯ, ಬನಿ ತುಂಬಿದ ಜನ ಸಾಮಾನ್ಯನ ನೈಜ ಶೈಲಿಯಲ್ಲಿ ತಮ್ಮದೇ ಆದ ಗತ್ತು ಗಮ್ಮತ್ತುಗಳನ್ನು ತುಂಬಿ ಕನ್ನಡ ಸಾಹಿತ್ಯದಲ್ಲಿ ಅದಕ್ಕೊಂದು ಶಾಶ್ವತ ಕಿಮ್ಮತ್ತು ಕಲ್ಪಿಸಿಕೊಂಡಿದ್ದಾರೆ. ಶ್ರೀ ಟಿ.ಪಿ.ಕೈಲಾಸಂ ಅವರ ಪದಗಳ ಶೈಲಿಯ ಛಾಯೆ, ಪ್ರಭಾವ ಇವರ ಮೇಲೆ ಬಿದ್ದಿದ್ದರೂ ವಿಚಾರಗಳಲ್ಲಿ ಪೂರಾ ಭಿನ್ನ. ರತ್ನನ ಪದಗಳನ್ನು ವಿಮರ್ಶಿಸುತ್ತಾ ಶ್ರೀ ಕೆ.ಎಸ್. ನಿಸಾರ್ ಅಹ್ಮದ್ ಅವರು, "ರತ್ನನ ಪದಗಳನ್ನು ಛಂದಸ್ಸಿನ ಓಟಕ್ಕೆ ಚ್ಯುತಿಬರದ ಹಾಗೆ ಸ್ಪಷ್ಟವಾದ ಮಾತುಗಳಲ್ಲಿ ಬರೆದರೆ ಅದು ಸಪ್ಪೆಯಾಗುವುದು. ಅದು ಇದ್ದಹಾಗೆ ಇರುವುದೇ ಅದರ ವೈಶಿಷ್ಟ್ಯ. ಯಂಡ್ಕುಡುಕನ ಬಾಯಲ್ಲಿ ಶಿಷ್ಟಪದಗಳು ಬರಲು ಹೇಗೆ ಸಾಧ್ಯ? ಆ ಸತ್ಯ ಗೊತ್ತಿದ್ದರಿಂದಲೇ ಅವರು ಹೊಸ ದಾರಿ ಕಂಡುಕೊಂಡರು" ಎಂದಿದ್ದಾರೆ.

ಬಹುತೇಕ ರತ್ನನ ಪದಗಳಲ್ಲಿ ಒಂದೊಂದು ಸಾಲಿನಲ್ಲಿಯೂ ಸಮಾಜದ ಅಂಕುಡೊಂಕು, ಮನುಷ್ಯನ ನಡೆ-ನುಡಿ, ನೀತಿ, ನಿಯಮಗಳ ಮೇಲೆ ಬೆಳಕು ಚೆಲ್ಲುವ ತೀಕ್ಷ್ಣ ಪದಗಳು ತಟಕ್ಕನೆ ಎದುರಾಗಿ ತಮ್ಮ ಸಮಯೋಚಿತ, ಅದ್ಭುತ ರಚನೆಯಿಂದ ಅಚ್ಚರಿಗೊಳಿಸುತ್ತವೆ. ರತ್ನನ ಪದಗಳನ್ನು ಓದಿದ ನಂತರವೂ ಅನುರಣಿತವಾಗುತ್ತಾ ಅವನ್ನು ಮತ್ತೆಮತ್ತೆ ಮೆಲುಕು ಹಾಕುವ ವಿಚಿತ್ರ ಗೇಯ ಗುಣ, ಆಕರ್ಷಣೆಯನ್ನು, ಅದರ ವೈಚಾರಿಕ ನಿಲುವು ಸಾರ್ವಕಾಲಿಕತೆಯನ್ನು ಸದಾ ಉಳಿಸಿಕೊಂಡಿದೆ. ರತ್ನನ ಅಪ್ಪಟ ಕನ್ನಡ ಪ್ರೇಮ ವ್ಯಕ್ತವಾಗಿರುವ ರೀತಿ ನೋಡಿ.

"ಯೆಂಡ, ಎಡ್ತಿ ಕನ್ನಡ ಪದಗೊಳ್ ಅಂದ್ರೆ ರತ್ನಂಗ್ ಪ್ರಾಣ, ಬುಂಡೇನ್ ಎತ್ತಿ ಕುಡುದ್ಬುಟ್ಟಾಂದ್ರೆ ತಕ್ಕೊ ಪದಗೊಳ್ ಬಾಣ... ದೇವರೇನಾದ್ರೂ ಪ್ರತ್ಯಕ್ಷವಾಗಿ ಎಂಡ ಬುಟ್ಟೆ ಎಡ್ತೀನ್ ಬುಟ್ಬುಡು ಅಂದ್ರೆ, ಕಳೆದೋಯ್ತ್ ಅಂತ ಕುಣಿದಾಡ್ತೀನ್ ದೊಡ್ಡೊಂದ್ ಕಾಟ, ತೊಂದ್ರೆ..." ಎನ್ನುತ್ತಾನೆ. ಅದರೆ "ಎಂಡ ಎಡ್ತಿ ಎರಡನ್ನೂ ಬಿಟ್ಟೆ, ಕನ್ನಡ್ ಪದಗೊಳ್ ಆಡೋದ್ನೆಲ್ಲ ನಿಲ್ಲಿಸ್ ಬುಡಬೇಕ್ ರತ್ನ" ಅಂದರೆ, ಆಗ ನೋಡಬೇಕು ಅವನ ಸಿಟ್ಟು! "ದೇವ್ರಾದ್ರೇನು ಮಾಡ್ತೀನ್ ಔನ್ಗೆ ಖತ್ನ" ಅನುತ್ತಾನೆ. "ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ, ಬಾಯ್ ಒಲಿಸಾಕಿದ್ರೂನು, ಮೂಗ್ನಲ್ ಕನ್ನಡ್ ಪದವಾಡ್ತೀನಿ ನನ್ ಮನಸನ್ ನೀ ಕಾಣೆ, ಯೆಂಡ ಓಗ್ಲಿ, ಯೆಡ್ತಿ ಓಗ್ಲಿ ಎಲ್ಲಾ ಕೊಚ್ಕೊಂಡ್ ಓಗ್ಲಿ! ಪರ್ಪಂಚ್ ಇರೋತನ್ಕ ಮುಂದೆ ಕನ್ನಡ ಪದಗೊಳ್ ನುಗ್ಲಿ" ಎಂದು ಹಾರೈಸುತ್ತಾನೆ ರತ್ನ.

ಕನ್ನಡದ ವಿಷಯ ಬಂದರೆ ಹೀಗೆ ಸಿಡಿಯುವ ರತ್ನ, ತನ್ನ ಪ್ರಿಯ ಮಡದಿ ನಂಜಿಯ ನೆನಪು ಬಂದಾಗ ಸುಕೋಮಲ, ಅಪರೂಪದ ಹೋಲಿಕೆಗಳನ್ನು ಬಳಸಿ ಬಣ್ಣಿಸುತ್ತಾನೆ. "ನನ್ ಪುಟ್ನಂಜಿ ನಕ್ರೆ" ಎಂಬ ಪದ್ಯದಲ್ಲಿ, "ರೆಕ್ಕೆ ಬಿಳುಪನ್ ತೆಗುದ್ ಎರಚ್ದಂಗೆ, ಸ್ನಾನ ಮಾಡಿದ್ ಕೊಕ್ರೆ, ನನ್ ಪುಟ್ನಂಜಿ ನಕ್ರೆ" ಇಂಥ ಮೃದು ಮನಸ್ಸಿನ ರತ್ನ, ಅನ್ಯಾಯಗಳನ್ನು ಕಂಡಾಗ ಬೆಂಕಿಯ ಕಿಡಿಯಾಗುತ್ತಾನೆ

"ದೊಡ್ಡೋನ್ ವುಟ್ಟೆ ಬಲೇ ದೊಡ್ಡಣ್ಣ, ಕಂಡಿದ್ ಗುಳುಂ ಸ್ವಾಹ, ತಿಂದು ತೇಗ್ತ ಕುಡೀತಿದ್ದಷ್ಟೂ ಏರ್ತೈತೆ ಅಸುವು ದಾಹ! ಲಕ್ಷ ಚಿಕ್ಕೋರ್ ಮಾಡಿದ್ ಕೆಲ್ಸ, ದೊಡ್ಡೋನ್ ಒಬ್ಬಂಗ್ ಎಸರು! ಇಂತಾ ದೊಡ್ಡೋರ್ ದೊಡ್ ಎಸರೂಂದ್ರೆ ಲಗ್ನ ಆಗ್ದೇನೆ ಬಸರು!"

ದೊಡ್ಡವರ ಆಟಾಟೋಪದಲ್ಲಿ ಬಡವ ಹೇಗೆ ನುಚ್ಚು ನೂರಾಗುತ್ತಾನೆ, ಎಂಬುದರ ಚಿತ್ರಣ ‘‘ಎಂಡ ಕುಡಿಯೋರ್ ನಾವು’’ ಎಂಬ ಪದ್ಯದಲ್ಲಿ ಸಮರ್ಥವಾಗಿ ಮೂಡಿಬಂದಿದೆ.

"ಗುಡಿಸಲ್ಗ್ ಉಲ್ಲು ಸಾಲ್ದಿದ್ರೂನೆ ಮಾಡೀಗ್ ಮಾಡಿ, ಬಡ್ತಿ! ರೂಪಾಯ್ಗ್ ಒಂದ್ ಕಾಸು ಕಮ್ಮಿ ಬಂದರೆ ಬಡವೋನ್ ಮನೆ, ಜಪ್ತಿ! ನಾಯ್ಗೆ ನಾಯೇ ತಿಂತಾದಂತೆ ಮೀನ್ಗೆ ಮೀನೆ ತಿಂಡಿ! ಮನ್ಸನ್ ಮನ್ಸ ತಿಂತಾನ್ ಈಗ ಜೀವ ಪೂರಾ ಯಿಂಡಿ!"

ಭಿಕ್ಷೆ ಬೇಡುವುದು ಎಂತಹ ಹೀನ ವೃತ್ತಿ? ಎಂಬುದರ ಬಗ್ಗೆ ರತ್ನ ಹೀಗೆ ಹೇಳುತ್ತಾನೆ: "ನರಮನಸಾಂತ್ ಅಂದೋನು, ಬಿಕ್ಸೇಗ್ ಕೈ ತಂದೋನು, ಕತ್ತೆ ನಾಯ್ಗೊಳ್ಗಿಂತ ಕೀಳು!"

ರತ್ನನ ಪದಗಳಲ್ಲಿ ಹೆಚ್ಚಾಗಿ ಅರ್ಧಾಕ್ಷರಗಳಿರುವುದರಿಂದ ಮತ್ತು ಅದು ಆಡು ಭಾಷೆಯ ವಿಶಿಷ್ಟ ರೂಪವಾದ್ದರಿಂದ, ಪದ್ಯಗಳನ್ನು ಗಟ್ಟಿಯಾಗಿ ಓದಿಕೊಂಡರೆ, ಅದರದೇ ಆದ ರೂಪ. ಸೌಂದರ್ಯ ಪ್ರಕಾಶಿಸಿ, ಅರ್ಥ ಸುಸ್ಪಷ್ಟವಾಗುತ್ತದೆ.

ಚಿಕ್ಕೋರ್ ಸಿಕ್ಕೌರಣ್ಣ ಎಲ್ಲಾರ್ ನೆಗಾಕೆ
ದೊಡ್ಡೋರ್ ಎಂಗಾಡಿದ್ರೂ ಎಲ್ಲಾನ ಸೈ
ಲೋಕಾನೆ ಇಂಗೈತೆ ನಾನ್ಯಾಕೆ ದುಕ್ಪಡಲಿ?
ಮುನಿಯಂಗೂ ಯೆಂಡಕ್ಕೂ ಬೋಲೋರೇ ಜೈ

ನವ್ಯ ಬಂಡಾಯ, ದಲಿತ ಇನ್ನಿತರ ಪಂಥದ ಸಾಹಿತ್ಯಗಳು ಸಂಭ್ರಮದಿಂದ ತಮ್ಮ ಕಹಳೆ ಮೊಳಗಿಸುತ್ತಿದ್ದಾಗ ನವೋದಯದ ಕಾಲಕ್ಕೆ ಸೇರಿದರೂ ಆ ಕಾಲದ ಕವನಗಳಿಗಿಂತ ಭಿನ್ನವಾಗಿ ತನ್ನದೇ ಆದ ಹಾದಿಯಲ್ಲಿ ಯಶಸ್ಸು ಕಂಡ ರತ್ನನ ಪದಗಳಿಗೆ ಬೋಲೋರೇ ಜೈ.

‘‘ಬ್ರಹ್ಮ ನಿಂಗೆ ಜೋಡಿಸ್ತೀನಿ ಎಂಡ ಮುಟ್ಟಿದ್ ಕೈನ...’’ ಇದು ಪ್ರಸಿದ್ಧ ಜನಪ್ರಿಯ ರತ್ನನ ಪದ. ಅದರಲ್ಲಿ ನಡುವಿನ ನಾಲ್ಕು ಸಾಲು ಹೇಳಿ ಲೇಖನಕ್ಕೆ ವಿರಾಮ ಹಾಕುತ್ತೇನೆ.

ಸರ್ಸೋತಮ್ಮ ಅಕ್ಸರಾನೆಲ್ಲ ಪಟ್ಟಾಗಿಡ್ಕೊಂಬಿಟ್ಟಿ
ಮುನಿಯ ಎಂಡ ಬಿಡುವಂಗೇನೇ ಬಿಡ್ತಾಳವಳ್ಕೈ ಗಟ್ಟಿ.
ಮುನಿಯಂಗಾನ ಕಾಸೋಗ್ತೈತೆ ಎಚ್ಕೆ ಎಂಡ ಬುಟ್ರೆ,
ಸರ್ಸೋತಮ್ಮಂಗೇನೋಗ್ತೈತೆ ಮಾತ್ ಸಲೀಸಾಗ್ ಕೊಟ್ರೆ!

***

ಭಾಗ –೨

ನನ್ನಪ್ಪನ ಸೆಂಟಿನೆರಿ

– ವೆಂಕಟೇಶ ಕಾಮತ

(ಹಿಂದಿನ ದಾಸೋಹದಲ್ಲಿ ಪ್ರಸ್ತುತಿ ಮಾಡಿದಾಗ ನನಗೆ ಇದನ್ನು ಮುಂದುವರಿಸುವ ಯಾವುದೇ ಆಲೋಚನೆಗಳು ಇರಲಿಲ್ಲ. ಕೆಲವೊಂದು ಓದಿದ ವಿಷಯಗಳನ್ನು ನಿಮ್ಮೊಡನೆ ಹಂಚಿಕೊಳ್ಳೋಣವೆಂದು ಮತ್ತು ನನ್ನಪ್ಪನ ಸೆಂಟೆನರಿ ೧೯೨೪-೨೦೨೪ ಇನ್ನೊಂದೇ ತಿಂಗಳು ಡಿಸೆಂಬರ್‌ವರೆಗೆ ಇರುವುದರಿಂದ ನನ್ನ ಈ ಪ್ರಸ್ತುತಿಯನ್ನು ೩ ಭಾಗಗಳಲ್ಲಿ ಮುಂದುವರಿಸಿ ಮುಂದಿನ ದಾಸೋಹದ ಪ್ರಸ್ತುತಿಯೊಂದಿಗೆ ಮುಗಿಸಲು ನಿರ್ಧರಿಸಿದೆ.)

ನನ್ನಪ್ಪನ ಸೆಂಟೆನರಿ ಬರೆಯಲು ಪ್ರಾರಂಭಿಸಿದಾಗ ಕೆಲವೊಮ್ಮೆ ಏನಿದೆ ಇದರಲ್ಲಿ, ಅಂತದ್ದು ವಿಭಿನ್ನ, ಎಲ್ಲರ ದೃಷ್ಟಿಯಲ್ಲೂ ಅವರ ಅಪ್ಪ, ಅವರ ಅಮ್ಮ ಎಲ್ಲರಿಗಿಂತಲೂ ಮಿಗಿಲು ಇದ್ದದ್ದೇ ಅಂದುಕೊಂಡರೂ ಆ ಕಾಲಮಾನದ ಕಥೆಯ ತಿರುಳು ಒಂದೇ ಆದರೂ ವೈವಿಧ್ಯತೆ ಪ್ರತಿಯೊಂದು ಮನೆಮನೆಯ ಕಥೆಯಲ್ಲೂ ಇದ್ದದ್ದೇ.

ನನ್ನಪ್ಪನ ಸೆಂಟಿನರಿ ೧೯೨೪-೨೦೨೪ ಎಂಬ ವಿಷಯದ ಬಗ್ಗೆ ಯೋಚಿಸಿದಾಗ ಗೂಗಲ್ ವೈಕಿ ನೋಡಿದಾಗ ತಿಳಿದ ವಿಷಯಗಳು:
೧೯೨೪ ಒಂದು ಬಹಳವೇ ಮಹತ್ವದ ವರುಷವಾಗಿತ್ತು. ಮಹತ್ತರ ದಿನಬಳಕೆಯ ವಸ್ತುಗಳಲ್ಲಿ ಜಾನ್ಸನ್ ಅಂಡ್ ಜಾನ್ಸನ್ ರವರು ಬ್ಯಾಂಡ್ ಏಡ್ ಮಾರುಕಟ್ಟೆಗೆ ತಂದರೆ ಮಿಚಿಗನ್‌ನಲ್ಲಿ ಮೊದಲ ಬಾರಿಗೆ ಐಯೊಡಿನ್ ಮಿಶ್ರಿತ ಐಯೊಡೈಸ್ಡ್ ಉಪ್ಪನ್ನು ೧೯೨೪ರಲ್ಲಿ ಉತ್ಪಾದಿಸಲಾಯಿತು.

ಭಾರತದಲ್ಲಿ ೧೯೨೪ ರಲ್ಲಿ ಜನಿಸಿದ ಖ್ಯಾತ ವ್ಯಕ್ತಿಗಳಲ್ಲಿ ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್. ಆರ್. ಬೊಮ್ಮಾಯಿ, ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಕರುಣಾನಿಧಿ ಮಾತ್ರವಲ್ಲದೆ ಸಿನಿಮಾ ನಟ ರಾಜ್ ಕಪೂರ್. ಗಾಯಕರಾದ ತಲತ್ ಮೊಹಮ್ಮದ್ ಹಾಗೂ ಮಹಮ್ಮದ್ ರಫಿ ಪ್ರಮುಖರು.

ವಿಶ್ವಖ್ಯಾತಿಯಲ್ಲಿ ಹಾಲಿವುಡ್ ತಾರೆ ಇವಾ ಮಾರೀ ಸೈಂಟ್. ಜೂಲೈ ೦೪, ೧೯೨೪ರಂದು ಜನಿಸಿದ ಇವರು ಅಕಾಡೆಮಿ ಪ್ರಶಸ್ತಿ, ಗೋಲ್ಡನ್ ಗ್ಲೋಬ್ ಪ್ರಶಸ್ತಿ ಪಡೆದಿದ್ದು ಮೊನ್ನೆ ಜುಲೈನಲ್ಲಿ ತಮ್ಮ ನೂರನೆಯ ಹುಟ್ಟುಹಬ್ಬವನ್ನು ಆಚರಿಸಿ ಹಾಲಿವುಡ್ನ ಅಕಾಡೆಮಿ ಪ್ರಶಸ್ತಿ ಪಡೆದ ಸೀನಿಯರ್ ಮೋಸ್ಟ್ ಲಿವಿಂಗ್ ಸ್ಟಾರ್ ಆಗಿರುತ್ತಾರೆ.

ಅಂತೆಯೇ, ಅಮೆರಿಕೆಯ ೩೯ನೆಯ ಅಧ್ಯಕ್ಷ ಜಿಮ್ಮಿ ಕಾರ್ಟರ್, ಪೂರ್ಣ ಹೆಸರು ಜೇಮ್ಸ್ ಅರ್ಲ್ ಕಾರ್ಟರ್ ಜೂನಿಯರ್, ೦೧.೧೦.೧೯೨೪ರಂದು ಜನಿಸಿದವರು. ಇವರು ಇತ್ತೀಚೆಗೆ ಅಕ್ಟೋಬರ್ ೧ರಂದು ತಮ್ಮ ೧೦೦ನೆಯ ವರುಷದ ಜನುಮ ದಿನವನ್ನು ಆಚರಿಸಿ, ದೀರ್ಘಾಯುಷಿಯಾಗಿ ಜೀವಿಸುತ್ತಿರುವ ಅತೀ ಹಿರಿಯ ಮಾಜಿ ಅಧ್ಯಕ್ಷರಾಗಿರುತ್ತಾರೆ.

ಇನ್ನು ನನ್ನಪ್ಪನ ಬಗ್ಗೆ ಪ್ರೀತಿಯ ಕೆಲವು ಸಾಲುಗಳು:

ಅಪ್ಪ ಅಕ್ಟೋಬರ್ ೧೪, ೧೯೨೪ರಂದು ಜನಿಸಿದ್ದರಿಂದ ಉಡುಪಿ ಸಮೀಪದ ಕಟಪಾಡಿ ಎಂಬಲ್ಲಿಯ ಕೆನರಾ ಬ್ಯಾಂಕಿನ ಶಾಖೆಯಲ್ಲಿ ಆಫೀಸರ್ ಹುದ್ದೆಯಲ್ಲಿ ೩೧ ಅಕ್ಟೋಬರ್ ೧೯೮೪ರಂದು ನಿವೃತ್ತಿ ಹೊಂದಿದರು. ಅಂದು ಭಾರತದ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಹತ್ಯೆಯಾದ ದಿನ. ಅವರ ನಿವೃತ್ತಿ ಕಾರ್ಯಕ್ರಮ ಮೊಟಕುಗೊಂಡು, ನನ್ನ ತಂದೆಯವರು "ನೋಡಿ, ನನ್ನ ನಿವೃತ್ತಿಯ ದಿನವನ್ನು ನಮ್ಮ ಇಡೀ ಭಾರತ ದೇಶ ಬಾವುಟಗಳನ್ನು ಅರ್ಧ ಮಟ್ಟಕ್ಕೆ ಇಳಿಸಿ ರಜೆ ಘೋಷಿಸಿ ಶೋಕದಿನವನ್ನಾಗಿ ಆಚರಿಸುತ್ತಿದೆ" ಎಂದು ಹೇಳಿದ್ದರು.

ಕಟಪಾಡಿಯಲ್ಲಿ ಬ್ಯಾಂಕಿನ ಲೀಸ್ ಮನೆಯನ್ನು ಬಿಟ್ಟುಕೊಟ್ಟು ಅಪ್ಪ, ಅಮ್ಮ ಹಾಗೂ ಮದುವೆಗೆ ಬೆಳೆದಿದ್ದ ನನ್ನ ತಂಗಿ ಉಡುಪಿಯ ನಡುಪೇಟೆಯಲ್ಲೇ ಒಂದು ಪುಟ್ಟ ಮನೆಯನ್ನು ಬಾಡಿಗೆಗೆ ಪಡೆದು ಉಡುಪಿಯಲ್ಲಿ ನಮ್ಮ ವಾಸವನ್ನು ಪ್ರಾರಂಭಿಸಿದರು. ಈಗ ನಾವು ಕಳೆದ ೪೦ ವರುಷಗಳಿಂದ ಉಡುಪಿಯಲ್ಲಿಯೇ ಇರುವೆವು. ಇದು ನನ್ನಪ್ಪನಿಂದ ಶುರುವಾದರೆ ಮುಂದುವರಿಕೆ ನನ್ನಿಂದ. ನನಗೆ ೩೦ ವರುಷವಾದಾಗ ಬೆಂಗಳೂರಿನಿಂದ ಇಲ್ಲಿಗೆ ಬಂದವನು ಮುಂದೆ ಇಲ್ಲಿಯೇ ನೆಲೆಸಿದೆ.

೧೯೮೬ರ ಪರ್ಯಾಯ ಸಂಕ್ರಮಣದ ಜನವರಿಯ ನಡುವಿನಲ್ಲಿ ಬೆಂಗಳೂರಿನಿಂದ ರಿಕ್ವೆಸ್ಟ್ ಟ್ರಾನ್ಸ್‌ಫರ್ ತೆಗೆದುಕೊಂಡು ಬಂದ ನಾನು, ರಿಲೀವ್ ಆಗುವುದನ್ನು ಸುಮಾರು ಒಂದು ವರುಷಕ್ಕೂ ಹೆಚ್ಚು ಮುಂದೂಡಿಸಿ ಅಂದಿನ ಸಂತ ಮಾರ್ಕ್ ರಸ್ತೆ ಶಾಖೆ ನಾನಿಲ್ಲದೆ ನಡೆಯುವುದೇ ಇಲ್ಲವೇನೋ ಎಂಬ ಭ್ರಮೆಯಿಂದ ಹೊರಬಂದು ಕೊನೆಗೂ ಉಡುಪಿಗೆ ಬಂದಿದ್ದೆ. ಬ್ಯಾಂಕಿನ ಕಾರಿನಲ್ಲಿ ನನ್ನನ್ನು ಬೆಂಗಳೂರಿನ ಬಸ್ ನಿಲ್ದಾಣಕ್ಕೆ ಡ್ರೈವರ್‌ಗೆ ಆದೇಶಿಸಲಾಗಿತ್ತು. ಕೆಲ ಗೆಳೆಯರೂ ವಿದಾಯ ಹೇಳಲು ಬಂದಿದ್ದರು. ಬೆಳಿಗ್ಗೆ ಉಡುಪಿಯಲ್ಲಿ ಬಸ್ ನಿಲ್ಲುವ ಕಡೆ ನನ್ನ ಅಪ್ಪ ಯಾವಾಗಲಿಂದ ಕಾಯುತ್ತಲಿದ್ದರೋ ಏನೋ? ಬ್ಯಾಗುಗಳ , ೬ ಸಾಮಾನು ತುಂಬಿದ ಗೋಣಿಚೀಲ, ಒಟ್ಟೊಟ್ಟಿಗೇ ಎರಡು ಆಟೋದಲ್ಲಿ ತುಂಬಿಸಿ ನಾವಿಬ್ಬರೂ ಸಮೀಪದಲ್ಲೇ ಇರುವ ಮನೆಗೆ ಕೆಲವೇ ನಿಮಿಷದಲ್ಲಿ ಬಂದು ಸೇರಿದೆವು. ಆಗ ಎರಡು ಆಟೋಗಳಿಗೆ ತಲಾ ರೂ ೩ರಂತೆ ಒಟ್ಟು ೬ ರೂಪಾಯಿಯಲ್ಲಿ ಮನೆ ಸೇರಿದೆ. ಮನೆಯಲ್ಲಿ ಅಮ್ಮ ಹಾಗೂ ತಂಗಿ ಕಾಯುತ್ತಿದ್ದರು ಹೀಗೆ ನನ್ನ ಉಡುಪಿ ಜೀವನ ಪ್ರಾರಂಭವಾಯಿತು.

ಪದವಿ ಮುಗಿಸಿ ಮುಂಬಯಿ ಮಹಾನಗರಕ್ಕೆ ಅಥವಾ ಅಲ್ಲಿಂದಲೇ ಗಲ್ಫ್ ದೇಶಗಳಿಗೆ ಕೆಲಸಕ್ಕೆ ಹೋಗುವೆನೆಂದು ಮನೆಯ ಇರುವ ಅಲ್ಪಸಲ್ಪ ಪುಡಿಗಾಸಲ್ಲಿ ಪಾಸಪೋರ್ಟ್ ಒಂದನ್ನು ಪಡೆದು, ಸೂಟು ಟೈ ಹಾಕಿ ಸ್ಟುಡಿಯೋದಲ್ಲಿ ಫೋಟೋ ತೆಗೆಸಿ ಹೊರದೇಶಕ್ಕೆ ನಾ ಹೊರಟ್ಟಿದ್ದೆ. ೧೯೭೮ರಲ್ಲಿ ಮುಂಬೈ ಸೇರಿದ ನಾನು ೧೯೮೦ರಲ್ಲಿ ಅಲ್ಲಿಂದಲೇ ಬೆಂಗಳೂರಿಗೆ ಹೋಗಿ ಮತ್ತೆ ಅಪ್ಪ ಅಮ್ಮನೊಡನೆ ನಿಲ್ಲಲು ಬರುವಾಗ ಏಳೆಂಟು ವರುಷಗಳೇ ಆಗಿದ್ದವು.

"ತಂಗಿಗೆ ಮದುವೆ ಗೊತ್ತಾಗಿದೆ, ನೀನು, ನಾವು ಎಲ್ಲರೂ ಅವಳ ಮದುವೆಯ ಮೊದಲು ಸ್ವಲ್ಪ ಕಾಲವಾದರೂ ಒಟ್ಟಿಗೆ ಇರಬೇಕೆಂದು ಆಸೆ ಅವಳಿಗಿದೆ, ಬರಲು ಪ್ರಯತ್ನಿಸು'' ಎಂದು ಅಮ್ಮ ಅಪ್ಪ ಇಬ್ಬರೂ ಮತ್ತೆ ಮತ್ತೆ ಬರೆದಾಗ ಬೆಂಗಳೂರಿನಿಂದ ಗೆಳೆಯರನ್ನೆಲ್ಲಾ ಬಿಟ್ಟು ಸಣ್ಣ ಪಟ್ಟಣ ಉಡುಪಿಯಲ್ಲಿ ಹೇಗಿರುತ್ತೇನೋ ಎಂದು ಅಳಕುತ್ತಾ ನಾನು ಮನೆಗೆ ಬಂದೆ.

ಆದರೆ ಮನೆಯಲ್ಲಿಯ, ಪ್ರೀತಿಯ ಅಮ್ಮನ ಮಮತೆ, ಊಟ, ತಿಂಡಿ, ಇನ್ನೂ ಬೆಳೆಯದ ಹುಡುಗನಂತೆ ಬೇಜವಾಬ್ದಾರಿ, ಅಪ್ಪನೇ ಪ್ರತಿಯೊಂದು ಕೆಲಸ ಮಾಡಿ, ಬೆಳಿಗ್ಗೆ ಆಫೀಸಿಗೆ ಹೊರಡುವಾಗ ಆಟೋ ನಿಲ್ಲಿಸುವುದು, ನನ್ನ ಅಂಚೆ ವಿಳಾಸ ಬರೆದು, ಸ್ಟ್ಯಾಂಪ್ ಹಚ್ಚಿ, ಪೋಸ್ಟ್ ಆಫೀಸಿಗೆ ಹೋಗಿ ಹಾಕಿ ಬರುವುದು, ಕೆಮ್ಮು ಸೀನಿದರೆ ಮದ್ದು ತರುವುದು, ನನ್ನ ಬಟ್ಟೆಗಳನ್ನು ಇಸ್ತ್ರಿ ಮಾಡಿ ತರುವುದು, ಚಿಕ್ಕಂದಿನಲ್ಲಿ ಶಾಲೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದಂತೆ ಸ್ಪೂನ್ ಫೀಡಿಂಗ್ ಮಾಡಿ ನನಗೆ ಏನೂ ಗೊತ್ತಿಲ್ಲ ಎನ್ನುವಂತೆ ಮಾಡಿದರು.

ಒಮ್ಮೆ ಮನೆಯ ಮುಂದಿನ ಹಜಾರದಲ್ಲಿ ಕುಳಿತ ನನ್ನನ್ನು ಯಾವುದೋ ಸಾಮಗ್ರಿ, ಇದು ಎಲ್ಲಿ ಸಿಗುತ್ತದೆ ಎಂದು ಬ್ಯಾಂಕಿಗೆ ಹೊಸದಾಗಿ ವರ್ಗವಾಗಿ ಬಂದ ಮಹಿಳೆಯೊಬ್ಬರು ಕೇಳಿದಾಗ ನಾನು, 'ನೀವು ನನ್ನ ಅಪ್ಪನನ್ನು ಕೇಳಿ. ಇದು ಯಾವುದು ನನಗೆ ಗೊತ್ತಿಲ್ಲಾ' ಅಂದದ್ದು ಆಕೆ ಎಷ್ಟೋ ದಿನ ಬ್ಯಾಂಕಿನ ಇತರರೊಂದಿಗೆ ಹೇಳಿ ನಗುತ್ತಿದ್ದರು.

ಉಡುಪಿಗೆ ನಾನು ಬಂದಮೇಲೆ ಅಪ್ಪ ಬರೀ ನಾಲ್ಕು ವರುಷ ಜೊತೆಗಿದ್ದರು. ತಮ್ಮ ೬೬ನೇ ವರುಷದಲ್ಲೇ ನಮ್ಮನ್ನು ಆಗಲಿ ಹೋದರು. ಮನೆಯವರು ನನಗೆ "ನಿನ್ನ ದುಃಖವೆಲ್ಲಾ ಬರೀ ನಾಟಕ, ನಿನಗೆ ನಿನ್ನ ಕೆಲಸ ಜಾಸ್ತಿ ಆಯಿತು, ಬೇಡದ ಜವಾಬ್ದಾರಿ ಬಂದಿದೆ ಎಂದೇ ದುಃಖ ಪಡುತ್ತಿರುವೆ'' ಎಂದೆಲ್ಲಾ ಆಡಿಕೊಂಡರು. ಸ್ವಲ್ಪ ಮಟ್ಟಿಗೆ ಅದು ಸತ್ಯವೂ ಆಗಿತ್ತು.

***

ಮುಸ್ಸಂಜೆಯ ಮಿಡಿತ

– ಮಾಲತಿ ಶ್ರೀನಿವಾಸನ್

ಇದ್ದುದರಲ್ಲಿ ಸುಖಿಸಿ ಇಲ್ಲದುದರ
ಚಿಂತೆ ದೂರಾಗಿಸಿ ಸಂತೆಯಲಿ
ಸಾಗಿದೆ ಪಯಣ ಸಂತೃಪ್ತ ಭಾವದಲಿ.
ಹಗುರಾಗಲು ಹಾತೊರೆಯುವ
ಈ ಮನದ ಭಾವ, ವೈರಾಗ್ಯವೋ
ನಿಸ್ಪೃಹತೆಯ ನಿಜ ಅನುಭೂತಿಯೋ
ನಾನರಿಯೆ, ಈ ಬಿಟ್ಟು ಬಿಡದಾ
ಭಾವ ಮೋಜೆನಿಸುವುದು ಓಮ್ಮೊಮ್ಮೆ
ಮನಕೆ.

ದಶಕಗಳ ಪಯಣದಲಿ ಬೇಕು
ಬೇಡದುದರ ಕಣ್ಣು ಮುಚ್ಚಾಲೆ ಆಟ,
ಇದ್ದು ಇಲ್ಲುದುದರ ಭಾವ
ಹಾವೇಣಿ ಆಟ, ಎಲ್ಲಸರಿಸಿ ಸಾಗಿದೆ
ಜೀವನ ತನ್ನ ತಿರುಗಣೆಯ ಗತಿಯಲಿ.

ಈ ಮುಸ್ಸಂಜೆಯ ಮಬ್ಬಿನಲಿ,
ಸರಿ ತಪ್ಪುಗಳ ಗೊಂದಲ ದೂರಾಗೆ,
ಮನದಲಿ ಸಂತೃಪ್ತಿಯ ಭಾವವೋ,
ವೈರಾಗ್ಯದ ಅನುಭೂತಿಯೋ,
ನಾನರಿಯೆ. ಸದಾ ಕಾಯಕದ ತುಡಿತ
ಸಕಾರಾತ್ಮಕ ಚಿಂತನದ ಹಾದಿಯಲ್ಲಿ.

ಒಂದಿಷ್ಟು ಸಾಧಿಸಿದೆ ಮನ ಬಿಚ್ಚಿ
ಆಸ್ವಾದಿಸಿದೆ, ಸಾಕಿಷ್ಟು ಈ ಜನುಮಕೆ,
ಮುಂದೇನೋ ಅರಿತವರಾರು?
ಕಾಲನೋ ಸಮಯವೋ, ಠಕ್ಕ
ಅಡಗಿ ಕುಳಿತಿಹನು ಇಲ್ಲೆಲ್ಲೋ,
ಸೆಳೆದೊಯ್ಯುವನು ಕ್ಷಣದಲ್ಲಿ,
ಸರಿಯಲಿಹುದು ಬಾಳು.
ಇದ್ದುದೆಲ್ಲವ ಬಿಟ್ಟು ನಿಗೂಢ
ಶೂನ್ಯತೆಯ ಎಡೆಗೆ.

***

ಹಣೆಬರಹ

– ಮಾಲತಿ ಶ್ರೀನಿವಾಸನ್

ಬೊಮ್ಮ ನೀ ಪ್ರತಿಯೊಬ್ಬರ ಹಣೆಬರಹಕೆ
ರೂವಾರಿಯಂತೆ,
ಜೀವನದಲಿ ಏಳುಬೀಳು, ಜಯಾಪಜಯ
ಲಾಭನಷ್ಟಗಳಿಗೆಲ್ಲ ನೀನೇ
ವ್ಯಾಪಾರಿಯಂತೆ

ಹುಟ್ಟಿನಾರಭ್ಯ ನೀ ಬರೆದ ಹಣೆಬರಹ
ಲಿಖಿತ ಶಾಸನವಂತೆ, ಬಾಳಿನ ಪ್ರತಿ
ತಿರುವಿನಲಿ ನಮ್ಮೆಲ್ಲರ ಸುಖ ದುಃಖ
ನೋವು ನಲಿವಿನ ಭಾವಕ್ಕೆ ನೀ ಬರೆದ
ಬರಹವೇ ಕಾರಣವಂತೆ.

ನೀ ದಿಟದಲ್ಲಿ ಬರೆಯುವೆಯಾ ಗುರುವೇ?
ಇಲ್ಲ ಇದು ಬರಿ ಕಲ್ಪನೆಯ ಚಕ್ರವ್ಯೂಹದ
ಬಲೆಯೇ, ಬಾಳ ರೂಪಿಸಲಾಗದೆ
ಹಣೆಬರಹವೆನ್ನುತ್ತಾ ತಲೆ ಚಚ್ಚಿ ನಿನ್ನ
ದೂಷಿಸುವವರ ಕಂಡು ಅಚ್ಚರಿಯೆನಗೆ.

ಪುಟ್ಟ ಹಣೆಯಲಿ ಜೀವನದ ವಿವಿಧ
ಮಜಲುಗಳ, ಬಾಲ್ಯ ಯೌವನ ವೃದ್ಧಾಪ್ಯಗಳ
ಗಾಥೆ ನೀ ಹೇಗೆ ಬರೆಯುವೆ?
ನಿನ್ನ ಲಿಪಿ ಲೇಖನಿ ನೋಡುವ
ಕುತೂಹಲ ನನಗೆ, ಹಿಂದೆ ಬರೆದುದೆಲ್ಲವ
ಪ್ರತಿ ಬಾರಿ ಅಳಿಸಿ ಹೊಸತ ಬರೆಯುವೆಯೇನು?
ಇಲ್ಲದಿರೆ ಮುಂದಿನದ
ಹೇಗೆ ಬರೆಯುವೆ ನೀನು?

***

ಕನ್ನಡದ ಕಂಪನ್ನು ಪಸರಿಸುತ...

– ಜಿ. ವಿ. ಅರುಣ

ನಾಡಹಬ್ಬವಾಗಿ ಕನ್ನಡ ರಾಜ್ಯೋತ್ಸವವನ್ನು ನಾವು ಆಚರಿಸುತ್ತೇವೆ. ನಮ್ಮಲ್ಲಿ ಅನೇಕರು **'ಪ್ರೀತಿಯಿಂದ'** ರಾಜ್ಯೋತ್ಸವದಲ್ಲಿ ಪಾಲ್ಗೊಳ್ಳುತ್ತೇವೆ. ಇನ್ನು ಕೆಲವು ಕಡೆ **'ಒತ್ತಡದಿಂದ'** – ಉದ್ಯೋಗಿಗಳ ಅಥವಾ ಸರ್ಕಾರದ ಸುತ್ತೋಲೆಯ ಕಾರಣದಿಂದ ರಾಜ್ಯೋತ್ಸವವನ್ನು ಆಚರಿಸುತ್ತಾರೆ. ಮತ್ತೆ ಕೆಲವು ಕಡೆ ಅವರ ಕಟ್ಟಡದ ಮುಂದಿನ ಗಾಜಿನ ಫಲಕಗಳ ರಕ್ಷಣೆಗೆ **'ಭೀತಿಯಿಂದ'** ಕನ್ನಡ ಬಾವುಟವನ್ನು ಹಾರಿಸಿ ರಾಜ್ಯೋತ್ಸವವನ್ನು ಆಚರಿಸಿರುತ್ತಾರೆ! ಒಟ್ಟಿನಲ್ಲಿ ಭುವನೇಶ್ವರಿಯ ಬಿಂಬದಿಂದಲೋ ಕನ್ನಡ ಬಾವುಟದ ಕಂಬದಿಂದಲೋ ಆ ವರ್ಷದ ರಾಜ್ಯೋತ್ಸವಕ್ಕೆ ಮುಕ್ತಿಯನ್ನು ತೋರಿಸಿರುತ್ತಾರೆ. ಇಂಥ ಕಾರ್ಯಕ್ರಮಗಳನ್ನು ಭೀತಿಯಿಂದ ಪ್ರೀತಿಗೆ, ಒತ್ತಡವನ್ನು ಸಮಾಧಾನದ ಸ್ವಇಚ್ಛೆಗೆ ಬದಲಾಯಿಸಲು ಬೇಕಾದ ಕ್ರಮಗಳ ಬಗ್ಗೆ ನಾವು ಯೋಚಿಸಬೇಕಾದ ಕಾಲ ಈಗ ಬಂದಿದೆ.

ಬೆಂಗಳೂರಿನಲ್ಲಿ ಈಗ ತುಂಬಿಕೊಂಡಿರುವ ದೊಡ್ಡ ಗೃಹಸಮುಚ್ಚಯಗಳಲ್ಲಿ ರಾಜ್ಯೋತ್ಸವವನ್ನು ಆಚರಿಸುವ ಬಗ್ಗೆ ಅನೇಕ ಮಿತ್ರರಿಂದ ಕೇಳಿದ್ದೆ. ಅವರು ಕಳುಹಿಸಿದ ಚಿತ್ರಗಳನ್ನು, ವಿಡಿಯೋಗಳನ್ನು ನೋಡಿದ್ದೆ. ಆದರೆ ಉತ್ತುಂಗ ಮೌಲ್ಯದ ಗೃಹಸಮುಚ್ಚಯಗಳಲ್ಲಿ 'ಕನ್ನಡ ರಾಜ್ಯೋತ್ಸವವನ್ನು ಹೇಗೆ ಆಚರಿಸುತ್ತಾರೆ? ಅಲ್ಲಿರುವ ಜನರ ಕನ್ನಡ ಪ್ರೀತಿ ಹೇಗಿದೆ?' ಎಂದು ತಿಳಿಯುವ ಆಸೆ ನನ್ನಲ್ಲಿ ಮನೆಮಾಡಿತ್ತು. ಈ ವರ್ಷ ಅದನ್ನು ತಣಿಸಲೋ ಎಂಬಂತೆ ರಾಜ್ಯೋತ್ಸವದ ಒಂದು ಕಾರ್ಯಕ್ರಮಕ್ಕೆ ಅಂಥ ಒಂದು ಗೃಹಸಮುಚ್ಚಯದ ಕನ್ನಡ ಸಂಘದಿಂದ ನನಗೆ ಆಹ್ವಾನ ಬಂದಿತ್ತು.

ಪುಟ್ಟೇನಹಳ್ಳಿ ಕೆರೆಯ ಹಿಂಭಾಗದಲ್ಲಿ ಇರುವ ಎಲಿಟಾ ಪ್ರೋಮಿನೇಡ್ ಎಂಬ ಈ ಬೃಹತ್ ಗೃಹಸಮುಚ್ಚಯದಲ್ಲಿ ನವೆಂಬರ್ ಒಂದರಂದು ಈ ರಾಜ್ಯೋತ್ಸವ ಕಾರ್ಯಕ್ರಮವು ನಡೆಯಿತು. "**ಸಂಕಲ್ಪ**" ಹೆಸರಿನ ಎಲಿಟಾದ ಕನ್ನಡ ಸಂಘದ ಆಶ್ರಯದಲ್ಲಿ ಅಂದು ಬೆಳಗ್ಗೆ ಧ್ವಜಾರೋಹಣ ಮತ್ತು ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸುಮಾರು ಇನ್ನೂರು ಜನರು ಭಾಗವಹಿಸಿದ್ದರು. ದೀಪಾವಳಿ, ರಾಜ್ಯೋತ್ಸವ, ಶನಿವಾರ, ಭಾನುವಾರಗಳು ಸೇರಿದಂತೆ ನಾಲ್ಕು ದಿನಗಳ ಸಾಲುಸಾಲು ರಜೆಯಿಂದಾಗಿ ಹಾಜರಿ ಸಾಕಷ್ಟು ಕಡಿಮೆಯಾಗಿದೆ ಎಂದು ಕಾರ್ಯಕರ್ತರು ತಿಳಿಸಿದರು. ಅಲ್ಲಿನ ತಳಮಹಡಿಯ ವಾಹನ



ನಿಲ್ದಾಣಗಳು ಭಣಗುಟ್ಟುತ್ತಿದ್ದುದು ಅದಕ್ಕೆ ಸಾಕ್ಷಿಯಾಗಿತ್ತು. ಕಾರ್ಯಕ್ರಮದ ಅಂಗವಾಗಿ ವೃಂದಗಾನದಲ್ಲಿ ಒಳ್ಳೆಯ ಕನ್ನಡ ಹಾಡುಗಳನ್ನು ಸಮವಸ್ತ್ರ ಧರಿಸಿದ್ದ ಹತ್ತು ಹದಿನೈದು ಮಹಿಳೆಯರು ಸುಶ್ರಾವ್ಯವಾಗಿ ಹಾಡಿದರು. ಎಲ್ಲರಿಗೂ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದರು. ಸಿಹಿ ವಿತರಣೆಯೂ ಇತ್ತು.

ಈ **ಸಂಕಲ್ಪ** ಕನ್ನಡ ಸಂಘದ ಆಶ್ರಯದಲ್ಲಿ ಪ್ರತಿ ತಿಂಗಳು ಒಂದು ಸಾಹಿತ್ಯ – ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಅದು ಶಿಕ್ಷಕರ ದಿನಾಚರಣೆ ಇರಬಹುದು, ಸ್ವಾತಂತ್ರೋತ್ಸವ ಇರಬಹುದು, ನವರಾತ್ರಿ, ಸಂಕ್ರಾಂತಿ, ಗಣೇಶನ ಹಬ್ಬ ಮುಂತಾದವುಗಳು ಇರಬಹುದು. ಪ್ರತಿ ತಿಂಗಳ ಒಂದು ದಿನ ಅದು ಸಾಂಸ್ಕೃತಿಕ ಹಾಗೂ ಸಾಹಿತ್ಯಪರ ವೇದಿಕೆಯಾಗುತ್ತದೆ. ಆ ಕಾರ್ಯಕ್ರಮಕ್ಕೆ ಒಳ್ಳೆಯ ಆಕರ್ಷಕ ನಾಮಕರಣವನ್ನು ಮಾಡುತ್ತಾರೆ. ಶಿಕ್ಷಕರ ದಿನಾಚರಣೆಯ ಮಾಸವಾದರೆ ಅದು ವಿದ್ಯಾ ಸಂಕಲ್ಪ ದಿನಾಚರಣೆ, ಹೀಗೆ.

ಆ ಗೃಹಸಮುಚ್ಚಯದಲ್ಲಿರುವ ಎಲ್ಲ ಕನ್ನಡಿಗರನ್ನು ಮತ್ತು ಇದರಲ್ಲಿ ಆಸಕ್ತಿ ಇರುವ ಇತರರನ್ನು ಒಗ್ಗೂಡಿಸಿಕೊಂಡು ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಅದು ತಮ್ಮಲ್ಲೇ ಇರುವ ಪ್ರತಿಭೆಗಳಿಗೆ ಒಂದು ಉತ್ತಮ ಪ್ರೋತ್ಸಾಹದಾಯಕ ವಾತಾವರಣವನ್ನು ನಿರ್ಮಿಸಿಕೊಡುತ್ತಿದೆ. ಆಸಕ್ತರಿಗೆ ಕನ್ನಡವನ್ನು ಕಲಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಕನ್ನಡ ಬಾರದವರಿಗೆ ಅದನ್ನು ಕಲಿಯುವ ಆಸಕ್ತಿಯನ್ನು ಹುಟ್ಟಿಸುವ ಕೆಲಸವನ್ನೂ ಮಾಡುತ್ತಿದ್ದಾರೆ.

ಪ್ರತಿ ತಿಂಗಳು "**ಅಂತರಂಗ**" ಎಂಬ ಪತ್ರಿಕೆಯನ್ನು ಮನೆಯೊಳಗಿನ ಪ್ರಸಾರಕ್ಕೆ ಪ್ರಕಟಿಸುತ್ತಿದ್ದಾರೆ. ಅದರಲ್ಲಿ ಏನೇನು ಇರಬಹುದು ಎಂಬುದನ್ನು ನೀವು ಸುಲಭವಾಗಿ ಊಹಿಸಬಹುದು. ಕೆಲವು ಸಂದರ್ಭಗಳಲ್ಲಿ ವಿಶೇಷ ಸಂಚಿಕೆಗಳನ್ನೂ ಪ್ರಕಟಿಸಿದ್ದಾರೆ.

ತಮ್ಮ ಮನೆಯ ನಾಲ್ಕು ಗೋಡೆಗಳ ಮಧ್ಯದಲ್ಲಿ ಕೈದಿಯಂತೆ ಇದ್ದುಬಿಡಬಹುದಾದ ಸಂಕೋಲೆಯನ್ನು ಕಳಚಿಕೊಂಡು, ಮಾನವನು ಸಂಘಜೀವಿ ಎಂಬುದನ್ನು ಸಾರಿ, ಸಮಾಜಮುಖಿಯಾಗುವುದಕ್ಕೆ ನಮ್ಮೊಳಗೆ ಒಂದು ಅಂತಃಶಕ್ತಿ ಬೇಕು. ಅಂಥವರ ಸಂಖ್ಯೆ ಹೆಚ್ಚಾದಷ್ಟು ಅವರು ಇರುವ ಪರಿಸರ ಕಂಪನ್ನು ಪಸರಿಸುತ್ತದೆ; ಮುದುಡಿಹೋಗಬೇಕಾಗಿದ್ದ ಮನಸ್ಸುಗಳಿಗೆ ಮುದವನ್ನು ತುಂಬುತ್ತದೆ. ಎಲಿಟಾ ಪ್ರೋಮಿನೇಡ್ ಎಂಬ ಬೃಹತ್ ಗೃಹಸಮುಚ್ಚಯದ **ಸಂಕಲ್ಪ** ಕನ್ನಡ ಸಂಘದಲ್ಲಿ ಅಂಥ ಅಂತಃಸತ್ವ ಇರುವ ಅನೇಕ ಜನರು ಒಮ್ಮತದಿಂದ ಒಟ್ಟಿಗೆ ಸೇರಿದ್ದಾರೆ. ಈ ಅದೃಷ್ಟವನ್ನು ಅವರು ಚೆನ್ನಾಗಿ ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಜೊತೆಗೆ ಇತರ ಭಾಷೆಯನ್ನು ಮಾತನಾಡುವವರನ್ನು ಪ್ರೀತಿಯಿಂದ ತಮ್ಮೊಡನೆ ಹೆಜ್ಜೆ ಹಾಕುವಂತೆ ಮಾಡಿದ್ದಾರೆ.

ಇದನ್ನು ನೋಡಿದಾಗ ನನ್ನ ಗಮನಕ್ಕೆ ಬಂದದ್ದು, ಅಲ್ಲಿ ವಾಸಿಸುವ ಕನ್ನಡಿಗರ ಗೃಹದ ಉತ್ತುಂಗ ಮೌಲ್ಯಕ್ಕಿಂತ ಅವರ ಕನ್ನಡ ಪ್ರೀತಿಯ ಮೌಲ್ಯ ಹೆಚ್ಚಿನದು ಎಂದು. ಇದಕ್ಕೆ **ಸಂಕಲ್ಪ** ಕನ್ನಡ ಸಂಘದ ಎಲ್ಲ ಸದಸ್ಯರಿಗೂ ಪದಾಧಿಕಾರಿಗಳಿಗೂ ನಾನು ಅಭಿನಂದಿಸುತ್ತೇನೆ. ಅವರ ಸಂತತಿ ಸಾವಿರವಾಗಲಿ.

ಬೆಂಗಳೂರಿನ ಬೇರೆಬೇರೆ ಗೃಹಸಮುಚ್ಚಯಗಳ ಕನ್ನಡ ಸಂಘಗಳಲ್ಲಿ ನಡೆಯುವ ಇಂಥ ಬೇರೆಬೇರೆ ಕಾರ್ಯಕ್ರಮಗಳನ್ನು ಅರಿಯುವುದು ಸಾಧ್ಯವಾದರೆ ಕಾರ್ಯಕ್ರಮದ ವೈವಿಧ್ಯತೆಯನ್ನು ಹೆಚ್ಚಿಸಬಹುದು. ಮುಂದೆ ಒಂದು ದಿನ ಇದಕ್ಕೆ ಬೆಂಗಳೂರಿನ ವಿವಿಧ ಗೃಹಸಮುಚ್ಚಯಗಳ ಕನ್ನಡ ಸಂಘಗಳ ಒಕ್ಕೂಟವು ನಿರ್ಮಾಣವಾದರೆ ಆಶ್ಚರ್ಯಪಡಬೇಕಾಗಿಲ್ಲ.

ಇಂಥ ಗೃಹಸಮುಚ್ಚಯಗಳಲ್ಲಿ ನಡೆಸಬಹುದಾದ, ನನ್ನ ಗಮನಕ್ಕೆ ಬಂದಿರುವ, ಇನ್ನು ಒಂದೆರಡು ಚಟುವಟಿಕೆಗಳ ವಿಚಾರವನ್ನು ನಿಮ್ಮ ಗಮನಕ್ಕೆ ತರುತ್ತೇನೆ.

- ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ವಾರಪತ್ರಿಕೆ ಹಾಗು ಮಾಸಪತ್ರಿಕೆಗಳನ್ನು ಎಲ್ಲರೂ ಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೆ ಎಂಟು ಹತ್ತು ಜನರ ಹಲವು ಸಣ್ಣಸಣ್ಣ ಗುಂಪುಗಳನ್ನು ಮಾಡಿಕೊಂಡು ಹಲವು ವಾರಪತ್ರಿಕೆ ಹಾಗು ಮಾಸಪತ್ರಿಕೆಗಳನ್ನು ತರಿಸಿಕೊಂಡು ಅವುಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಓದಬಹುದು. ಅವುಗಳಲ್ಲಿ ಬರುವ ಕಥೆಗಳು, ಲೇಖನಗಳು, ಧಾರಾವಾಹಿಗಳನ್ನು ಓದಿ ಪರಸ್ಪರ ಚರ್ಚಿಸುವುದು ಒಂದು ಒಳ್ಳೆಯ ಹವ್ಯಾಸವೂ, ಉತ್ತಮ ಕಾಲಕ್ಷೇಪವೂ, ಕನ್ನಡಪರ ಕಾರ್ಯವೂ ಆಗುತ್ತದೆ. ಜೊತೆಗೆ ಕನ್ನಡ ಪತ್ರಿಕೆಗಳು ಮನೆಯಲ್ಲಿರುವ ಕಿರಿಯರ ಕಣ್ಣಿಗೂ ಬಿದ್ದು, ಅವರು ಅವನ್ನು ಓದುವಂತೆ ಮಾಡುವುದರಲ್ಲಿ ಯಶಸ್ವಿಯಾಗಬಹುದು.

- ಒಂದಷ್ಟು ಜನಪ್ರಿಯ ಕನ್ನಡ ಪುಸ್ತಕಗಳನ್ನು ತಂದು ಗ್ರಂಥ ಭಂಡಾರವನ್ನು ಪ್ರಾರಂಭಿಸಬಹುದು.

- ಒಳ್ಳೆಯ ಸಮಾಜ ಸೇವೆಯನ್ನು ಮಾಡುತ್ತಿರುವ ಸಂಸ್ಥೆಗಳ ಜೊತೆ ಕೈಜೋಡಿಸಬಹುದೇ ಎಂದು ಪರಿಶೀಲಿಸ ಬಹುದು. ಉದಾಹರಣೆಗೆ ಅರ್ಪಣಾ ಸೇವಾ ಸಂಸ್ಥೆಯವರು ದಶಕಗಳಿಂದ ಹಳೆಯ ವೃತ್ತಪತ್ರಿಕೆಗಳನ್ನು ಜನರಿಂದ ಪಡೆದು, ಅದನ್ನು ಮಾರುವುದರಿಂದ ಬರುವ ಹಣದಲ್ಲಿ ಮೂತ್ರಪಿಂಡ ಕಾಯಿಲೆಯಿಂದ ನರಳುತ್ತಿರುವ ಬಡರೋಗಿಗಳಿಗೆ ಉಚಿತ ಡಯಾಲಿಸಿಸ್ ಸೇವೆಯನ್ನು ಕೊಡಿಸುತ್ತಿದ್ದಾರೆ. ಇದಕ್ಕಾಗಿ ಅವರು ಹಲವು ದೊಡ್ಡ ಡಯಾಲಿಸಿಸ್ ಕೇಂದ್ರಗಳೊಡನೆ ಒಪ್ಪಂದ ಮಾಡಿಕೊಂಡಿದ್ದಾರೆ. ಪ್ರತಿ ತಿಂಗಳು ನೂರಾರು ಬಡರೋಗಿಗಳು ಈ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಅರ್ಪಣಾ ಸೇವಾ ಸಂಸ್ಥೆಯವರಿಗೆ ಗೃಹಸಮುಚ್ಚಯದ ಜನರಿಂದ ಹಳೆಯ ವೃತ್ತಪತ್ರಿಕೆಗಳನ್ನು ಶೇಖರಿಸಿ ನೀಡಬಹುದು.

ಈ ರೀತಿಯ ಸಾಧ್ಯತೆ ಇರುವ ಇತರ ಚಟುವಟಿಕೆಗಳು ನಿಮಗೆ ತಿಳಿದಿದ್ದರೆ ದಯವಿಟ್ಟು ಹಂಚಿಕೊಳ್ಳಿ; ಕನ್ನಡಕ್ಕೆ ನಮ್ಮಿಂದ ಸಾಧ್ಯವಾಗುವ ಸ್ತುತ್ಯ ಸೇವೆ ಮಾಡೋಣ, ಕನ್ನಡದ ಕಂಪನ್ನು ಪಸರಿಸೋಣ.

***

ಜಯಮಂಗಲಿ ಮೈತುಂಬಿ ಕರೆದಾಗ...

– ಕೆ.ಎನ್.ಭಗವಾನ್

ನಮ್ಮ ಜಿಲ್ಲೆಯ ಭೂಪಟದಲ್ಲಿ ಗುರ್ತಿಸಲ್ಪಡುವ ಎರಡು ನದಿಗಳೆಂದರೆ ಶಿಂಷಾ ಮತ್ತು ಜಯಮಂಗಲಿ. ಈ ಪೈಕಿ ದಕ್ಷಿಣದಿಂದ ಉತ್ತರ ದಿಕ್ಕಿಗೆ ಹರಿಯುವುದು ಜಯಮಂಗಲಿ. ಇದರ ಉಗಮಸ್ಥಾನ ದೇವರಾಯನ ದುರ್ಗ.ನದಿ ಎಂದಾಗ ಕಾವೇರಿ, ತುಂಗಭದ್ರ, ಕೃಷ್ಣಾ ಅಂತೆಲ್ಲ ಕಲ್ಪಿಸಿಕೊಳ್ಳಬೇಡಿ. ಇದು ಬೇಸಗೆಯಲ್ಲಿ ಬತ್ತುವ ಮರಳು ತೊರೆ, ದಟ್ಟ ಮಳೆಗಾಲದಲ್ಲಿ ದಡ ಕೊಚ್ಚಿ ಹರಿಯುವ ಜಲವಾಹಿನಿ. ನಮ್ಮೂರ ಸಮೀಪ ಇದನ್ನು ಕೂಡಿಕೊಳ್ಳುವ ಇನ್ನೊಂದು ನದಿ ಸುವರ್ಣಮುಖಿ. ಇದು ಕೊರಟಗೆರೆ ತಾಲೂಕಿನ ಸಿದ್ಧರಬೆಟ್ಟದಲ್ಲಿ ಹುಟ್ಟುತ್ತದೆ. ಇವೆರಡಕ್ಕೂ ಪೂರ್ಣಜೀವ ಬರುವುದು ಇವುಗಳನ್ನೇ ಅವಲಂಬಿಸಿರುವ ಆಯಕಟ್ಟಿನ ಕೆರೆಗಳು ತುಂಬಿ ಕೋಡಿ ಹರಿಸಿದಾಗಲಷ್ಟೆ.ನಾನು ಮಾಧ್ಯಮಿಕ ಶಾಲೆಗಾಗಿ ನಮ್ಮೂರಿನಿಂದ ೫ ಕಿ.ಮೀ. ದೂರದ ಇನ್ನೊಂದು ಊರಿಗೆ ಹೋಗಬೇಕಿದ್ದ ಕಾಲದಲ್ಲಿ ಸುವರ್ಣಮುಖಿ ಸೊಂಟ ಮಟ್ಟದವರೆಗೆ ಹರಿಯುತ್ತಿದ್ದು ನಮಗೆ ಒಂದೆರಡು ದಿನ ರಜೆಯನ್ನು ಕರುಣಿಸುತ್ತಿತ್ತು.

ನನ್ನ ಬಾಲ್ಯದಲ್ಲಿ ಮಳೆಗಾಲದಲ್ಲಿ ಒಂದೆರಡು ತಿಂಗಳ ಕಾಲ ಜಯಮಂಗಲಿಯು ಹರಿದರೆ ಸಾಕು, ದಡದ ಫಾಸಲೆಯ ಬಾವಿಗಳಲ್ಲಿ ಕನಿಷ್ಟ ಆರು ತಿಂಗಳ ಕಾಲ ನೀರು ಸಮೃದ್ಧ ಎಂಬ ಮಾತು ಕೇಳಿಬರುತ್ತಿತ್ತು. ಮಳೆಗಾಲ ಮುಗಿದು ಶರತ್ಕಾಲ ಅಡಿಯಿಟ್ಟಾಗ ನದಿಯೊಡಲು ಬಡವಾಗಿ ಒಂದು ಮಗ್ಗುಲಲ್ಲಿ ಬಾಗಿ ಹರಿದಾಗ, ಉಳಿದ ಭಾಗದಲ್ಲಿ ಮರಳು ತೋಡಿ ಚಿಲುಮೆ ಮಾಡಿ ಅದರಲ್ಲಿನ ತಿಳಿನೀರನ್ನು ಕುಡಿದರೆ ಏನೋ ಒಂದು ರೀತಿಯ ಸಾರ್ಥಕತೆ. ಚಿಲುಮೆ ನೈಸರ್ಗಿಕ ಸೋಸುಕ (ಫಿಲ್ಟರ್). ನದಿಯಾಚೆಯ ಊರಿನವರು ತೋಡಿದ ಗೋರು ಕಾಲುವೆಯಲ್ಲಿ ಆಳವಿರುವ ಕಡೆ ಈಜುವುದು, ನದಿಯಂಚಿ ಹೊಂಗೆ ಮರದ ಕೊಂಬೆಯಿಂದ ಜಿಗಿದು ನೀರಾಟವಾಡುವುದು ಆಪ್ಯಾಯಮಾನ. ಪ್ರವಾಹ ಹೆಚ್ಚಿದ್ದಾಗ ದಾರಿಯ ಗದ್ದೆ ಬದುಗಳ ಮೇಲೆ ನಾಜೂಕಾಗಿ ನಡೆದು ದೂರದಲ್ಲೇ ನಿಂತು ಅದರ ರುದ್ರ ರಮಣೀಯತೆಯಲ್ಲಿ ಲೀನವಾದರೆ ನಿಮಿಷಗಳು ಸೆಕೆಂಡುಗಳಂತೆ ಓಡುವವು. ಜಯಮಂಗಲಿಯ ಮಳೆಗಾಲದ ವೈಭವದ ಹಿನ್ನೆಲೆಯಲ್ಲಿ ೫೫ ವರ್ಷಗಳಷ್ಟು ಹಿಂದೆ ನಾನು ಬರೆದ ದುರಂತ ಕತೆಗೆ ಪ್ರತಿಷ್ಠಿತ ಪತ್ರಿಕೆಯೊಂದರ ದೀಪಾವಳಿ ಕಥಾಸ್ಪರ್ಧೆಯಲ್ಲಿ ಎರಡನೇ ಬಹುಮಾನ ಬಂದಿತ್ತು. ನಾನು ಬೆಂಗಳೂರಿಗನಾಗಿ ಆರು ದಶಕಗಳು ಕಳೆದಿವೆ. ನಮ್ಮ ಮನೆತನದವರೆಲ್ಲ ಬೇರೆ ಬೇರೆ ಊರುಗಳಿಗೆ ಸ್ಥಳಾಂತರಗೊಂಡಿದ್ದರೂ, ನಮ್ಮೂರ ಮಾರುತಿರಾಯ ವರ್ಷಕ್ಕೆರಡು ಬಾರಿದರೂ ಎಲ್ಲರನ್ನೂ ಕರೆಸಿಕೊಳ್ಳುತ್ತಾನೆ.

ಕಳೆದ ದಸರಾ ಸಂದರ್ಭದಲ್ಲಿ ನಮ್ಮೂರಿನ ಗೆಳೆಯನೊಬ್ಬ ಮಧುಗಿರಿ–ಗೌರಿಬಿದನೂರು ರಸ್ತೆಯಲ್ಲಿರುವ ಸೇತುವೆಯ ಮೇಲೆ ಹರಿಯುತ್ತಿರುವ ಜಯಮಂಗಲಿಯ ವೀಡಿಯೋವನ್ನು ವಾಟ್ಸಾಪ್ ಮೂಲಕ ಗುಂಪಿನಲ್ಲಿ ಹಂಚಿಕೊಂಡಿದ್ದ. ನನಗೆ ಪ್ರವಾಹ ಇಳಿಯುವ ಮುಂಚೆ ಹೋಗಿ ಕಣ್ಮನ ತುಂಬಿಕೊಳ್ಳುವ ತುಡಿತ ಹೆಚ್ಚಾಯಿತು. ಇದೇ ಸಂದರ್ಭದಲ್ಲಿ ವಿಜಯದಶಮಿಯಂದು ರಾತ್ರಿ ಏರ್ಪಡುವ ಪ್ರಮುಖ ದೇವತಾ ಮೂರ್ತಿಗಳ ಉತ್ಸವ, ಬನ್ನಿ ಪೂಜೆ ನೋಡಲೆಂದು ನನ್ನ ಅಣ್ಣನ ಇಬ್ಬರು ಮಕ್ಕಳೂ ಕಾರಿನಲ್ಲಿ ಹೊರಟಿದ್ದರು. ನಾನು, ನನ್ನಾಕೆ ಜೊತೆಗೂಡಿದ್ದು ಅವರಿಗೂ ಮುದ ನೀಡಿತು.

ಚೆನ್ನಸಾಗರ ಎಂಬ ಊರಿನ ಅಂಚಿಗೇ ಜಯಮಂಗಲಿ ನದಿಯ ಸೇತುವೆ. ಆ ಜಾಗ ತಲುಪಿದಾಗ ಸಂಜೆಯ ಸೂರ್ಯ ಅರ್ಧ ಭಾಗದಲ್ಲಷ್ಟೇ ಹರಿಯುತ್ತಿದ್ದ ನೀರಿನ ಮೇಲಿಂದ ಪ್ರತಿಫಲಿಸುತ್ತಿದ್ದ. ಅವರಿಬ್ಬರೂ ಉಟ್ಟಿದ್ದ ಪಂಚೆಯನ್ನು ಮೇಲಕ್ಕೆತ್ತಿಕೊಂಡು ಮೊಳಕಾಲು ಮಟ್ಟದ ನೀರಿನಲ್ಲಿ ನಡೆದುಹೋಗಿ ನೀರಾಟವಾಡುತ್ತಿದ್ದರು. ನಾನೂ ಪಂಚೆ ತರಬೇಕಿತ್ತು ಅಂತ ಅಂದುಕೊಂಡೇ ದಂಡೆಯಲ್ಲಿ ನಿಂತು ಮೊಬೈಲು ಕ್ಯಾಮೆರಾದಲ್ಲಿ ನದಿಯಲ್ಲಿ ಆಟವಾಡುತ್ತಿದ್ದವರ ಹಾಗೂ ಗಂಗಾ ಪೂಜೆ ಮಾಡಲು ಬಂದು ನೀರಿಗಿಳಿದಿದ್ದ ಊರ ನಾರಿಯರ ಫೋಟೋಗಳನ್ನು ಸೆರೆಹಿಡಿದೆ. ನನ್ನ ಅಣ್ಣನ ಮಗ ನದಿಯ ಮೇಲ್ಮುಖದತ್ತ ಬೆರಳು ಮಾಡಿ 'ಅಲ್ಲಿ ಚೆನ್ನಸಾಗರದವರು ಬ್ಯಾರಿಕೇಡ್ ಹಾಕಿ ಅರ್ಧ ನೀರನ್ನು ಕಾಲುವೆಗಳಿಗೆ ಹರಿಸುತ್ತಾರೆ. ಇಲ್ಲೀಗ ಹರಿಯುತ್ತಿರುವ ನದಿ ಬ್ಯಾರಿಕೇಡಿನ ಮೇಲಿಂದ ಇಳಿದು ಬರುತ್ತಿರುವುದು' ಎಂಬ ಸಂಗತಿ ತಿಳಿಸಿದ. ಆ ಜಾಗಕ್ಕೆ ಹಲವರು ಮೋಟಾರು ಬೈಕುಗಳಲ್ಲಿ

ಹೋಗಿಬರುತ್ತಿದ್ದರು. ಆ ಹುಲ್ಲು, ಕೆಸರು ತುಂಬಿದ್ದ ಕಾಲು ದಾರಿಯಲ್ಲಿ ಹೋಗಿಬರುವುದು ಕಷ್ಟ ಎನಿಸಿದ್ದಷ್ಟೇ ಅಲ್ಲ, ಇನ್ನೇನು ಸೂರ್ಯ ಮುಳುಗಿ ಕತ್ತಲಾಗುತ್ತದೆಂಬ ಅಳುಕಿನಿಂದಲೂ ಬ್ಯಾರಿಕೇಡ್ ಸಮೀಪಿಸುವ ಆಲೋಚನೆ ಬಿಡಬೇಕಾಯಿತು. ನನ್ನಾಕೆಯಂತೂ ಹಿಂದೆಂದೂ ಹೀಗೆ ನದಿಯನ್ನು ಇಷ್ಟು ಹತ್ತಿರದಿಂದ ನೋಡಿರಲಿಲ್ಲ. ಈಗ ಸೊಸೆಯೊಂದಿಗೆ ಸೇರಿ ಗಂಗಾಪೂಜೆ ಮಾಡಿದ್ದು ನನಗೂ ಹೆಮ್ಮೆಯೆನಿಸಿತು. ಸಂಜೆ ನಮ್ಮೂರನ್ನು ಸೇರಿದಾಗ ಉತ್ಸವಕ್ಕೆ ಇನ್ನೂ ಸಮಯವಿತ್ತು. ಲಭ್ಯವಿದ್ದ ಬಾಲ್ಯ ಗೆಳೆಯರ ಜೊತೆ ಒಂದಿಷ್ಟು ಕುಶಲೋಪರಿ, ಹಾಲು, ಹಣ್ಣುಗಳ ಸ್ವೀಕಾರ.

ಉತ್ಸಾಹಿ ಯುವಕರು ಅಲಂಕೃತಗೊಂಡ ಉತ್ಸವ ಮೂರ್ತಿಗಳನ್ನು ಹೊತ್ತು ಹೊರಟ ಊರಿನ ಮುಖ್ಯ ರಸ್ತೆಗುಂಟ ತಮಟೆಗಳ ತಂಡದ ಮೊರೆತ, ಜೈಕಾರಗಳ ಗುಂಪಿನ ಮುಂಚೂಣಿಯಲ್ಲಿ ನಾನೂ ಹೊರಟೆ. ಬನ್ನಿ ದಿಬ್ಬದಲ್ಲಿ ದೇವತಾ ಮೂರ್ತಿಗಳನ್ನು ಇಳಿಸಿ ಪೂಜೆಯ ನಂತರ ಎಲ್ಲರಿಗೂ ಬನ್ನಿ ಪತ್ರೆಯ ವಿತರಣೆ. ಬನ್ನಿ ಮಂಟಪದ ಬಳಿ ನೆಡಲಾಗಿದ್ದ ಹತ್ತು ಬಾಳೆ ಕಂದುಗಳನ್ನು ಮಚ್ಚಿನಿಂದ ಕಡಿದು ಉರುಳಿಸುವ ಪರಂಪರೆ. ಅದು ಶಾನುಭೋಗರ ಮನೆತನಕ್ಕೆ ಮೀಸಲು. ನನಗೆ ಹಾರ ಹಾಕಿ ಮಚ್ಚನ್ನು ನನ್ನ ಕೈಗೆ ಹಿರಿಯ ಗೆಳೆಯರು ನೀಡಿದಾಗ, ಅದನ್ನು ಆ ಹಿಂದಿನ ನಾಲ್ಕು ವರ್ಷಗಳಿಂದ ನೆರವೇರಿಸುತ್ತ ಬಂದಿದ್ದ ನನ್ನ ಅಣ್ಣನ ಮಗನ ಕೈಗೆ ವರ್ಗಾಯಿಸಿದೆ. 'ದಶ ಹರಾ' ಆಗಿ ಈ ವರ್ಷದ ವಿಜಯದಶಮಿ ಆಚರಣೆ ಪೂರ್ಣಗೊಂಡಿತು.

ಊರು ಬಿಟ್ಟಾಗ ರಾತ್ರಿ ಎಂಟು ಗಂಟೆ. ಮತ್ತೆ ಅದೇ ಜಯಮಂಗಲಿ ನದಿಯ ಸೇತುವೆ ಮೇಲೆ ಹಾಯುವಷ್ಟು ತುಂಬಿ ಹರಿವಾಗ ನೋಡಬೇಕೆಂಬ ಅಭೀಪ್ಸೆ, ೫೦ ವರ್ಷಗಳ ಬಳಿಕ ನಮ್ಮೂರಿನಲ್ಲಿ ವಿಜಯದಶಮಿ ಉತ್ಸವದಲ್ಲಿ ಪಾಲ್ಗೊಂಡ ಸಂತಸ ಎರಡೂ ಮನದಲ್ಲಿ ಮನೆ ಮಾಡಿದ್ದವು.

***

ಚಲನಚಿತ್ರಗಳ ಗೀತೆಗಳಲ್ಲಿ ನಾಡು, ನುಡಿಯ ಅಭಿವ್ಯಕ್ತಿ

– ಮಹಾಬಲ

ಅದೊಂದು ರಾಜ್ಯೋತ್ಸವ ಸಂದರ್ಭದಲ್ಲಿ ನಡೆಯುತ್ತಿದ್ದ ವಾದ್ಯಗೋಷ್ಠಿ. ಆರಂಭದಲ್ಲೇ ಆ ವಾದ್ಯಗೋಷ್ಠಿಯ ನೇತಾರ ಮಾತನಾಡುತ್ತ, "ಕಲಾಭಿಮಾನಿಗಳೇ, ಸಮಯದ ಕೊರತೆಯಿಂದಾಗಿ ನಮ್ಮ ತಂಡ ಕನ್ನಡದ ಯಾವುದೇ ಭಾವಗೀತೆಗಳನ್ನು ಅಭ್ಯಾಸ ಮಾಡಲಾಗಲಿಲ್ಲ. ಅದರ ಬದಲಿಗೆ ನಾಡು, ನುಡಿ ಕುರಿತಂತೆ ಅಭಿಮಾನ ಉಕ್ಕಿಸುವ ಚಲನಚಿತ್ರ ಗೀತೆಗಳನ್ನು ಪ್ರಸ್ತುತಪಡಿಸುತ್ತಿದ್ದೇವೆ. ಕೇಳಿ ಪ್ರೋತ್ಸಾಹಿಸಲು ಕೋರುತ್ತೇವೆ" ಎಂದು ಪ್ರಾಮಾಣಿಕವಾಗಿ ವಿನಂತಿಸಿದ. ಬಹುಪಾಲು ಜನ ಚಪ್ಪಾಳೆ, ಸೀಟಿಗಳಿಂದ ಆ ಮಾತನ್ನು ಸ್ವಾಗತಿಸಿದರು. ಆದರೆ ಸಭೆಯಲ್ಲಿದ್ದ ಕೆಲವು ಸಾಹಿತ್ಯಾಸಕ್ತರು, "ಅಯ್ಯೋ, ರಾಜ್ಯೋತ್ಸವದಲ್ಲೂ ಸಿನಿಮಾ ಹಾಡೇ" ಎಂದು ಮೂಗು ಮುರಿದರು.

ಹೀಗೆ ಸಾಹಿತ್ಯದಿಂದ ಸಿನಿಮಾವನ್ನು ಪ್ರತ್ಯೇಕಿಸಿ ಕಾಣುವುದು ಅಷ್ಟೇನೂ ಆರೋಗ್ಯಕರವಾದುದು ಎಂದು ನನಗೆ ಅನಿಸಲಿಲ್ಲ. ಮಲೆಯಾಳದ ಪ್ರಸಿದ್ಧ ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕ ಎಂ.ಟಿ. ವಾಸುದೇವನ್ ನಾಯರ್ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಮಾರಂಭದಲ್ಲಿ ಭಾಗವಹಿಸಿ, "ಕನ್ನಡದ ಸಾಹಿತಿಗಳು ತಮ್ಮನ್ನು ಹೆಚ್ಚುಹೆಚ್ಚು ಸಿನಿಮಾರಂಗದಲ್ಲಿ ತೊಡಗಿಸಿಕೊಂಡಾಗ ಮಾತ್ರ ಸಿನಿಮಾದ ಗುಣಮಟ್ಟ ಉತ್ತಮಗೊಳ್ಳುತ್ತದೆ" ಎಂದಿದ್ದರು. ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳಾಗಿದ್ದರೂ ಅವರು ಸಿನಿಮಾ ನಿರ್ದೇಶಕರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಕನ್ನಡದಲ್ಲೂ ಚಂದ್ರಶೇಖರ ಕಂಬಾರ, ಬರಗೂರು ರಾಮಚಂದ್ರಪ್ಪ, ನಾಗತಿಹಳ್ಳಿ ಚಂದ್ರಶೇಖರ ಮುಂತಾದ ಸಾಹಿತಿಗಳು ಚಲನಚಿತ್ರರಂಗದಲ್ಲೂ ಸಕ್ರಿಯರು.

ಆ ವಾದ್ಯಗೋಷ್ಠಿಯ ನೇತಾರ ಹೇಳಿದಂತೆ ಕನ್ನಡ ಚಲನಚಿತ್ರಗಳಲ್ಲೂ ನಾಡು, ನುಡಿಯನ್ನು ಸಂಭ್ರಮಿಸುವ, ಉತ್ತೇಜಿಸುವ ಅನೇಕ ಗೀತೆಗಳಿವೆ.

ಕನ್ನಡ ರಾಜ್ಯೋತ್ಸವದಂದು ನಮಗೆ ಥಟ್ಟನೆ ಸ್ಮರಣೆಗೆ ಬರುವ ಹಾಡು 'ಪೋಸ್ಟ್ ಮಾಸ್ಟರ್' ಚಿತ್ರದ, ಜಿ.ವಿ.ಅಯ್ಯರ್ ಬರೆದಿರುವ "ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ ಮುನ್ನಡೆಯ ಕನ್ನಡದ ದಾರಿದೀವಿಗೆ ನೀಯೆ". ಮನೆಮಂದಿಯೆಲ್ಲ ಕುಳಿತು ತಾಯಿ ಭುವನೇಶ್ವರಿಯನ್ನು ಶ್ರದ್ಧೆಯಿಂದ ಪೂಜಿಸುವ ದೃಶ್ಯ ಇದು. ಅದೇ ರೀತಿ ಮತ್ತೊಂದು ಹಾಡು ಜಿ.ವಿ. ಅಯ್ಯರ್ ಅವರದೇ ಸಾಹಿತ್ಯವಿರುವ 'ತಾಯಿ ಕರುಳು' ಚಿತ್ರದ "ಬಾ ತಾಯಿ ಭಾರತಿಯೆ, ಭಾವ ಭಾಗೀರತಿಯೆ" ಗೀತೆ. ಇದರಲ್ಲಿ ಕವಿ ಭಾರತಮಾತೆಯನ್ನು ಕರ್ನಾಟಕದ ನದಿ, ಪ್ರಕೃತಿಗಳ ನಾಡಿಗೆ ಆಹ್ವಾನಿಸುತ್ತಾನೆ.

ನಾಡಗೀತೆ "ಭಾರತ ಜನನಿಯ ತನುಮಾತೆ"ಯನ್ನು ಅನಂತಸ್ವಾಮಿ, ಅಶ್ವಥ್ ಅವರುಗಳು ರಾಗ ಸಂಯೋಜನೆ ಮಾಡುವ ಮೊದಲೇ 'ಮನ ಮೆಚ್ಚಿದ ಮಡದಿ" ಚಿತ್ರದಲ್ಲಿ ಸಂಗೀತಕ್ಕೆ ತಂದವರು ವಿಜಯಭಾಸ್ಕರ್. ಪಿ.ಬಿ. ಶ್ರೀನಿವಾಸ್ ಅವರು ಮಧುರವಾಗಿ ಹಾಡಿರುವ ಈ ಹಾಡು ಇಂದೂ ಜನರ ನಾಲಿಗೆಯಲ್ಲಿ ನಲಿದಾಡುತ್ತಿದೆ.

'ಒಂದು ಸಿನಿಮಾ ಕತೆ' ಚಿತ್ರದಲ್ಲಿ ನಾಯಕನಟ ಅನಂತನಾಗ್ ಅವರು "ಕನ್ನಡ ಹೊನ್ನುಡಿ ದೇವಿಯನು ನಾ ಪೂಜಿಸುವೆ, ಆರಾಧಿಸುವೆ" ಹಾಡಿನಲ್ಲಿ ಸಾರಸ್ವತ ಹಾಗೂ ಸಿನಿಮಾಲೋಕದ ಪ್ರಾತಃ ಸ್ಮರಣೀಯರ ಭಾವಚಿತ್ರಕ್ಕೆ ವಂದನೆ ಸಲ್ಲಿಸುವ ದೃಶ್ಯ ಭಾವಪೂರ್ಣವಾಗಿದೆ. ಎಂಬತ್ತರ ದಶಕದ ಹಲವು ಚಲನಚಿತ್ರಗಳಲ್ಲೂ ಈ ಪರಂಪರೆ ಮುಂದುವರೆದಿರುವದು ಸಂತಸಕರವಾಗಿದೆ. "ಕರುನಾಡ ತಾಯಿ ಸದಾ ಚಿನ್ಮಯಿ'' ಹಾಡಾಗಲೀ, "ಇದೇ ನಾಡು, ಇದೇ ಭಾಷೆ'' ಹಾಡುಗಳೂ ಎಲ್ಲ ವಾದ್ಯಗೋಷ್ಠಿಗಳ ಪ್ರಿಯವಾದ ಗೀತೆಗಳೇ.

'ಚಲಿಸುವ ಮೋಡಗಳು' ಚಿತ್ರದ "ಜೇನಿನ ಹೊಳೆಯೋ" ಗೀತೆಯಲ್ಲಿ ಕನ್ನಡ ಸಾಹಿತ್ಯದ ಮಹತ್ತನ್ನು ಮಧುರವಾಗಿ ವರ್ಣಿಸಲಾಗಿದೆ. ಅದೇ ರೀತಿ ಡಾ.ರಾಜಕುಮಾರ್ ಅವರ ಮತ್ತೊಂದು ಗೀತೆ "ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು" ಹಾಡು ಒಂದು ಪ್ರತಿನಾಡಗೀತೆಯೇ ಆಗಿಬಿಟ್ಟಿದೆ.

ಒಮ್ಮೆ ಪ್ರಸಿದ್ಧ ಸಂಗೀತ ನಿರ್ದೇಶಕ ಜಿ.ಕೆ.ವೆಂಕಟೇಶ್ ಅವರು, "ಕನ್ನಡಿಗರು ರಾಜ್ಯೋತ್ಸವ ಬಂದಾಗಲೆಲ್ಲ ತಪ್ಪದೆ ನನ್ನ ಹಾಡು 'ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ' ನೆನಪಿಸಿಕೊಳ್ಳಬೇಕು" ಎಂದಿದ್ದರು. ಅರ್ಥಪೂರ್ಣ ಸಾಲುಗಳಿಂದ ಇಂದೂ ನಾವು ಗುನುಗುವ ಹಾಡು ಅದು ಎಂಬುದಂತೂ ನಿಜ.

'ಗಂಧದ ಗುಡಿ' ಚಿತ್ರದ "ನಾವಾಡುವ ನುಡಿಯೇ ಕನ್ನಡ ನುಡಿ" ಹಾಡಿನಲ್ಲಿ ನಾಡಿನ ಪ್ರಕೃತಿ ಹಾಗೂ ಪ್ರಾಣಿಸಂಪತ್ತನ್ನು ಪರಿಣಾಮಕಾರಿಯಾಗಿ ಬಣ್ಣಿಸಲಾಗಿದೆ.

ನಾಡಿನ ಚಾರಿತ್ರಿಕ ವ್ಯಕ್ತಿಗಳನ್ನು ಸ್ಮರಿಸುವ ಗೀತೆಗಳು ಇವೆ. ಉದಾಹರಣೆಗೆ. 'ವೀರ ಸಿಂಧೂರ ಲಕ್ಷ್ಮಣ', 'ಕನ್ನಡ ನಾಡಿನ ವೀರರಮಣಿಯ' ಅಂಥವು.

ಕನ್ನಡ ನಾಡು ನುಡಿಯನ್ನು ಉಲ್ಲೇಖಿಸುವ ಇಂಥ ಇನ್ನೂ ಹಲವಾರು ಚಲನಚಿತ್ರಗೀತೆಗಳು ಕನ್ನಡದಲ್ಲಿ ಇವೆ. ಅವುಗಳಲ್ಲಿ ಬಹುಪಾಲು ಇಂದೂ ಕನ್ನಡ ಜನರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದುಕೊಂಡಿವೆ.

ಆದರೆ ಇಂದಿನ ದಿನಗಳಲ್ಲಿ ಇಂಥ ಗೀತೆಗಳ ಹಾಜರಿ ಕ್ಷೀಣಿಸಿದೆ. ಏಕಕಾಲದಲ್ಲಿ ಹಲವಾರು ಭಾಷೆಗಳಲ್ಲಿ ಚಲನಚಿತ್ರ ತಯಾರಾಗುವ ಪ್ಯಾನ್ ಇಂಡಿಯಾ ಪ್ರವೃತ್ತಿಯಲ್ಲಿ ನಾಡು, ನುಡಿ ಎಂಬ ಪರಿಕಲ್ಪನೆಯೇ ಮಾಯವಾಗಿದೆ. ಹಳೆಯ ಗೀತೆಗಳ ಸುವರ್ಣ ಭಂಡಾರವನ್ನೇ ನಾವು ಇಂದೂ ಆಶ್ರಯಿಸುವುದು ಅನಿವಾರ್ಯವಾಗಿಬಿಟ್ಟಿದೆ.

***

ಸಣ್ಣ ಕತೆ

ಮಾದೇಸನ ಟರ್ನಿಂಗ್ ಪಾಯಿಂಟು

– ಟಿ.ಎಸ್. ಶ್ರವಣ ಕುಮಾರಿ

ಮಾದೇಶನಿಗೆ ದುಡಿದು ತಿನ್ನುವುದು ಎಂದೂ ಜೀವನದ ಉದ್ದೇಶವೇ ಆಗಿರಲಿಲ್ಲ. ದುಡಿದು ತಿನ್ನುವುದಿರಲಿ, ಚಿಕ್ಕವನಿದ್ದಾಗ ಓದುವುದು, ಬರೆಯುವುದನ್ನು ಕೂಡಾ ಅವನೆಂದೂ ಮಾಡಲೇ ಇಲ್ಲ. ಏಳು ಜನ ಮಕ್ಕಳಲ್ಲಿ ಆರನೆಯವನಾಗಿ ಹುಟ್ಟಿದ ಮಾದೇಶನ ಓದಿನ ಬಗ್ಗೆ ಅಪ್ಪ ಜವರಪ್ಪ, ಅಮ್ಮ ಪುಟ್ಟಮಾದಮ್ಮನ ಉತ್ಸಾಹ, ಕಾಳಜಿಯೂ ತಗ್ಗಿತ್ತೆಂದೇ ಹೇಳಬೇಕು. ಅವನ ಅಪಾರ ಸೋಂಭೇರಿತನದ ಬಗ್ಗೆ ಗಮನ ಹರಿಸುವಷ್ಟು ವ್ಯವಧಾನವೂ ಅವರಲ್ಲಿ ಉಳಿದಿರಲಿಲ್ಲ. ಎಷ್ಟೋ ಹೊತ್ತಿಗೆ ಎದ್ದು, ಮನಸ್ಸು ಬಂದರೆ ಹಲ್ಲುಜ್ಜಿ, ಸಮಯವಿದ್ದರೆ ಮಿಂದು, ಅಮ್ಮ ನೀಡಲು ಶುರುಮಾಡಿದ ನಂತರ ಬಂದು ಮುದ್ದೆಗಳನ್ನು ಹೊಟ್ಟೆಯೊಳಗೆ ಉರುಳಿಸಿಕೊಂಡು, ತಯಾರಾಗಿ ಇಟ್ಟಿದ್ದ ಟಿಫಿನ್ ಕ್ಯಾರಿಯರನ್ನು ಎತ್ತಿಕೊಂಡು ಮನಸ್ಸಾದರೆ ಶಾಲೆಯ ಕಡೆಗೆ ಹೆಜ್ಜೆಹಾಕುತ್ತಿದ್ದ. ಬಿಸಿಯಾಗಿ ಉಂಡುಬಂದು ಕಡೆಯ ಬೆಂಚಿನಲ್ಲಿ ಕುಳಿತವನಿಗೆ ಮೇಷ್ಟ್ರು ಹೇಳಿಕೊಡುತ್ತಿದ್ದ ಮಗ್ಗಿ, ಕಾಗುಣಿತವೆಲ್ಲಾ ಜೋಗುಳದಂತೆ ಕೇಳಿಸುತ್ತಾ ಹಾಗೆಯೇ ಗೋಡೆಗೊರಗಿ ಗೊರೆಯುತ್ತಿದ್ದವನನ್ನು ಎಬ್ಬಿಸುತ್ತಿದ್ದದ್ದು ಗುಂಡಣ್ಣ ಮೇಷ್ಟ್ರ ಬೆತ್ತದ ಏಟೇ. ಏಟಿಗೆ ಬಗ್ಗುವ ಗಿರಾಕಿಯೇ ಅವನು. ಮೇಷ್ಟ್ರೇ ಸೋತು ಶರಣಾದರು ಬಿಡಿ.

ಚಿಕ್ಕಂದಿನಿಂದಲೂ ಅವನಿಗೆ ಓದು ಪಕ್ಕಕ್ಕಿರಲಿ; ಕಷ್ಟಪಟ್ಟು ಮಾಡುವ ಯಾವ ಕೆಲಸದ ಬಗ್ಗೆಯೂ ಆಸಕ್ತಿಯಿಲ್ಲ. ಅಣ್ಣಂದಿರೆಲ್ಲಾ ತುಂಬಾ ಚೆನ್ನಾಗಿ ಅಲ್ಲದಿದ್ದರೂ ಓದಿ, ಗವರ್ಮೆಂಟ್ ಕೆಲಸವನ್ನೋ ಮತ್ತೊಂದನ್ನೋ ಹಿಡಿದು ತಂತಮ್ಮ ಕಾಲಮೇಲೆ ನಿಂತು, ಕಷ್ಟವಿಲ್ಲದೆ ಮದುವೆಯಾಗಿ, ಸುಖವಾಗಿ ಎನ್ನಲಾಗದಿದ್ದರೂ ನೆಮ್ಮದಿಯಿಂದ ಸಂಸಾರ ಮಾಡಿಕೊಂಡಿದ್ದರು. ಇವನೋ ಸ್ಕೂಲು ತಪ್ಪಿಸಿಕೊಂಡು ಜವರಪ್ಪನ ಮಲೆಮಾದೇಶ್ವರ ಕಿರಾಣಿ ಕಮ್ ಜನರಲ್ ಸ್ಟೋರಿನಲ್ಲಿ ಕುಳಿತು ಆಗೀಗ ಒಂದೊಂದೇ ಚಾಕಲೇಟನ್ನು ಗುಳುಂ ಮಾಡುತ್ತಾ, ಪುರಿಗಿಷ್ಟು ಖಾರಾಸೇವು ಬೆರೆಸಿಕೊಂಡು ಮುಕ್ಕುತ್ತಾ ಹೇಗೋ ದೊಡ್ಡವನಾಗಿಬಿಟ್ಟ ಅಷ್ಟೇ. 'ಬುದ್ದಿದ್ರೆ ಮುದ್ದೆ ತಿಂತಾನೆ ಇಲ್ಲದಿದ್ದರೆ ..ಲು ತಿಂತಾನೆ' ಎಂದು ವೇದಾಂತ ಮಾತನಾಡುತ್ತಾ ಜವರಪ್ಪನೂ ಅವನ ಭವಿಷ್ಯವನ್ನು ದೇವರಿಗೇ ಬಿಟ್ಟುಕೊಟ್ಟು ನಿಶ್ಚಿಂತನಾಗಿಬಿಟ್ಟ.

ಅಂಗಡಿಯನ್ನು ನೋಡಿಕೊಳ್ಳುವ ಉಮೇದಿನಿಂದ ಆಗೀಗ ಬಂದು ಗಲ್ಲಾದ ಮೇಲೆ ಕೂರುತ್ತಿದ್ದ ಅವನಿಂದ ಅವರಪ್ಪನಿಗೆ ಆಗುತ್ತಿದ್ದ ಉಪಕಾರವೆಂದರೆ, ಕೂತಾಗಲೆಲ್ಲಾ ಒಂದಷ್ಟು ಪ್ಯಾಕು ಸಿಗರೇಟು, ಜೊತೆಗೊಂದಷ್ಟು ದುಡ್ಡು ಮಂಗಮಾಯ! ಕೇಳಿದರೆ ಯಾವನಿಗ್ಗೊತ್ತು ಎನ್ನುವ ಉಡಾಫೆ ಬೇರೆ! ಬೆಳೆದ ಮಗನನ್ನು ದಬಾಯಿಸಿ ಕೇಳುವುದುಂಟೆ?! ಮನಸ್ಸಿನಲ್ಲೇ ಬೈದುಕೊಂಡು ಸುಮ್ಮನಾಗುತ್ತಿದ್ದದ್ದಷ್ಟೆ. ಆ ರಾತ್ರಿ ಗೆಳೆಯರೊಂದಿಗೆ ಮೋಜಾಗಿ ಸಿಗರೇಟು ಸೇದುತ್ತಾ ಇಸ್ಪೀಟಾಡಿ, ಒಂದೆರೆಡು ಬಾಟಲುರುಳಿಸಿ ತಡರಾತ್ರಿಗೆ ಮನೆಗೆ ಬಂದರೂ, ಪುಟ್ಟಮಾದಮ್ಮನ ಹೆತ್ತ ಕರುಳು ತಡೆಯದೆ ಆ ತಡರಾತ್ರಿಯಲ್ಲೂ ಎದ್ದು ಮಗನಿಗೆ ಬೈದುಕೊಂಡಾದರೂ ಉಣ್ಣಲು ಇಕ್ಕಿ ಮಲಗುತ್ತಿತ್ತು.

ಇಂತಿಪ್ಪ ಮಾದೇಸನಿಗೆ ಮದುವೆಯ ವಯಸ್ಸೂ ಬಂತು. ವಯಸ್ಸೇನೋ ಬಂತು; ಆದರೆ ಅವನನ್ನೂ ಒಬ್ಬ ವರ ಎಂದು ಗುರುತಿಸಿ ಹೆಣ್ಣು ಕೊಡುವವರು ಬೇಕಲ್ಲ. ಎಲ್ಲಾ ಅಣ್ಣ, ಅಕ್ಕಂದಿರದ್ದೂ, ಇವನ ಹಿಂದೆಯೇ ಹುಟ್ಟಿದ ತಂಗಿ ಸಾವಂತ್ರಿಯದ್ದೂ ಮದುವೆಯಾದರೂ ಇವನೊಬ್ಬ ಉಳಿದೇಹೋದ. ಏನು ಗೇದು ಹೆಂಡತಿಯನ್ನು ಸಾಕುತ್ತಾನೆಂಬ ಭರವಸೆಯಾದರೂ ಬೇಕಲ್ಲ! ಜವರಪ್ಪನಿಗೂ ಪುಟ್ಟ ಮಾದಮ್ಮನಿಗೂ ಈ ಮಗನದ್ದೇ ಶಾನೆ ಯೋಚನೆಯಾಗಿ ಕಡೆಗೆ ಜವರಪ್ಪ ತನ್ನ ಏಕೈಕ ಸಾಮ್ರಾಜ್ಯವಾದ ಅಂಗಡಿಯನ್ನು, ಎಲ್ಲವನ್ನೂ ಮಾರಿ ಉಳಿದುಕೊಂಡಿದ್ದ ಪುಟ್ಟ ಹಳೆಮನೆಯನ್ನು ಮಗನಿಗೇ ಬಿಟ್ಟು ಕೊಡುವುದಾಗಿ ಮಕ್ಕಳೆಲ್ಲರನ್ನೂ ಒಪ್ಪಿಸಿದ. ಸ್ವಲ್ಪ ಬುದ್ಧಿಯಿದ್ದ ಹಿರಿಯ ಅಣ್ಣಂದಿರು ಅವನ ಉಪಯೋಗಕ್ಕೆ ಮಾತ್ರಾ ಬಿಟ್ಟುಕೊಡು; ಅವನ ಹೆಸರಿಗೆ ಮಾಡಿಬಿಡಬೇಡ, ಆಮೇಲೆ ಅದನ್ನೂ ಸೀದು ನೀರು ಕುಡಿದುಬಿಡುತ್ತಾನೆ ಎಂದು ಎಚ್ಚರಿಸಿದ್ದರಿಂದ ಜವರಪ್ಪ ಆ ಬಗ್ಗೆ ಪತ್ರ ಮಾಡದೆ ಬರಿ ಬಾಯಿಮಾತಲ್ಲಿ ನೆಂಟರಿಷ್ಟರ ಬಳಿ ಮನೆ, ಅಂಗಡಿ ಮಾದೇಸನ

ಜೀವನಕ್ಕೆ ಎಂದು ಸುದ್ದಿ ಹಬ್ಬಿಸಿದ. ಸಾಕಷ್ಟು ವರ್ಷದಿಂದ ಹೆಸರು ಮಾಡಿ ಆಯಕಟ್ಟಾದ ಜಾಗದಲ್ಲಿದ್ದ ಅಂಗಡಿ; ಹಳೆಯದಾದರೂ ಇರಲೊಂದು ತಾವು ಇದೆಯೆಂದು ಅವನನ್ನೂ ಕೇಳಿಕೊಂಡು ಹೆಣ್ಣುಗಳು ಬರತೊಡಗಿದವು.

ಅಂತೂ ಪಕ್ಕದೂರಿನ ಮಾಲಪ್ಪನ ಮಗಳು ಮಾಲಕ್ಷ್ಮಿಯೊಂದಿಗೆ ಮಾದೇಸನ ಮದುವೆ ನಿಕ್ಕಿಯಾಗಿ, ಅವಳು ಧಾನ್ಯದ ಕೊಳಗ ಒದ್ದುಕೊಂಡು ಮನೆಯೊಳಗೆ ಬಂದಳು. ಮದುವೆಯಾದ ಹೊಸದರಲ್ಲೊಂದಷ್ಟು ದಿನ ನಿಯತ್ತಾಗಿ ಅಂಗಡಿಗೆ ಹೋಗಿ, ದಿನಪೂರ್ತಿಯಲ್ಲದಿದ್ದರೂ ಬೆಳಗ್ಗೆ, ಮಧ್ಯಾಹ್ನ ಒಂದಿಷ್ಟು ಹೊತ್ತು ಕೂತಿರುತ್ತಿದ್ದ. ಸಂಜೆ ತನ್ನ ಪಟಾಲಂ ಜೊತೆಗೆ ಕಾಲ ಕಳೆದರೂ ತಡಮಾಡದೆ ರಾತ್ರಿ ಮನೆಗೆ ಬರುತ್ತಿದ್ದುದರಿಂದ ಜವರಪ್ಪ ದಂಪತಿಗಳಿಗೆ ಮಗ ಕಡೆಗೂ ಸಂಸಾರಸ್ಥನಾದ ಎನ್ನುವ ನೆಮ್ಮದಿ ದೊರಕಿತು. ಕಾಲಕ್ರಮೇಣ ಎರಡು ಮಕ್ಕಳೂ ಆದವು. ಇವರಿಬ್ಬರ ಮೇಲೆ ಮನೆ ಬಿಟ್ಟು ಅವರ ಬಹುದಿನಗಳ ಆಸೆಯಾಗಿದ್ದ ಕಾಶೀಯಾತ್ರೆಗೆ ಹೋಗಿ, ಅಲ್ಲಿ ಕಾಲುಜಾರಿ ಗಂಗಾಪ್ರವಾಹದಲ್ಲಿ ಮುಳುಗಿಹೋದರು...

ಮಾದೇಸನ ಜೀವನದ ಹೊಸ ಅಧ್ಯಾಯ ಆರಂಭವಾಯಿತು. ಮೊದಲೇ ಕಪಿ ಬುದ್ಧಿ. ಮೇಲೆ ಹೆಂಡ ಕುಡಿಸಿದ ಹಾಗಾಯಿತು. ಅಂಗಡಿಯ ಸರಕನ್ನು ಮಾರಿದ ದುಡ್ಡ್ಯಾವುದೂ ಗಲ್ಲಾ ಪೆಟ್ಟಿಗೆಯನ್ನೂ ಸೇರಲಿಲ್ಲ; ಹೊಸ ಸರಕಾಗಿ ಬಂದು ಅಂಗಡಿಯನ್ನೂ ತುಂಬಲಿಲ್ಲ. ಸೀದಾ ಸಾರಾಯಿ ಗಡಂಗಿಗೆ, ಇಸ್ಪೀಟು ಅಡ್ಡಾಗೆ ತೇಲುತ್ತಾ ಹೋಗಿ ಹಾಗೆ ಹಾಗೆಯೇ ಮಾಯವಾಗತೊಡಗಿದವು. ಅಂಗಡಿಯ ಬಾಗಿಲಿಗೆ ಬೀಗ ಬೀಳುವ ಸ್ಥಿತಿ ಬಂದಾಗ ಅಣ್ಣಂದಿರ ಬಳಿ ಕೈಚಾಚಿ ಒಂದಷ್ಟು ಹೊಸ ಸರಕನ್ನು ತಂದು ತುಂಬಿಸಿಕೊಂಡ. ಆದರೆ ಮಾಮೂಲಿನಂತೆ ಯಾವುದೂ ಗಲ್ಲಾವನ್ನು ಸೇರಲಿಲ್ಲವೇ! ಅಣ್ಣಂದಿರೂ ಇವನು ಕಷ್ಟ ಹೇಳಿಕೊಂಡಾಗೆಲ್ಲಾ ಒಂದಷ್ಟು ದಿನ ಸಹಾಯ ಮಾಡಿದರು. 'ಇವನೇಗ್ತಿ ಇಷ್ಟೇ' ಎನ್ನುವ ತೀರ್ಮಾನವಾದಮೇಲೆ ಅವರೂ ತಾರಮ್ಮಯ್ಯ ಆಡಿಸಿ, ತಮಗಿರಬಹುದಾದ ನೂರೆಂಟು ಕಷ್ಟಗಳನ್ನು ಇವನೊಂದಿಗೆ ಹೇಳಿ ಸಹಾಯಕ್ಕೆ ಪೂರ್ಣವಿರಾಮ ಹಾಕಿದರು. ಹೆಣ್ಣು ಕೊಟ್ಟ ತಪ್ಪಿಗೆ ಮಾಲಪ್ಪ ಮಗಳು, ಮೊಮ್ಮಕ್ಕಳು ತೀರಾ ಉಪವಾಸ ಬೀಳದಂತೆ ಆಗೀಗ ಒಂದಷ್ಟು ದಿನಸಿ ತಂದುಹಾಕುತ್ತಿದ್ದ.

ಮದುವೆಯಾದ ಮೇಲೂ ಎಷ್ಟು ದಿನ ಅಪ್ಪನ ನೆರಳಲ್ಲಿ ಬದುಕುವುದು? ಮಾಲಕ್ಷ್ಮಿಗೂ ರೋಸಿಹೋಗಿ ಅಪ್ಪನ ಸಹಾಯ ಸಾಕೆಂದು ಅವರಿವರ ಮನೆಯಲ್ಲಿ ಬಾಣಂತಿ–ಮಗುವಿನ ಕೆಲಸ ಮಾಡಿಕೊಂಡು ಹೇಗೋ ಹಿಟ್ಟಿಗೊಂದು ದಾರಿ ಮಾಡಿಕೊಂಡಳು. ಮಾದೇಸನಿಗೆ ಕುಡಿತಕ್ಕೆ ಕಾಸು ಬೇಕಾದಾಗೆಲ್ಲಾ ಅಮ್ಮ ಅಟ್ಟದ ಮೇಲಿಟ್ಟಿದ್ದ ಹಿತ್ತಾಳೆ, ತಾಮ್ರದ ಪಾತ್ರೆಗಳಿಗೊಂದು ದಾರಿ ಕಾಣಿಸಿ ಅಟ್ಟವನ್ನೆಲ್ಲಾ ಖಾಲಿ ಮಾಡಿದ. 'ಏನೋ ಒಸಾ ವೆವಾರ ಮಾಡ್ತೀನಿ' ಎಂದು ಮಾಲಕ್ಷ್ಮಿ ಕೂಡಿಟ್ಟಿದ್ದ ಹುಂಡಿಯ ಕಾಸನ್ನೂ ಉಡಾಯಿಸಿ, ಅವಳ ನಂಬಿಕೆಯನ್ನು ಸಂಪೂರ್ಣವಾಗಿ ಕಳೆದುಕೊಂಡ. ಏನೇನೋ ಕತೆಗಳನ್ನು ಹೆಣೆದು ಊರತುಂಬಾ ಸಾಲ ಮಾಡಿಕೊಂಡ. ಬ್ಯಾಂಕಿನಲ್ಲಿ ಸ್ಕೀಮಿನಲ್ಲಿ ಸಿಗುವ ಯಾವ ಸಾಲವನ್ನೂ ಬಿಡದೆ ದಲ್ಲಾಳಿಗಳ ಸಹಾಯದಿಂದ ತೆಗೆದುಕೊಂಡು ಯಾವ ಕಂತನ್ನೂ ಕಟ್ಟದೆ ಸುಸ್ತಿದಾರನಾದ.

ಸಾಲವನ್ನು ಮರುಪಾವತಿ ಮಾಡಲು ನೋಟೀಸು ಬಂದಾಗ ಮಾಲಕ್ಷ್ಮಿಯ ಮುಂದೆ ಕಣ್ಣೀರು ಹಾಕುತ್ತಾ, ''ಕುತ್ಗೇಗೆ ಬಂದ್ಬುಟ್ಟದೆ. ನಿನ್ನ ತಾಲಿ ತೆಕ್ಕೊಟ್ಟಿಡು. ಮಾರಿ ಸಾಲದ ಕಂತನ್ನು ಕಟ್ಟಿಡ್ತೀನಿ. ಇದನ್ನ ಕಟ್ಟಿದ್ರೆ ಮತ್ತೆ ಅಂಗ್ಡಿ ತೆಗೆಯಕ್ಕೆ ಸಾಲ ಕೊಡ್ತೀನೀಂದವ್ರೆ ಬ್ಯಾಂಕವ್ರು. ಕಸ್ಟಪಟ್ಟು ದುಡ್ದು ನಿಮ್ನೆಲ್ಲಾ ಸಾಕ್ತೀನಿ ನನ್ನಾಣೆಗೂ'' ಎಂದು ಗೋಳಾಡಿದ. ಎಷ್ಟು ಸಲ ಹಳ್ಳಕ್ಕೆ ಬಿದ್ದಿದ್ದರೂ ಮತ್ತೆ ನಂಬಿದ ಮಾಲಕ್ಷ್ಮಿ ತಾಳಿಯನ್ನು ತೆಗೆದುಕೊಟ್ಟ ದಿನವೇ ಕುಡಿದು ಮೋರಿಯಲ್ಲಿ ಬಿದ್ದವನನ್ನು ಮೂಲೆಮನೆ ಸಿದ್ದಣ್ಣ ಮನೆಗೆ ತಂದು ಹಾಕಿದ್ದ. ವಿಷಯ ತಿಳಿದ ಮಾಲಪ್ಪ ಬಂದು ಮಗಳ ದುಃಸ್ಥಿತಿಗೆ ಕಣ್ಣೀರುಗರೆಯುತ್ತಾ ಹೊಸ ತಾಳಿಯೊಂದನ್ನು ಮಗಳಿಗೆ ತಂದುಕೊಟ್ಟು, ''ದುಡ್ಯಾ ಗಂಡ್ಸಿನ ಲಕ್ಸಾನೇನವ್ವಾ ಅವ್ನುದು; ಅವ್ನ ಯಾವ್ ಮಾತ್ನೂ ನಂಬೇಡವ್ವಾ. ಸಾಯೋವ್ರ್ಯಾರೂ ಏಳಿ ಸಾಯಲ್ಲ'' ಎಂದು ಟವೆಲಿನಲ್ಲಿ ಕಣ್ಣೊರೆಸಿಕೊಂಡು ಮಗಳ, ಮೊಮ್ಮಕ್ಕಳ ತಲೆ ನೇವರಿಸಿ ತೆರಳಿದ.

ಬ್ಯಾಂಕಿನವರು ಎಷ್ಟುದಿನ ಸುಮ್ಮನಿದ್ದಾರು? ಜಪ್ತಿ ಮಾಡಲು ಮನೆ ಬಾಗಿಲಿಗೇ ಬಂದರು. ಏನಿದೆ ಮನೆಯಲ್ಲಿ?! ಮನೆ ಅಂಗಡಿ ಅವನ ಹೆಸರಲ್ಲಿಲ್ಲ! ಅಡುಗೆ ಮನೆಯಲ್ಲಿ ನಾಲ್ಕು ಮಡಕೆ, ಹರಕಲು ಬಟ್ಟೆ, ನಾಲ್ಕು ಗೋಣಿ ತಾಟು. ಮಾಲಕ್ಷ್ಮಿ ಸೆರಗು ಹೊದ್ದಿದ್ದರಿಂದ ಕತ್ತಲ್ಲಿದ್ದ ತಾಳಿ ಅವರ ಕಣ್ಣಿಗೆ ಬೀಳಲಿಲ್ಲ. ಮಾದೇಸನ ಮೇಲೆ ಕ್ರಮ ಜರುಗಿಸುತ್ತೇವೆಂದು ಹೆದರಿಸಿ ಹೊರಟರು.

ಅವರು ಹೀಗೆ ಹೊರಟ ತಕ್ಷಣ ಮಾದೇಸ ಮಾಲಕ್ಷ್ಮಿಗೆ ದುಂಬಾಲು ಬಿದ್ದ. 'ತಾಲಿ ತೆಕ್ಕೊಟ್ಟಿಡು. ಕುತ್ಗೇಗ್ಬಂದದೇ' ಅಂತ. 'ಬಿಲ್ಕುಲ್ ಕೊಡಾಕಿಲ್ಲ' ಎಂದು ಮಾಲಕ್ಷ್ಮಿ ಆವಾಜ್ ಹಾಕಿದಾಗ, ''ನಡಿ ಅಂಗಾದ್ರೆ; ಎಲ್ರೂ ವಟ್ಗೆ ನೇಣಾಕ್ಕಂಡ್ಬಿಡಾಣ. ತಾಪತ್ರವೇ ತಪ್ಪೋಯ್ತದೆ'' ಎಂದ ಬುಸುಗುಡುತ್ತಾ. ''ನಿನ್ ಕುತ್ಗೇಗ್ಬಂದ್ರೆ ನಾನ್ಯಾಕೆ, ಮಕ್ಳ್ಯಾಕೆ ಸಾಯ್ಬೇಕು? ಬೇಕಿದ್ರೆ ನೀನೋಗಿ ನೇಣಾಕ್ಕಾ. ನಾವ್ಯಾರೂ ನಿನ್ನೊಂದಿಗ್ ಬರಲ್ಲ'' ಎಂದು ತಿರುಗಿಬಿದ್ದಳು ಮಾಲಕ್ಷ್ಮಿ ಅದೇ ಸ್ಪೀಡಿನಲ್ಲಿ. ಅವಾಕ್ಕಾಗಿ ಹೋದ ಮಾದೇಸ. ''ನಾ ಸಾಯ್ತೀನೀಂದ್ರೂ ನಿಂಗಿಂಕ್ರಾನೂ ದುಃಖವಿಲ್ವಾ? ನೀನೂ ಒಬ್ಬ ಎಡ್ತೀನಾ?'' ಎಂದು ಅವಳನ್ನು ಹೊಡೆದು ಕುತ್ತಿಗೆಗೆ ಕೈಹಾಕಲು ಬಂದ. ಪಕ್ಕಕ್ಕೆ ತಿರುಗಿದವಳ ಕಣ್ಣಿಗೆ ಮೂಲೆಯಲ್ಲಿದ್ದ ಒನಕೆ ಬಿತ್ತು. ಕೈಗೆತ್ತಿಕೊಂಡು ''ಕೈಯೆತ್ತು ನೋಡೋಣ'' ಎಂದು ಒನಕೆ ಓಬವ್ವನ ಹಾಗೆ ನಿಂತಾಗ ಮಾದೇಸ ಬೆದರಿ ಬೆವೆತುಹೋದ...

* *

ಈಗ ಮಾದೇಸನ ಹಳೆಯ ಅಂಗಡಿ ಮಾಲಕ್ಷ್ಮಿ ಬೋಂಡಾ ಅಂಗಡಿಯಾಗಿದೆ. ಹಿಟ್ಟು ಹದಮಾಡಿ ಕೊಟ್ಟರೆ ಮಾದೇವ ಬಾಣಲಿಯ ಮುಂದೆ ಕೂತು ಕರಿಯುತ್ತಾನೆ. ಗಲ್ಲದ ಮೇಲೆ ಮಾಲಕ್ಷ್ಮಿ ಕೂರುತ್ತಾಳೆ. ಬ್ಯಾಂಕಿನವರೊಂದಿಗೆ ಒಂದು ಬಾರಿಯ ಒಪ್ಪಂದ ಮಾಡಿಕೊಂಡು ಗಂಡಹೆಂಡಿರಿಬ್ಬರೂ ದುಡಿದು ನಿಧಾನವಾಗಿ ಸಾಲವನ್ನು ತೀರಿಸುತ್ತಿದ್ದಾರೆ.

***

ಸಾಹಿತ್ಯ ದಾಸೋಹ – 231

ಅಧ್ಯಕ್ಷೀಯ ಅನಿಸಿಕೆಗಳು



– ಜಿ.ವಿ. ನಿರ್ಮಲ

ಇಂದಿನ ಸಾಹಿತ್ಯ ದಾಸೋಹ ೨೩೧ನೆಯದು ಹಾಗೂ ರಾಜ್ಯೋತ್ಸವ ತಿಂಗಳಿನದೆಂದು ವಿಶೇಷವಾಗಿರುವುದಷ್ಟೇ ಅಲ್ಲದೆ ಮಳೆಯಿಂದ ತಂಪಾಗಿರುವ ಊರಿಗೆ 'ತುಂತುರು–ಪನ್ನೀರದಾನಿಯ' ಸಿಂಚನದಿಂದ ಮತ್ತಷ್ಟು ತಂಪನ್ನು ನೀಡಿ ದಾಸೋಹಿಗಳ ಸಂತಸವನ್ನು ನೂರ್ಮಡಿ ಹೆಚ್ಚಿಸಿದೆ ಹಾಗೂ ಈ ದಾಸೋಹ ವಿಶಿಷ್ಟವಾದದ್ದೆಂದು ಎಲ್ಲ ಕೇಳುಗರಿಗೂ ಸ್ಪಷ್ಟವಾಗಿದೆ. ರಾಜ್ಯೋತ್ಸವದ ತಿಂಗಳಿನಲ್ಲಿ ಜರಗುವ ದಾಸೋಹ ನನ್ನ ಅಧ್ಯಕ್ಷತೆಯಲ್ಲಿ ಜರಗುತ್ತಿರುವುದು ನನ್ನ ಸೌಭಾಗ್ಯವೇ ಸರಿ. ಇಂದಿನ ದಾಸೋಹಕ್ಕೆ ನನ್ನನ್ನು ಅಧ್ಯಕ್ಷಳನ್ನಾಗಿ ಆಯ್ಕೆ ಮಾಡಿರುವುದಕ್ಕೆ ಶ್ರೀ ಮಹಾಬಲರವರಿಗೂ, ಸಮನ್ವಯ ಸಮಿತಿ ಕನ್ನಡವೇ ಸತ್ಯ ಸಂಚಾಲಕ ಸಮಿತಿಯ ಸದಸ್ಯರಿಗೂ ಹಾಗೂ ಎಲ್ಲ ಸಹೃದಯ ದಾಸೋಹಿಗಳಿಗೂ ನನ್ನ ತುಂಬು ಹೃದಯದ ವಂದನೆಗಳು.

ಇದುವರೆಗೂ ನಾನು ಈ ದಾಸೋಹಕ್ಕೆ ಸಂಬಂಧಿಸಿದಂತೆ ೨೨ ಪ್ರಸ್ತುತಿಗಳನ್ನು ಕೇಳಿದ್ದೇನೆ; ಹಾಗೂ ೨೪ ಲೇಖನಗಳನ್ನು ಪೂರ್ವಭಾವಿಯಾಗಿ ಓದಿದ್ದೇನೆ. ಈ ಅಧ್ಯಕ್ಷ ಪದವಿ ನನ್ನ ಪಾಲಿಗೆ ಒಂದು ತಪಸ್ಸಿಗೆ ಸಮಾನವೆಂದೇ ತೋರುತ್ತಿದೆ. ಎಲ್ಲ ದಾಸೋಹಿಗಳ ಪ್ರಸ್ತುತಿಗಳನ್ನು ಓದಿ, ಅವುಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಕೆಲವೇ ಕೆಲವು ಮಾತುಗಳಲ್ಲಿ ನಿರೂಪಿಸುವುದು ಸುಲಭದ ಕೆಲಸವಲ್ಲ. ಕೆಲವು ಮಹನೀಯರಿಗೆ ಇದು ನೀರು ಕುಡಿದಂತೆಯೇ ಇರಬಹುದು. ಇದು ನನ್ನ ಅನುಭವ.

ಈ ರಾಜ್ಯೋತ್ಸವದ ಸಂದರ್ಭದಲ್ಲಿ ನಾವು, ನೀವೆಲ್ಲಾ ಹೀಗೆ ಆರಾಮವಾಗಿ ಮನೆಗಳಿಂದಲೇ ಭಾಗವಹಿಸಿ, ಮುಂಚಿತವಾಗಿ ಲೇಖನಗಳನ್ನು ರವಾನಿಸಲು ಸಾಧ್ಯವಾಗಿರುವುದಕ್ಕೆ ಪ್ರಮುಖವಾಗಿ ಓರ್ವ ಮಹನೀಯರೇ ಕಾರಣ. ಅವರಿಗೆ ನಾವು ನಮ್ಮ ಕೃತಜ್ಞತೆಗಳನ್ನು ಸಲ್ಲಿಸಲೇಬೇಕು. ಅವರೇ ಮೊತ್ತಮೊದಲು ಧ್ವನ್ಯಾತ್ಮಕ ಕನ್ನಡ ಕೀಲಿಮಣೆಯನ್ನು ರೂಪಿಸಿ, ಕನ್ನಡ ಲಿಪಿಯನ್ನು ಕಂಪ್ಯೂಟರಿನಲ್ಲಿ ಮೂಡಿಸಿದ ನಾಡೋಜ ಕೆ.ಪಿ.ರಾವ್ ಅವರು. ಅವರ ಪೂರ್ತಿ ಹೆಸರು ಕಿನ್ನಿಕಂಬಳ ಪದ್ಮನಾಭರಾವ್. ಭಾರತೀಯ ಭಾಷೆಯ ಕಂಪ್ಯೂಟಿಂಗ್ ಪಿತಾಮಹರೆಂದೇ ಪ್ರಸಿದ್ಧರಾಗಿರುವ ಇವರು ೧೯೪೦ರ ಫೆಬ್ರವರಿ ೨ರಂದು ಮಂಗಳೂರು ಬಳಿಯ ಕಿನ್ನಿಕಂಬಳದಲ್ಲಿ ಜನಿಸಿದವರು. ಕಂಪ್ಯೂಟರಿನಲ್ಲಿದ್ದ ಇಂಗ್ಲೀಷ್ ಕೀಲಿಮಣೆಗಳ ಕೀಲಿಗಳನ್ನೇ ಅಳವಡಿಸಿ, ಭಾರತೀಯ ಭಾಷೆಗಳನ್ನು ಕಂಪ್ಯೂಟರಿನಲ್ಲಿ ಮೂಡಿಸಿದವರು. ಕನ್ನಡಕ್ಕಾಗಿ ಸೇಡಿಯಾಪು ತಂತ್ರಾಂಶವನ್ನು ತಯಾರಿಸಿದವರು. ತಮ್ಮ 84ನೆಯ ವಯಸ್ಸಿನಲ್ಲಿಯೂ ತಮ್ಮನ್ನು ಅನೇಕ ಕೆಲಸಗಳಲ್ಲಿ ತೊಡಗಿಸಿಕೊಂಡು, ಹಲವರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಇವರ ವಿದ್ಯಾಭ್ಯಾಸ ಹಾಗೂ ಇವರು ಕನ್ನಡ ಭಾಷೆಗೆ ಸಲ್ಲಿಸಿರುವ ಅನುಪಮ ಸೇವೆ ಹಾಗೂ ಸೇವೆ ಸಲ್ಲಿಸಿರುವ ಸಂಸ್ಥೆಗಳ ಬಗ್ಗೆ ಬಹಳಷ್ಟು ಹೇಳವುದಿದ್ದರೂ ಈಗ ಸಮಯವಿಲ್ಲ.

ಇವರಿಗೆ –

~ ಕನ್ನಡ ಕೀಲಿಮಣೆ ವಿನ್ಯಾಸಕ್ಕೆ 'ಕರ್ನಾಟಕ ಸರಕಾರದ ಅಧಿಕೃತ ಕೀಲಿಮಣೆ ವಿನ್ಯಾಸ'ವೆಂಬ ಮಾನ್ಯತೆ.
~ ತುಳು ಅಕಾಡೆಮಿ ಸೇರಿದಂತೆ ಹಲವು ಸಂಘಸಂಸ್ಥೆಗಳಿಂದ ಗೌರವ ಸಮರ್ಪಣೆ.
~ ಆಳ್ವಾಸ್ ನುಡಿಸಿರಿ ೨೦೦೯ರಲ್ಲಿ ಸನ್ಮಾನ.
~ ೨೦೧೩ ರಲ್ಲಿ ವಿಶ್ವಕರ್ಮ ಪ್ರಶಸ್ತಿ.
~ ೨೦೧೩ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಪ್ರಶಸ್ತಿ.
~ ೨೦೧೩ ರ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನ ಉದಯಭಾನು ಕಲಾಸಂಘದಿಂದ ಪರಿಚಯಾತ್ಮಕ ಕೃತಿ "ಕಂಪ್ಯೂಟರ್ ಕನ್ನಡ ಕೆ. ಪಿ. ರಾವ್" ಪ್ರಕಟಣೆ
~ ೨೦೧೩ನೆಯ ಸಾಲಿನ ರಾಜ್ಯೋತ್ಸವ ಪ್ರಶಸ್ತಿ
~ ೨೦೨೧ ರಲ್ಲಿ 'ಕಾರಂತ ಬಾಲವನ ಪ್ರಶಸ್ತಿ – ಮುಂತಾದುವು ಸಂದಿರುವುದು ಸಂತೋಷದ ವಿಷಯ.

ಭಾರತೀಯರೆಲ್ಲರೂ ನಮ್ಮದೇ ಭಾಷೆಯನ್ನು ಕಂಪ್ಯೂಟರಿನಲ್ಲಿ ಮೂಡಿಸಬಲ್ಲೆವು ಎಂದು ಬೀಗುವುದಕ್ಕೆ ಕಾರಣರಾದ ನಾಡೋಜ ಕೆ.ಪಿ ರಾವ್ ಅವರಿಗೆ ಕನ್ನಡ ರಾಜ್ಯೋತ್ಸವದಂದು ನಮ್ಮ ಕೃತಜ್ಞತೆಗಳನ್ನು ಅರ್ಪಿಸೋಣ.

ಮುಂದೆ ಕನ್ನಡದ ಹಲವು ತಂತ್ರಾಂಶಗಳು ಬಳಕೆಗೆ ಬಂದವು. ಇವುಗಳೆಂದರೆ ಶ್ರೀಲಿಪಿ, ಆಕೃತಿ, ಶಬ್ದರತ್ನ, ವಿನಕೀ ಮುಂತಾದವು. ಈ ತಂತ್ರಾಂಶಗಳನ್ನು ಅಭಿವೃದ್ಧಿಸಿದ ಹಲವಾರು ವೃತ್ತಪತ್ರಿಕೆಗಳು ಇವುಗಳಿಂದ ಲಾಭ ಗಳಿಸಿದವು. ಕನ್ನಡ ಗಣಕ ಪರಿಷತ್ತು ಅಭಿವೃದ್ಧಿ ಪಡಿಸಿದ 'ನುಡಿ' ತಂತ್ರಾಂಶವನ್ನು ಕರ್ನಾಟಕ ಸರ್ಕಾರ ಶಿಷ್ಟ ತಂತ್ರಾಂಶವೆಂದು ಗುರುತಿಸಿ, ಅದನ್ನು ಉಚಿತವಾಗಿ ಎಲ್ಲರಿಗೂ ತಲುಪಿಸಿತು.

ಈ ಕ್ಷೇತ್ರಕ್ಕೆ ಶೇಷಾದ್ರಿ ವಾಸುರವರ ಕೊಡುಗೆಯೂ ಮಹತ್ವದ್ದೇ ಆಗಿದೆ. 'ಬರಹ' ಮತ್ತು ಅದನ್ನು ಬೆಳಕಿಗೆ ತಂದ ಶೇಷಾದ್ರಿ ವಾಸುರವರು ಕಂಪ್ಯೂಟರಿನಲ್ಲಿ ಕನ್ನಡ ಬಳಸುವವರಿಗೆ ಚಿರಪರಿಚಿತರು. ಅವರು ಹಲವಾರು ಭಾಷೆಗಳನ್ನು ಕಂಪ್ಯೂಟರಿನಲ್ಲಿ ಮೂಡಿಸಿ ಜಯಭೇರಿ ಬಾರಿಸಿದ್ದಾರೆ. ಮೊದಲಿಗೆ ಶೇಷಾದ್ರಿಯವರು ಬರಹ ತಂತ್ರಾಂಶವು ಎಲ್ಲರಿಗೂ ಉಚಿತವಾಗಿ ದೊರೆಯುವಂತೆ ಮುಕ್ತವಾಗಿರಿಸಿದ್ದರು. ಇವರು ಅಮೆರಿಕದ ನ್ಯೂಜೆರ್ಸಿಯಲ್ಲಿದ್ದು ತಮ್ಮ ಉದ್ಯೋಗದ ನಡುವೆಯೇ ಕನ್ನಡ ಕೆಲಸಗಳ ಬಗ್ಗೆ ಶ್ರದ್ಧೆ ತೋರಿದವರು.

ಜಿ.ವಿ.ನಿರ್ಮಲ

ಮೈಸೂರು ವಿಶ್ವವಿದ್ಯಾಲಯದ ಭೌತವಿಜ್ಞಾನ ಎಂ.ಎಸ್‌ಸಿ. ಪದವೀಧರೆ. ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಯ ಸಹಾಯಕ ನಿರ್ದೇಶಕಿ ಹುದ್ದೆಯಿಂದ ನಿವೃತ್ತಿ.

ಇವರು ರಚಿಸಿರುವ ಕೃತಿಗಳು: ಮಂಜುಬೆಟ್ಟದ ಮಡಿಲಲ್ಲಿ, ಮನ ತಣಿಸಿದ ಮಧ್ಯಪ್ರದೇಶ (ಪ್ರವಾಸ ಕಥನಗಳು), ಅಟ್ಟ-ಹಾಸ, ಅಂತಿಂಥ ಹೆಣ್ಣಲ್ಲ (ಹಾಸ್ಯ ಬರೆಹಗಳು,) ದನಿ-ಹನಿ (ಕವನ ಸಂಕಲನ), ಹರಿವು-ಅರಿವು (ಪ್ರಬಂಧ ಸಂಕಲನ), ಮಾಹಿತಿ ಸಂಪತ್ತು ಡಿಜಿಟಲ್ ಜಗತ್ತು (ಕರ್ನಾಟಕ ವಿಜ್ಞಾನ ಪರಿಷತ್ತಿನ ಪ್ರಕಟಣೆ).

ಸಹಲೇಖಕಿ ಎಸ್.ಕ್ಷಮಾರೊಂದಿಗೆ ರಚಿಸಿರುವ ಕಂಪ್ಯೂಟರ್ ಕಲಿಕೆ ಪುಸ್ತಕಗಳು: ಅದ್ಭುತ ಯಂತ್ರ ಗಣಕ, ಮಾನವ ಮಿತ್ರ ಗಣಕ, ಕ್ರಾಂತಿಕಾರಿ ಯಂತ್ರ ಗಣಕ, ಗಣಕಲೋಕದಲ್ಲಿ ಒಂದು ಪಯಣ (ಈ ಎಲ್ಲವೂ ಕನ್ನಡ ಗಣಕ ಪರಿಷತ್ತಿನ ಪ್ರಕಟಣೆ).

ಜೆ.ಡಿ ಬರ್ನಾಲ್‌ರ Science in Historyಯ ಎರಡನೆಯ ಸಂಪುಟದ ಅನುವಾದಿತ ಕೃತಿ- 'ಇತಿಹಾಸದಲ್ಲಿ ವಿಜ್ಞಾನ' (ಕುವೆಂಪು ಭಾಷಾ ಭಾರತಿ ಪ್ರಕಟಣೆ)

'ವಿಜ್ಞಾನ ಸಿರಿ' ಇಪ್ಪತ್ತೈದು ಲೇಖಕಿಯರ ವಿಜ್ಞಾನ ಲೇಖನಗಳ ಸಂಕಲನ -ಸಹ ಸಂಪಾದಕಿ ಗಾಯತ್ರಿ ಮೂರ್ತಿ (ಕರ್ನಾಟಕ ಲೇಖಕಿಯರ ಸಂಘದ ಪ್ರಕಟಣೆ)

'ಸ್ನೇಹ ಗುಚ್ಛ'- ಹಾಸ್ಯ ಲೇಖಕಿಯರ ಬರಹಗಳ ಸಂಕಲನ (ಸಂಪಾದಕಿ ಹಾಗೂ ಲೇಖಕಿ)

ಇತ್ತೀಚಿನ ಪ್ರಕಟಣೆ: ವಿಜ್ಞಾನ ಲೋಕದ ಧ್ರುವತಾರೆಗಳು- ಕರುನಾಡ ಕಣ್ಮಣಿಗಳು, ಕರ್ನಾಟಕದ ವಿಜ್ಞಾನಿಗಳ ಪರಿಚಯ - ರಚನೆ ಜಿ.ವಿ.ನಿರ್ಮಲ ಮತ್ತು ಡಾ. ಎಸ್.ಸುಧಾ

ಇವರ ವಿಜ್ಞಾನ ಮತ್ತು ಪ್ರವಾಸ ಲೇಖನಗಳು ವಿಜ್ಞಾನ ಲೋಕ, ಕಸ್ತೂರಿ, ತರಂಗ, ಅಪರಂಜಿ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ವಿಜ್ಞಾನ ವಿಷಯದ ನಾಟಕಗಳು ಮತ್ತು ಭಾಷಣಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ.

ಹಾಸ್ಯ ಬರಹಗಳ 'ಅಟ್ಟ-ಹಾಸ' ಕೃತಿಗೆ ಅತ್ತಿಮಬ್ಬೆ ಪ್ರತಿಷ್ಠಾನದ ವಿಶೇಷ ಬಹುಮಾನ, 'ಆಕ್ಷೀ...' ಪ್ರಬಂಧಕ್ಕೆ ಸಂಕ್ರಮಣ ಪತ್ರಿಕೆಯ ಬಹುಮಾನ. ಕರ್ನಾಟಕ ಲೇಖಕಿಯರ ಸಂಘದ 'ವಿಶಿಷ್ಟ ಲೇಖಕಿ' ಸನ್ಮಾನ, ಮೈಸೂರಿನ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದವರು ವಿಜ್ಞಾನ ಸಾಹಿತ್ಯಕ್ಕಾಗಿ ನೀಡುವ ಡಾ.ಡಿ.ಎಲ್. ವಿಜಯಕುಮಾರಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಈಗ ಕನ್ನಡದ ಎಲ್ಲಾ ತಂತ್ರಾಂಶಗಳೂ ಯೂನಿಕೋಡ್ ಪದ್ಧತಿಯನ್ನು ಅನುಸರಿಸಿ ಉತ್ತಮ ಮಟ್ಟದಲ್ಲಿವೆ. ಕೇವಲ ಒಬ್ಬಿಬ್ಬರು ಮಾತ್ರವಲ್ಲದೆ ಹಲವಾರು ಕನ್ನಡದ ಕಟ್ಟಾಳುಗಳು ಕಂಪ್ಯೂಟರಿನೊಂದಿಗೆ ಹೊಂದಾಣಿಕೆ ಮಾಡಿಕೊಂಡು ವಿವಿಧ ಬಗೆಯ ತಂತ್ರಾಂಶಗಳನ್ನು ರೂಪಿಸಿದ್ದಾರೆ. ಇಂತಹ ಹಲವಾರು ಆನ್ವಯಿಕ ತಂತ್ರಾಂಶಗಳು ದೊರೆಯುತ್ತಿರುವುದರಿಂದ ಮುದ್ರಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿವೆ. ಬ್ಯಾಂಕಿಂಗ್, ಆನ್ ಲೈನ್, ಇ ಮೇಲ್ ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲಿಯೂ ಕನ್ನಡ ಕಸ್ತೂರಿಯ ಪರಿಮಳ ಪಸರಿಸಿದೆ. ಇಂತಹ ಬೆಳವಣಿಗೆಗೆ ಕಾರಣರಾದವರಿಗೆಲ್ಲಾ ನಮ್ಮ ಕೃತಜ್ಞತೆಗಳನ್ನು ಅರ್ಪಿಸೋಣ.

ಹಲವಾರು ನಿಘಂಟುಗಳು– ವಿಶೇಷವಾಗಿ ಮೈಸೂರು ವಿಶ್ವವಿದ್ಯಾಲಯದ ನಾಲ್ಕು ಸಂಪುಟಗಳ ನಿಘಂಟು, ಅಲರ್ ನಿಘಂಟು ಇತ್ಯಾದಿಗಳು –ಡಿಜಟಲೀಕರಣಗೊಂಡು ಬೆರಳ ತುದಿಯಲ್ಲಿ ಲಭ್ಯವಿವೆ. ಧ್ವನಿಯನ್ನು ಪಠ್ಯವಾಗಿ ಬದಲಿಸುವ ತಂತ್ರಾಂಶಗಳು, ಒಂದು ಭಾಷೆಯಲ್ಲಿ ಕೀಲಿಸಿದ ಪದಗಳು ಬೇರೆ ಭಾಷೆಗೆ ಪರಿವರ್ತನೆಯಾಗುವುದು, ಇಂಗ್ಲಿಷ್ ನಲ್ಲಿ ಬೆರಳಚ್ಚಿಸಿ ಕನ್ನಡ ಅಥವಾ ಇತರ ಭಾರತೀಯ ಭಾಷೆಗೆ ಮಾರ್ಪಡಿಸುವುದು, ಸೂಕ್ತ ತಂತ್ರಾಂಶಗಳನ್ನು ಬಳಿಸಿದಾಗ ಆಸ್ಕಿಯಲ್ಲಿ ಬೆರಳಚ್ಚಿಸಿದ ಪಠ್ಯವು ಕೆಲವೇ ನಿಮಿಷಗಳಲ್ಲಿ ಯೂನಿಕೋಡ್ ಗೆ ಬದಲಾಗುವುದು ಹಾಗೂ ಯೂನಿಕೋಡ್ ನಿಂದ ಆಸ್ಕಿಗೆ (ASCII– American standard code for information interchange) ಬದಲಾಗುವುದು ಚಮತ್ಕಾರವೇ ಎಂದೆನಿಸುತ್ತದೆ. ಹೀಗೆ ಹಲವಾರು ತಂತ್ರಾಂಶಗಳನ್ನು ಹೆಸರಿಸಬಹುದು. ಇದೆಲ್ಲವನ್ನೂ ಲೀಲಾಜಾಲವಾಗಿ ಬಳಸುತ್ತಿರುವವರೆಲ್ಲಾ ಈ ತಂತ್ರಾಂಶಗಳನ್ನು ರೂಪಿಸಿದವರಿಗೆ ರಾಜ್ಯೋತ್ಸವದಂದು ನಮ್ಮ ಕೃತಜ್ಞತೆಗಳನ್ನು ತಿಳಿಸೋಣ.

ಇದೀಗ ನನ್ನ ಗಮನವನ್ನು ಇಂದಿನ ಪ್ರಸ್ತುತಿಗಳ ಕಡೆ ಹರಿಸುತ್ತೇನೆ.

೦೧. ಗಣಪತಿ ಹೆಗಡೆ – 'ವಾರ್ಧಕ ಷಟ್ಪದಿ'

ಕಾರ್ಯಕ್ರಮದ ಪ್ರಾರಂಭದಲ್ಲಿ ಹೆಸರಿಗೆ ಸಾರ್ಥಕವಾಗಿ ಮೊದಲ ಪ್ರಸ್ತುತಿಯೇ ಗಣಪತಿ ಹೆಗಡೆಯವರದ್ದು. ಮೊದಲು ವಿಘ್ನವಿನಾಶಕ ಗಣಪತಿಗೆ ಹಾಗೂ ಹೆಗಡೆಯವರಿಗೆ ನನ್ನ ವಂದನೆಗಳು. ಅವರು ಇಂದು ವಾರ್ಧಕ ಷಟ್ಪದಿಯ ಲಕ್ಷಣಗಳನ್ನು ತಿಳಿಸುವ 'ವಾರ್ಧಕ ಷಟ್ಪದಿ' ಲೇಖನವನ್ನು ಪ್ರಸ್ತುತಿಪಡಿಸಿದ್ದಾರೆ. ವಿಷಯ ಗಹನವಾದದ್ದೇ (ಅದೂ ನನ್ನಂತಹವಳಿಗೆ). ಷಟ್ಪದಿಗಳೆಂದರೇನು, ಯಾವ ಷಟ್ಪದಿಗಳು ಪ್ರಚಲಿತವಾಗಿವೆ ಎಂದು ಹೇಳುತ್ತಾ, ಮುದ್ದಣನ 'ಶ್ರೀರಾಮ ಪಟ್ಟಾಭಿಷೇಕ, ಲಕ್ಷ್ಮೀಶನ ಜೈಮಿನಿ ಭಾರತ ಹಾಗೂ ರಾಘವಾಂಕನ ಹರಿಶ್ಚಂದ್ರ ಕಾವ್ಯಗಳು ವಾರ್ಧಕ ಷಟ್ಪದಿಯಲ್ಲಿದ್ದು. ಗಮಕಿಗಳು ಆಯ್ಕೆ ಮಾಡಿಕೊಳ್ಳುವ ಜನಪ್ರಿಯ ಕಾವ್ಯಗಳು ಎಂದು ಹೇಳಿದ್ದಾರೆ. ಷಟ್ಪದಿ ಎಂದರೆ ಆರು ಸಾಲುಗಳುಳ್ಳ ಪದ್ಯಗಳು ಎಂದು ಕನ್ನಡ ಸಾಹಿತ್ಯಾಸಕ್ತಿಗಳಿಗೆ ತಿಳಿದಿರುತ್ತದೆ. ಉದ್ದಾಮ ಪಂಡಿತರಾಗಿರುವ ಗಣಪತಿಯವರು ಆರು ಸಾಲುಗಳ ವೈಶಿಷ್ಟ್ಯಗಳನ್ನು ಉದಾಹರಣೆಯೊಂದಿಗೆ ವಿಸ್ತಾರವಾಗಿ, ಸರಳವಾಗಿ ತಿಳಿಯಪಡಿಸಿದ್ದಾರೆ. ನನಗೆ ನನ್ನ ಹೈಸ್ಕೂಲಿನಲ್ಲಿ ಕನ್ನಡ ವ್ಯಾಕರಣ ತರಗತಿಯಲ್ಲಿ ಅಂದು ನಜಭಜಜಂಜರ ಚಂಪಕಮಾಲಾವೃತ್ತ ಎಂದು ಗಣಿತದ ಮೂಲಕ ಗಮನಿಸುತ್ತಿದ್ದ ದಿನಗಳು ನೆನಪಾದವು. ನಮ್ಮ ಕನ್ನಡದ ಅಧ್ಯಾಪಕಿಯರೂ ಬಹಳ ಆಸಕ್ತಿಯಿಂದ ಬೋಧಿಸುತ್ತಿದ್ದರು. ಇಂತಹ ಗಂಭೀರವಾದ ವಿಷಯವನ್ನು ಓದುಗರ ಮುಂದೆ ಇಡುವುದರಲ್ಲಿ ಆಸಕ್ತರಾಗಿರುವ ಶ್ರೀಯುತರಿಗೆ ನನ್ನ ಅಭಿನಂದನೆಗಳು.

೦೨. ಸ್ನೇಹ ಶಶಿಧರ್ – 'ತಲೆನೋವು'

ಇಂದು ಸ್ನೇಹ ಶಶಿಧರ್‌ರವರಿಗೆ 'ತಲೆನೋವು' ಬಂದಿಲ್ಲ. ಏಕೆಂದರೆ ಅವರು ಪ್ರಸ್ತುತ ಪಡಿಸಿದ 'ತಲೆನೋವು' ಕತೆಯ ನಾಯಕಿ ಬಿಂದುವಿನ ತಲೆನೋವೂ ಮಾಯವಾಗಿದೆ! ಹೌದು; ನಾಯಕಿ ಬಿಂದು ಸರ್ಕಾರಿ ಕಛೇರಿಯಲ್ಲಿ ದೊಡ್ಡ ಹುದ್ದೆಯಲ್ಲಿರುವ, ಮದುವೆಯ ಸುಖವನ್ನು ಅನುಭವಿಸುತ್ತಿರುವ ಹೃದಯವಂತಿಕೆಯುಳ್ಳ ಮಹಿಳೆ. ಆದರೆ ಕಥಾನಾಯಕಿ ಬಿಂದುವಿಗೆ ಮದುವೆಯಾದ ದಿನದಿಂದಲೂ ಅಂದರೆ ಮೂರು ತಿಂಗಳಿನಿಂದ ತಲೆನೋವು ಕಾಡುತ್ತಿರುತ್ತದೆ. ಕಛೇರಿಯ ಸಿಬ್ಬಂದಿ ಯವರಿಗೂ ಬಿಂದುವಿನ ತಲೆನೋವು ಹಾಸ್ಯಾಸ್ಪದವಾಗಿ ತೋರುತ್ತದೆ. ವೈದ್ಯರೆಲ್ಲಾ ತಲೆನೋವಿನ ಕಾರಣ ತಿಳಿಯದೆ ಕೈಚೆಲ್ಲಿದಾಗ ಹೊನ್ನಾವರದ ಜ್ಯೋತಿಷಿಯೊಬ್ಬರು ಯಾವುದೇ ಹೆಚ್ಚಿನ ಪರೀಕ್ಷೆ ಮಾಡದೆ ನಿಮಿಷಾರ್ಧದಲ್ಲಿ ತಲೆನೋವಿನ ಕಾರಣವನ್ನು ಕಂಡುಹಿಡಿದದ್ದು ಅಚ್ಚರಿ ಮೂಡಿಸುತ್ತದೆ. ಮದುವೆಯಲ್ಲಿ ಆಕೆಗೆ ಅವರ ಅತ್ತೆ ಮನೆಯವರ ಉಡುಗೊರೆಯಾದ

ವಜ್ರದ ಮೂಗುತಿಯ ಅತಿ ಪ್ರಖರವಾದ ಬೆಳಕೇ ತಲೆನೋವಿಗೆ ಕಾರಣವೆಂದು ತಿಳಿಯುತ್ತದೆ. ಅದನ್ನು ಕೇವಲ ಒಂದು ರಾತ್ರಿ ತೆಗೆದಿರಿಸುತ್ತಿದ್ದಂತೆ ತಲೆನೋವು ದೂರವಾಗಿ, ಸಾಂತ್ವನ ದೊರೆಯುತ್ತದೆ.

ಆದರೆ ನನ್ನ ಪ್ರಶ್ನೆ ಹೀಗಿದೆ. ಯಾವ ದುರುದ್ದೇಶವೂ ಇಲ್ಲದೆ ಅತ್ಯಂತ ಪ್ರೀತಿಯಿಂದ ಸೊಸೆಗೆ ವಜ್ರದ ಮೂಗುತಿ ಕೊಟ್ಟಿದ್ದ ಅತ್ತೆಯ ಮೇಲೆ ಅಪವಾದ ಹೊರಿಸಿದ್ದು ಸರಿಯೇ? ಮಲತಾಯಿ, ಅತ್ತೆ ಇಂತಹವರೂ ಒಳ್ಳೆಯವರಿರುವುದಿಲ್ಲವೇ? ಎಂ.ಎಸ್.ಎನ್ ರವರು ಗುಹಾಂತರದ ಕಾರ್ಯಕ್ರಮದಲ್ಲಿ ಹೇಳಿದಂತೆ ತಪ್ಪು ಯಾರದು ಎಂದು ಮತ್ತಷ್ಟು ಯೋಚಿಸುವುದು ಸೂಕ್ತ. ಬಹುಶ ಅತ್ತೆ-ಸೊಸೆಯ ಬಾಂಧವ್ಯದ ಬಗ್ಗೆ ಜನಜನಿತವಾಗಿರುವ ವೈಷಮ್ಯದ ಬಗ್ಗೆ ಇದೊಂದು ಹಾಸ್ಯದ ಕಿಡಿ ಎಂದುಕೊಳ್ಳೋಣವೇ? ಕತೆಯ ಅಂತ್ಯ ಸ್ವಲ್ಪ ವಿಭಿನ್ನವಾಗಿರಬಹುದಿತ್ತೇನೋ? ಇದು ನನ್ನ ಅಭಿಪ್ರಾಯವಷ್ಟೇ. ಓದಿಸಿಕೊಂಡು ಹೋಗುತ್ತಾ, ಕುತೂಹಲವನ್ನು ಕಾಯ್ದಿರಿಸಿಕೊಳ್ಳುವ ಕತೆಯನ್ನು ನೀಡಿರುವ ಸ್ನೇಹಾರವರಿಗೆ ಅಭಿನಂದನೆಗಳು.

೦೩. ಸಿಂಧು ಹರಿತಸ್ – ಕರುನಾಡ ರಾಮಾಯಣ

ಸಿಂಧು ಹರಿತಸ್‌ರವರು ಇಂದು ರಾಮಾಯಣದ ಕಡೆ ವಾಲಿ 'ಕರುನಾಡ ರಾಮಾಯಣ' ಎನ್ನುವ ಲೇಖನವನ್ನು ಓದಿದ್ದಾರೆ. ರಾಮಾಯಣದಲ್ಲಿ ಕರುನಾಡಿನ ಪಾತ್ರವೆಂದು ಪ್ರಾರಂಭವಾಗುವ ಲೇಖನದಲ್ಲಿ ಹಂಪಿಯ ಬಳಿಯ ಪಂಪಾ ಸರೋವರದ ವರ್ಣನೆ ಇರುವುದಾಗಿ ಹೇಳುತ್ತಾರೆ. ಮುಂದೆ ಮತಂಗ ಮುನಿಗಳ ಆಶ್ರಮ, ಶಬರಿಯ ಆತಿಥ್ಯದ ಭಾಗವನ್ನೂ ಕಾಣಬಹುದು. ಶಬರಿಯ ಸೂಚನೆಯಂತೆ ಕಿಷ್ಕಿಂಧೆಯನ್ನು ತಲುಪಿ, ಅಲ್ಲಿ ಸುಗ್ರೀವ ಮತ್ತು ಹನುಮಂತರನ್ನು ಭೇಟಿಯಾಗುವವರೆಗೆ ಕರ್ನಾಟಕದಲ್ಲಿ ನಡೆಯುವ ರಾಮಾಯಣದ ಭಾಗವೆನ್ನುವುದು ಖಚಿತ. ಮುಂದೆ ಸುಗ್ರೀವ ಮತ್ತು ಹನುಮಂತರು ರಾಮ-ಲಕ್ಷ್ಮಣರಿಗೆ ಸೀತೆಯನ್ನು ಹುಡುಕುವ ಕಾರ್ಯದಲ್ಲಿ ಮತ್ತು ರಾಮನ ಪಟ್ಟಾಭಿಷೇಕದವರೆಗೆ ಸಹಾಯ ಮಾಡಿದ್ದು ತಿಳಿದಿರುವ ವಿಷಯ. ಸಿಂಧುರವರು ರಾಮಾಯಣದಲ್ಲಿ ಕರುನಾಡಿನ ಪಾತ್ರವನ್ನು ಅಷ್ಟಕ್ಕೇ ನಿಲ್ಲಿಸದೆ, ಇಂದಿನ ಅಯೋಧ್ಯಾ ಮಂದಿರದಲ್ಲಿ ಸ್ಥಾಪನೆಯಾಗಿರುವ ರಾಮಲಲ್ಲಾನ ಮೂರ್ತಿಯನ್ನು ಕಡೆದವರೂ ಕರ್ನಾಟಕದ ಅರುಣ್ ಯೋಗಿರಾಜ್‌ರ ಶಿಲ್ಪಿಗಳೇ ಎಂದು ತ್ರೇತಾಯುಗದ ಬಾಂಧವ್ಯವನ್ನು ಕಲಿಯುಗದವರೆಗೂ ವಿಸ್ತರಿಸಿದ್ದಾರೆ. ರಾಮಾಯಣವನ್ನು ಎಷ್ಟೇ ಹ್ರಸ್ವಗೊಳಿಸಿದರೂ ಅದು ರಾಮಾಯಣವೇ. ಅಂತಹ ವಿಷಯವನ್ನು ಆಯ್ಕೆ ಮಾಡಿಕೊಂಡು ರಾಮಾಯಣದ ಕತೆಯ ಮೇಲೆ ಬೆಳಕು ಚೆಲ್ಲಿರುವ ಸಿಂಧು ಹರಿಥಸ್‌ರವರಿಗೆ ಅಭಿನಂದನೆಗಳು.

೦೪. ಕಮಲಾಕ್ಷಿ ಸಿ.ಆರ್. – 'ಬೆಳಕು-ಕತ್ತಲು ಎಂಬ ಬೆರಗು'

ಕಮಲಾಕ್ಷಿಯವರು ಇಂದು ನಮ್ಮ ಮುಂದಿರಿಸಿದ ಅಪೂರ್ವ ಲೇಖನ 'ಬೆಳಕು-ಕತ್ತಲು ಎಂಬ ಬೆರಗು' ಎನ್ನುವುದಾದರೂ ಅವರು ಕತ್ತಲನ್ನು ವೈಭವೀಕರಿಸಿರುವುದು ನಮ್ಮ ತಿಳಿವಿಗೆ ದಾರಿ ದೀಪವಾಗಿದೆ. ಬಹಳಷ್ಟು ಪ್ರಕೃತಿಯ ವಿದ್ಯಮಾನಗಳಿಗೆ ಇರುಳಿನ ಕತ್ತಲು ಆಶ್ರಯ ನೀಡಿದರೂ ಕತ್ತಲನ್ನು ಒಪ್ಪಿಕೊಳ್ಳದವರು ಬಹಳ ಜನರಿದ್ದಾರೆ. ಈ ನಿಟ್ಟಿನಲ್ಲಿ ಜಗತ್ತಿನ ಕವಿಗಳು, ಕಾವ್ಯಗಳೂ ಹಿಂದೆ ಬಿದ್ದಿಲ್ಲ. 'ಕರುಣಾಳು ಬಾ ಬೆಳಕೆ' ಎನ್ನುವ ಕವನವನ್ನು ಈ ನಿಟ್ಟಿನಲ್ಲಿ ಸ್ಮರಿಸಬಹುದು. ಆದರೆ ಒಮ್ಮೊಮ್ಮೆ ಕತ್ತಲಿನಲ್ಲಿಯೇ, ನಮ್ಮ ಕಣ್ಣುಗಳನ್ನು ಮುಚ್ಚಿದ್ದಾಗಲೇ ಮಹತ್ತರವಾದ ಆಲೋಚನೆಗಳು ಒಳಗಣ್ಣಿನೆದುರು ಅನಾವರಣ ವಾಗುತ್ತವೆ. ಭೂಮಿಯ ಉತ್ತರದಲ್ಲಿ ತುತ್ತತುದಿಯ ಧ್ರುವೀಯ ವೃತ್ತದಲ್ಲಿ ಅಂದರೆ ಆರ್ಟಿಕ್ ಪ್ರದೇಶದಲ್ಲಿರುವ ಕೆಲವು ದೇಶಗಳಲ್ಲಿ ಆರು ತಿಂಗಳು ಸೂರ್ಯ ಮುಳುಗುವುದೇ ಇಲ್ಲ. ಆಗ ಜನರಿಗೆ ಕತ್ತಲಿನ ಅಗತ್ಯ ಮತ್ತು ಮೌಲ್ಯ ತಿಳಿಯುತ್ತದೆ. ಹಾಗೇ ಅವರಿರುವ ಪ್ರದೇಶದಲ್ಲಿ ಆರು ತಿಂಗಳು ಸೂರ್ಯನು ಕಾಣಿಸದೇ ಮರೆಯಾದಾಗ ಕತ್ತಲಿನ ಬದುಕೂ ಸುಖವಿರುವುದಿಲ್ಲ. ಹೀಗೆ ಕತ್ತಲು-ಬೆಳಕು ಎರಡೂ ಜನಜೀವನಕ್ಕೆ ಅಗತ್ಯವೇ. ಜಗತ್ತಿನ ಬೆಳಕನ್ನೇ ಕಂಡಿಲ್ಲದಿದ್ದರೂ ಅನೇಕ ಸಾಧನೆಗಳನ್ನು ಮಾಡಿರುವ ಮಹಾನ್ ವ್ಯಕ್ತಿಗಳೂ ಇದ್ದಾರೆ. ಈ ಲೇಖನದಲ್ಲಿ ಕಮಲಾಕ್ಷಿಯವರು ಬೆಳಕು-ಕತ್ತಲುಗಳನ್ನು ಜ್ಞಾನ-ಅಜ್ಞಾನಕ್ಕೂ ಹೋಲಿಸಿದ್ದಾರೆ. ಕವಿಗಳು ಬೆಳಕು-ಕತ್ತಲೆಗಳನ್ನು ಸುಖ-ದುಃಖಕ್ಕೂ ಹೋಲಿಸಿದ್ದಾರೆ. ಎರಡನ್ನೂ ಸ್ವೀಕರಿಸಿದರೆ ಮಾತ್ರ ನಗುನಗುತ್ತಿರುವ ಬಾಳು ದೊರೆಯುತ್ತದೆ. ಬೆಳಕು-ಕತ್ತಲೆಗಳು ಪೂರಕವಾಗಿ ಮನುಷ್ಯನ ಜೀವನಕ್ಕೆ ಅವಶ್ಯಕ ಎನ್ನುವ ಸಂದೇಶವನ್ನು ನೀಡುವ ಲೇಖನ ಅತ್ಯಂತ ಮಹತ್ವದ್ದಾಗಿದೆ. ಒಳ್ಳೆಯ ಲೇಖನವನ್ನು ನೀಡಿರುವ ಕಮಲಾಕ್ಷಿಯವರಿಗೆ ಅಭಿನಂದನೆಗಳು.

೦೫. ಅನ್ನಪೂರ್ಣ ಸುಬ್ಬರಾವ್ – 'ಸವಿ ನೆನಪು'

ರಾಜ್ಯೋತ್ಸವ ಎಂದೊಡನೆ ಸವಿನೆನಪುಗಳ ಭಂಡಾರವೇ ತೆರೆದುಕೊಳ್ಳುವುದು ಅನೇಕರ ಅನುಭವ. ಇದಕ್ಕೆ ಅನ್ನಪೂರ್ಣ ರವರ ಲೇಖನ 'ಸವಿ ನೆನಪು' ಒಂದು ಸೇರ್ಪಡೆ. ಅವರಿಗೆ ಇಂತಹ ಸವಿನೆನಪಿನ ಭಂಡಾರ ದೊರೆತದ್ದು ಮತ್ತೊಂದು ಊರಿಗೆ ಹೋದಾಗ; ಅನಿರೀಕ್ಷಿತವಾಗಿ, ಆ ರಾಜ್ಯೋತ್ಸವದ ಸಮಾರಂಭದಲ್ಲಿ ಒಂದು ಹಾಡು ಹೇಳುವ ಅವಕಾಶ ದೊರೆಯುತ್ತಿದ್ದಂತೆ ರಸಪ್ರಶ್ನೆ ಸ್ಪರ್ಧೆಗೆ ಸೇರುವ ಅವಕಾಶ ದೊರೆತು, ಪ್ರಥಮ ಬಹುಮಾನವೂ ಇವರ ಪಾಲಾಗುತ್ತದೆ. ಇವರ ಜೊತೆಗಾರ್ತಿ ಏನೂ ಉತ್ತರಿಸದಿದ್ದರೂ ಪ್ರಥಮ ಬಹುಮಾನದ ಪಾಲುದಾರಳಾಗಿದ್ದು ಅವಳಿಗೂ ಖುಷಿಯಾಯ್ತಂತೆ. ಮುಂದೆ ಸುಚೇಂದ್ರ ಪ್ರಸಾದ್‌ರಂತಹ ಉತ್ತಮ ನಟನ ಪರಿಚಯವಾಗಿ ಕನ್ನಡ ಪದಗಳ ಅಂತ್ಯಾಕ್ಷರಿ ಆಟವಾಡಿದ್ದು ಮತ್ತೊಂದು ನೆನಪು. ಒಟ್ಟಿನಲ್ಲಿ ಅವರಿಗಾದ ಸವಿನೆನಪಿನ ಸವಿಯನ್ನು ನಮ್ಮೊಂದಿಗೆ ಹಂಚಿಕೊಂಡಿರುವ ಅನ್ನಪೂರ್ಣರವರ ಸವಿ ಇಮ್ಮಡಿಸಿರುವುದರಲ್ಲಿ ಅನುಮಾನವೇ ಇಲ್ಲ. ನಮಗೆ ಸವಿ ಉಣಬಡಿಸಿದ ಅನ್ನಪೂರ್ಣೆಗೆ ಅಭಿನಂದನೆಗಳು.

೦೬. ಪೂರ್ಣಿಮ ಭಗವಾನ್ – 'ಬದುಕು' ಕಾದಂಬರಿ ಪರಿಚಯ

ಇಂದು ಪೂರ್ಣಿಮಾರವರು ಪ್ರಸ್ತುತಪಡಿಸಿದ್ದು ಡಾ.ಗೀತಾ ನಾಗಭೂಷಣರವರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಬೃಹತ್ ಕಾದಂಬರಿ 'ಬದುಕು'ವಿನ ಪರಿಚಯ. ಉತ್ತರ ಕರ್ನಾಟಕದಲ್ಲಿ ವಾಸಿಸುತ್ತಿರುವ ಒಂದೇ ಕುಟುಂಬದ ನಾಲ್ಕು ತಲೆಮಾರುಗಳ ಜೀವನದ ಚಿತ್ರಣವಿರುವ ಈ ಕಾದಂಬರಿಯಲ್ಲಿ ಡಾ.ಗೀತಾರವರು ನೈಜವಾಗಿ, ನಿರ್ಭಿಡೆಯಿಂದ, ವಿಶದವಾಗಿ ವಿವರಿಸಿದ್ದಾರೆ ಎಂದು ಹೇಳಿದ್ದಾರೆ. ಆ ಜನರ ಭಾಷೆ ಹಾಗೂ ಜೀವನವನ್ನು ಬಹಳ ಮನೋಜ್ಞವಾಗಿ ಚಿತ್ರಿಸಿರುವುದಾಗಿ ಕಾದಂಬರಿಕಾರ್ತಿಯ ನೈಪುಣ್ಯವನ್ನು ಪ್ರಶಂಸಿಸಿದ್ದಾರೆ. ನನಗೆ ತಿಳಿದಂತೆಯೂ ಡಾ.ಗೀತಾರವರು ಅದ್ಭುತ ಬರೆಹಗಾರ್ತಿ. ಅವರ ಕವನಗಳನ್ನು ಓದಿದ್ದೇನೆ. 'ಕಾಮ, ಕುಡಿತ, ಹಸಿವು ಮೂರನ್ನೂ ಬದುಕಿನ ಅವಿಭಾಜ್ಯ ಅಂಗವಾಗಿ ಮಾಡಿಕೊಂಡಿದ್ದ ವರ್ಗದ ಜನರ ಬದುಕನ್ನು, ಅವರ ದೈನಂದಿನ ಬದುಕಿನಲ್ಲಿ ಎದುರಾಗುವ ಜ್ವಲಂತ ಸಮಸ್ಯೆಗಳನ್ನು ವಿಶೇಷ ಕಾಳಜಿಯಿಂದ ತೋರಿಸಿದ್ದಾರೆ ಲೇಖಕಿ' ಎಂದು ಪೂರ್ಣಿಮಾರವರು ಹೇಳಿದ್ದಾರೆ. ಪೂರ್ಣಿಮಾರವರು ಮೆಚ್ಚಿರುವ ಮತ್ತೊಂದು ಅಂಶ ಗೀತಾರವರು ಚಿತ್ರಿಸಿರುವ 'ಪಗಡಿ ಬಜಾರ, ಚೆನ್ನಮ್ಮನ ದಂಡೆ, ಕಲಬುರ್ಗಿ ಶರಣಬಸಪ್ಪನ ತೇರು, ಸಾವಳಗಿ ಶಿವಲಿಂಗೇಶ್ವರನ ಗುಡಿ ಕಳಸಗಳ ಚಿತ್ತಾರ, ಸೂರ್ಯೋದಯ, ಸೂರ್ಯಾಸ್ತಗಳನ್ನು ಸುತ್ತಲಿನ ಪರಿಸರದ ಜೀವ ಜಗತ್ತಿಗೆ ಹೋಲಿಸಿರುವ ವೈಶಿಷ್ಟ್ಯ' ಮುಂತಾದವು. ಹೀಗೆ ಹಲವು ವೈಶಿಷ್ಟ್ಯಗಳಿಂದ ಕೂಡಿರುವ ಕಾದಂಬರಿ ಬಹುಶಃ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಓದಿದಾಗ ಆಗುವ ಅನುಭವವನ್ನು ವಿಭಿನ್ನ ಪರಿಸರದಲ್ಲಿ ಜರಗುವ ಕಥೆಯ ಮೂಲಕ ಕಟ್ಟಿಕೊಟ್ಟಿರುವಂತೆ ತೋರುತ್ತದೆ. ಕಾದಂಬರಿಯನ್ನು ಓದಿದರೆ ಪೂರ್ಣ ಚಿತ್ರ ದೊರೆಯುತ್ತದೆ. ಇಂತಹ ಬೃಹತ್ ಕಾದಂಬರಿಯನ್ನು ರಸವತ್ತಾಗಿ ಪರಿಚಯಿಸಿದ ಪೂರ್ಣಿಮಾ ಭಗವಾನ್‌ರವರಿಗೆ ಅಭಿನಂದನೆಗಳು.

೦೭. ಶೀಲಾ ಅರಕಲಗೂಡು – 'ಭಾರತದ ನಾರೀಶ್ವರಿಯರು' (ಕವನ)

ಶೀಲಾರವರು ಕವನಗಳನ್ನು ಬರೆಯುವುದರಲ್ಲಿ ಎತ್ತಿದ ಕೈ. ಇದಕ್ಕೆ ಸಾಕ್ಷಿ ಈಗಾಗಲೇ ಅವರ ಕೀರ್ತಿ ಪತಾಕೆ ನಮ್ಮ ದೇಶದಲ್ಲಲ್ಲದೆ ಬೇರೆ ದೇಶಗಳಲ್ಲಿಯೂ ಮೆರೆಯುತ್ತಿದೆ. ಇಂದು ಅವರು ವಾಚಿಸಿದ 'ಭಾರತದ ನಾರೀಶ್ವರಿಯರು' ಕವನದಲ್ಲಿ ಭಾರತದ ನಾರಿಯರ ವಿಶ್ವರೂಪವನ್ನೇ ಪರಿಚಯಿಸಿದ್ದಾರೆ. ಕೃತಯುಗದ ನಾರಿಯರಿಂದ ಪ್ರಾರಂಭವಾಗಿರುವ ಕವಿತೆಯಲ್ಲಿ ಪ್ರಕೃತಿಯಲ್ಲಿ, ವಿವಿಧ ಕ್ಷೇತ್ರಗಳಲ್ಲಿ, ವಿಶೇಷವಾಗಿ ವಿಜ್ಞಾನ, ಸಾಹಿತ್ಯ ಮುಂತಾದವುಗಳಲೆಲ್ಲಾ ಮುಂಚೂಣಿಯಲ್ಲಿರುವುದಾಗಿ ಶ್ಲಾಘಿಸಿದ್ದಾರೆ. ಇತಿಹಾಸದಲ್ಲಿ ನಾವು ವೀರನಾರಿಯರನ್ನೂ ಕಾಣಬಹುದೆಂದು ಗುರುತಿಸುತ್ತಾ.

ಶಿಷ್ಟರಿಗೆ ನಾರಿಯೊಲು ದುಷ್ಟರಿಗೆ ಮಾರಿಯೊಲು
ಸಮಯಕ್ಕೆ ತಕ್ಕಂತೆ ಕಾರ್ಯವೆಸಗುವಳು।
ಮಹಿಳೆಯರ ಸನ್ಮಾನ ದೈವ ನೆಲೆಸುವ ತಾಣ
ಇದನರಿತ ಭಾರತಕೆ ವರವಾದಳು – ಎಂದು ನಾರಿಯರನ್ನು ಮನಃಪೂರ್ತಿ ಮೆಚ್ಚಿದ್ದಾರೆ.

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ।
ಯತ್ರೈತಾಸ್ತು ನ ಪೂಜಂತೇ ಸರ್ವಾಸ್ತತ್ರಾ ಫಲಾಃ ಕ್ರಿಯಾಃ' ॥
ಎಲ್ಲಿ ಸ್ತ್ರೀಯರಿಗೆ ಗೌರವ ಸನ್ಮಾನಗಳು ದೊರೆಯುತ್ತವೆಯೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. ಯಾವ ಮನೆಯಲ್ಲಿ ಸ್ತ್ರೀಯರು ಗೌರವಿಸಲ್ಪಡುವುದಿಲ್ಲವೋ ಅಲ್ಲಿ ಮಾಡುವ ಎಲ್ಲ ಯಜ್ಞ-ಪೂಜೆಗಳು ನಿಷ್ಫಲವಾಗುತ್ತವೆ!' ಎನ್ನುವ ಮನುಸ್ಮೃತಿಯನ್ನು ಇಲ್ಲಿ ಸ್ಮರಿಸಬಹುದು. ಲಯಬದ್ಧವಾದ ಉತ್ತಮ ಸಾಹಿತ್ಯದ ಕವನವನ್ನು ವಾಚಿಸಿದ್ದಕ್ಕಾಗಿ ಶೀಲಾರವರನ್ನು ಅಭಿನಂದಿಸುತ್ತೇನೆ.

೦೮. ನಾಗರತ್ನ ಚಂದ್ರಶೇಖರ್ – 'ಭುವನೇಶ್ವರಿಯ ಕನಸು'

ನಾಗರತ್ನರವರು ಕನ್ನಡ ರಾಜ್ಯೋತ್ಸವದ ವಿಷಯವನ್ನೇ ಆಯ್ಕೆ ಮಾಡಿಕೊಂಡಿರುವುದು ನವೆಂಬರ್ ತಿಂಗಳ ರಾಜ್ಯೋತ್ಸವದ ಆಕರ್ಷಣೆಯನ್ನು ಸೂಚಿಸುತ್ತದೆ. ಶೀರ್ಷಿಕೆ 'ಭುವನೇಶ್ವರಿಯ ಕನಸು'. ಕಥಾ ನಾಯಕ ಪೊನ್ನಪ್ಪ ಮಾಸ್ತರ್ ನವೆಂಬರ್ ತಿಂಗಳಿನಲ್ಲಿ ಆದರಣೀಯ ವ್ಯಕ್ತಿಯಾಗುತ್ತಾನೆ. ಅಷ್ಟಿಷ್ಟು ಮೇಲು ಸಂಪಾದನೆಗೂ ದಾರಿ. ತಂದೆಯವರು ಈ ಸಂದರ್ಭದಲ್ಲಿ ಗಳಿಸುವ ಶಾಲುಗಳೆಂದರೆ ಮಗಳು ಕವನಳಿಗೆ ಅಷ್ಟಕ್ಕಷ್ಟೆ. ಆದರೂ ಅವಳ ಮಕ್ಕಳಿಗೆ ತಾತಾನ ಶಾಲುಗಳಿಂದ ಬಗೆ ಬಗೆಯ ದಿರಸುಗಳನ್ನು ಹೊಲೆಸಿಕೊಳ್ಳುವ ಆಸೆ. ಪೊನ್ನಪ್ಪನವರ ಹೆಂಡತಿಯ ಹೆಸರು ಭುವನೇಶ್ವರಿಯಾದರೂ ಅವಳಿಗೆ ತನಗೆ, ಮನೆಗೆ ಬೇಕಾದ ಸಾಮಾನುಗಳನ್ನು ಕೊಳ್ಳುವಷ್ಟು ಹಣವಿಲ್ಲ. ಪತ್ರಿಕೆಗಳಲ್ಲಿ ತನ್ನ ಗಂಡನ ಫೋಟೋ, ಭಾಷಣಗಳ ವೈಖರಿ ಪ್ರಕಟವಾದಾಗ ಅಕ್ಕಪಕ್ಕದವರಿಗೆ ತೋರಿಸಿ ಜಂಭಪಟ್ಟರೂ ತಾನು ಅಂತಹ ಸಮಾರಂಭಗಳಿಗೆ ಹೋದರೆ ಪೊನ್ನಪ್ಪನಿಗೆ ಮಾತೇ ಹೊರಡುವುದಿಲ್ಲವೆನ್ನುವ ರಹಸ್ಯವನ್ನು ಬಲ್ಲವಳು. ತಮಿಳರೇ ಇರುವ ಶಾಲೆಯಲ್ಲಿ ಕನ್ನಡವನ್ನು ಪಾಠ ಹೇಳುವ ಪೊನ್ನಪ್ಪನವದ್ದು ದಯನೀಯವಾದ ಬದುಕೇ. ಎಂದಾದರೂ ಅವರಿಗೆ ರಾಜ್ಯೋತ್ಸವದ ಪ್ರಶಸ್ತಿ ಬಂದರೆ ತನಗೆ ಚಿನ್ನದ ಪದಕ ದೊರೆಯುವುದೆಂದು ಕಾಯುವುದೇ ಭುವನೇಶ್ವರಿಯ ಸದ್ಯದ ಪರಿಸ್ಥಿತಿ. ಸಮಯೋಚಿತವಾದ ಹೊಸಹೊಳಹಿನ ಕತೆಯ ಹಿಂದೆ ಪೊನ್ನಪ್ಪ ಮತ್ತು ಅವರ ಸಂಸಾರದ ಚಿತ್ರಣ, ಕಸಿವಿಸಿ, ವಿಷಾದ, ಅಸಹಾಯಕತೆ, ರಾಜ್ಯೋತ್ಸವದ ಪ್ರಶಸ್ತಿಯನ್ನು ಬೆನ್ನಟ್ಟುವವರ ಪಾಡು ಎಲ್ಲವೂ ಮೂಡಿದೆ. ಅಲ್ಲಲ್ಲಿ ವ್ಯಂಗ್ಯಭರಿತ ಹಾಸ್ಯವನ್ನೂ ಕಾಣಬಹುದು. ಒಳ್ಳೆಯ ಕತೆಯನ್ನು ನಿರೂಪಿಸಿರುವ ನಾಗರತ್ನರವರಿಗೆ ಅಭಿನಂದನೆಗಳು.

೦೯. ವಿಠ್ಠಲ್ ಇಜೇರಿ – 'ಧೂರ್ತ ಭಿಕ್ಷುಕ'

ವಿಠ್ಠಲ್ ಇಜೇರಿಯವರು ಸದಾ ಚೈತನ್ಯಭರಿತವಾಗಿ ಹಲವಾರು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ದಾಸೋಹ ವೇದಿಕೆಯಲ್ಲಿ ಇಜೇರಿಯವರ ಲೇಖನಗಳನ್ನು ಕಾಣುವುದು ನಿಶ್ಚಿತ. ಆಗಾಗ್ಗೆ ವೇದಿಕೆಯಲ್ಲಿ ಪ್ರಸ್ತುತಪಡಿಸುವ ವಿಭಿನ್ನ ವಿಷಯಗಳ ಲೇಖನಗಳು ಓದುಗರನ್ನು ಆಶ್ಚರ್ಯಚಕಿತರನ್ನಾಗಿಸುವುದರಲ್ಲಿ ಸಂದೇಹವೇ ಇಲ್ಲ. ಇಂದು ಅವರು ಓದಿರುವ ಲೇಖನ 'ಜಾನಪದ ಕತೆಗಳು'. ಹಲವಾರು ಭಾಷೆಗಳಲ್ಲಿ ಜಾನಪದ ಸಾಹಿತ್ಯದ ವಿವಿಧ ವಿಭಾಗಗಳನ್ನು ಕಾಣಬಹುದೆಂದು ಉಲ್ಲೇಖಿಸಿದ್ದಾರೆ. ಅಮೆರಿಕದಲ್ಲಿ ಆಚರಿಸುವ ಹಾಲೋವಿನ್ ಹಬ್ಬಕ್ಕೂ ಜಾನಪದ ತಳಹದಿ ಇದೆ ಎಂದು ಹೇಳುತ್ತಾ, 'ದೇಶ ವಿದೇಶಗಳ ಸ್ವಾರಸ್ಯಕರ ಕತೆಗಳು' ಪುಸ್ತಕದಲ್ಲಿರುವ 'ಧೂರ್ತ ಭಿಕ್ಷುಕ' ಕತೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ. ಜಾನಪದದವರೂ ಜಾಣ್ಮೆಯುಳ್ಳವರಾಗಿರುತ್ತಾರೆ ಎಂದು ಹೇಳುವ ಕತೆ ಇದಾಗಿದೆ. ಅಮಾಯಕ ಮುಗ್ಧ ಜನಗಳನ್ನು ವಂಚಕರು ಹೇಗೆ ತಮ್ಮ ಬಲೆಯೊಳಗೆ ಸೆಳೆದುಕೊಳ್ಳುತ್ತಾರೆ ಎಂದು ಸಾರುವ ಜಾನಪದ ಶೈಲಿಯ ಕತೆ ಇಂದಿಗೂ ಪ್ರಸ್ತುತವೇ ಆಗಿದೆ. ಚಿಕ್ಕದಾಗಿ ಚೊಕ್ಕವಾದ ಲೇಖನವನ್ನು ಪ್ರಸ್ತುತ ಪಡಿಸಿರುವ ಇಜೇರಿಯವರಿಗೆ ಅಭಿನಂದನೆಗಳು.

೧೦. ಸುಜಾತಾ ರವೀಶ್ – 'ವರ್ತನೆಯವರು'

ಕರೋನಾ ಕರಿಛಾಯೆ ಹಬ್ಬಿದಾಗ ಸಂಭವಿಸಿದ ಸಾವು ಸುಜಾತಾರವರನ್ನು ಬಾಲ್ಯದ ಕಾಲಕ್ಕೆ ಸೆಳೆದೊಯ್ಯುವ ಬರೆಹ 'ವರ್ತನೆಯವರು'. ಇವರು ಹೇಳುವಂತೆ ಮುಂಚಿನ ಕಾಲದಲ್ಲಿ ದಿನನಿತ್ಯ ಹಾಲು-ಮೊಸರುಗಳನ್ನು, ತರಕಾರಿ ಹಣ್ಣು-ಹೂವು ವೀಳ್ಯೆದೆಲೆ ಮುಂತಾದವುಗಳನ್ನು, ಅಂಗಡಿ ಸಾಮಾನುಗಳನ್ನು ಮನೆ ಬಾಗಿಲಿಗೆ ತಂದು ಕೊಡುವ ರೂಢಿ ಇದ್ದದ್ದು ನನಗೂ ನೆನಪಿದೆ. ನಮ್ಮ ಮನೆಗೆ ಮೊಸರು ತರುತ್ತಿದ್ದವಳು ಸುಮಾರು ೧೫೦ ಅಡಿ ದೂರವಿದ್ದ ಹಿತ್ತಲ ಬಾಗಿಲ ತನಕ ವಿವಿಧ

ರೀತಿಯ ಮೊಸರು ಮಜ್ಜಿಗೆಗಳನ್ನು ಬುಟ್ಟಿಯಲ್ಲಿ ಹೊತ್ತು ತಂದು ಮೊಸರು ಹಾಕಿ, ಮೊಸರಿನ ಲೆಕ್ಕವನ್ನು ಮರದ ಬಾಗಿಲ ಹಿಂದೆ ಸೀಮೇಸುಣ್ಣದಲ್ಲಿ 'ಬಟ್ಟು' ಹಾಕಿ ಹೋಗುತ್ತಿದ್ದಳು; ತಿಂಗಳಿಗೊಂದು ಬಾರಿ ಎಣಿಸಿ ಹಣ ಪಡೆಯುತ್ತಿದ್ದಳು. ಆ ಕಾಲ ಸತ್ಯಯುಗವೇ ಆಗಿತ್ತೇನೋ? ಸುಜಾತಾರವರು ಹೇಳಿರುವಂತೆ ಅವರ ತಾಯಿಯವರೊಬ್ಬರೇ ಅಲ್ಲ, ಬೇರೆ ಹಲವಾರು ಜನ ವರ್ತನೆಯವರಿಗೆ ಮುಂಗಡ ನೀಡುವುದು, ಇಲ್ಲವೇ ಅವರ ಹಣವನ್ನು ಮುಂಬರುವ ತಿಂಗಳಿನಲ್ಲಿ ಕೊಡುತ್ತಿದ್ದುದೂ ಸಾಮಾನ್ಯವೇ. ಮದುವೆ, ಗೃಹಪ್ರವೇಶಗಳಿಗೂ ಪರಸ್ಪರ ಆಹ್ವಾನವಿರುತ್ತಿತ್ತು. ವಿಶ್ವಾಸ, ಸ್ನೇಹ, ಸಹಾನುಭೂತಿ ಎಲ್ಲವೂ ಕಾಣುತ್ತಿದ್ದವು.. ಒಟ್ಟಿನಲ್ಲಿ ಇಂದಿನ 'ಆನ್ ಲೈನ್' ವ್ಯಾಪಾರದಲ್ಲಿರುವುದಕ್ಕಿಂತ ಮಾನವೀಯತೆ ಅಂದು ಎಷ್ಟೋ ಪಾಲು ಹೆಚ್ಚಿನ ಮಟ್ಟದಲ್ಲಿತ್ತು ಎನ್ನುವುದನ್ನು ಹೇಳುವ ಸುಜಾತರವರ ಬರೆಹವನ್ನು ಮೆಚ್ಚತಕ್ಕದ್ದೇ. ಒಂದು ಕಾಲದಲ್ಲಿ ಎಟಿಎಂ ಯಂತ್ರಗಳು ಮೊದಲಬಾರಿ ವಿದೇಶಗಳಲ್ಲಿ ಬಂದಾಗ ಗ್ರಾಹಕರಿಗೂ, ಬ್ಯಾಂಕಿನವರಿಗೂ ಸಂಪರ್ಕ ಕಡಿದುಹೋಯಿತೆಂದು ಪೇಚಾಡಿದವರ ನೆನಪಾಯ್ತು. ಒಳ್ಳೆಯ ಪದ್ಧತಿಯನ್ನು ನೆನಪು ಮಾಡಿದ ಸುಜಾತರವರಿಗೆ ಅಭಿನಂದನೆಗಳು.

೧೧. ಮಾನಸ ಕೆ.ಕೆ – 'ಕನ್ನಡ' (ಕವನ)

ಮಾನಸರವರ ಕವನ 'ಕನ್ನಡ' ಚಿಕ್ಕ-ಚೊಕ್ಕ ಕವನ. ಕನ್ನಡವನ್ನು ಅಪಾರ ಪ್ರೀತಿಸುವ ಕನ್ನಡ ಕವಿ ಕನ್ನಡವನ್ನು ಕನ್ನಡಿಗರ ಬುನಾದಿ ಎಂದು ಹೇಳುವುದು ಸಹಜವೇ. ಹಾಗೇ ಕನ್ನಡದ ಮಹತ್ವಗಳನ್ನು ಪಟ್ಟಿ ಮಾಡುತ್ತಲೇ ಮುಂದುವರಿದು ಕನ್ನಡವನ್ನು ವೈಭವೀಕರಿಸುತ್ತಾರೆ. ಉಸಿರು ಉಸಿರಲಿ ಬೆರೆಯಲಿ ಕನ್ನಡ ಎಂದು ಆಶಿಸುವ ಮಾನಸಾರವರು ರಾಜ್ಯೋತ್ಸವದ ಸಮಯದಲ್ಲಿ ತಕ್ಕ ಕವನವನ್ನು ವಾಚಿಸಿರುವುದಕ್ಕೆ ಅಭಿನಂದನೆಗಳು.

೧೨. ಟಿ.ಆರ್.ಉಷಾರಾಣಿ – 'ನಮ್ಮ ಭಾಷೆಯ ಉಳಿವು ನಮ್ಮ ಕೈಯ್ಯಲ್ಲಿದೆ'

ಅತ್ಯಂತ ಪ್ರಾಚೀನವಾದ ಕನ್ನಡ ಭಾಷೆಯನ್ನು ಉಳಿಸಬೇಕು ಎನ್ನುವ ಸಂದೇಶವನ್ನು ನೀಡುವ 'ನಮ್ಮ ಭಾಷೆಯ ಉಳಿವು ನಮ್ಮ ಕೈಯ್ಯಲ್ಲಿದೆ' ಲೇಖನವನ್ನು ಉಷಾರಾಣಿಯವರು ಪ್ರಸ್ತುತಪಡಿಸಿದ್ದಾರೆ. ಕನ್ನಡ ಭಾಷೆಯ ಸ್ಥಾನವನ್ನು, ಲಕ್ಷಣಗಳನ್ನು ಸೂಚ್ಯವಾಗಿ ನೀಡಿ ಅದು ಅತ್ಯಂತ ವೈಜ್ಞಾನಿಕ ಭಾಷೆ ಎಂದು ಹೆಮ್ಮೆ ಪಡುತ್ತಾರೆ. ಕನ್ನಡ ಭಾಷೆಯ ಪ್ರಾಂತ್ಯಾವಾರು ವೈವಿಧ್ಯತೆಗಳನ್ನೂ ಗುರುತಿಸಿದ್ದಾರೆ. ಕನ್ನಡ ಭಾಷೆಯನ್ನು ಬರೆಯುವಾಗ ಮಹಾಪ್ರಾಣ ಮತ್ತು ಅಲ್ಪಪ್ರಾಣಗಳಿಂದಾಗುವ ತ್ರಾಸವನ್ನೂ ಕಡೆಗಣಿಸಿಲ್ಲ. ಕನ್ನಡಿಗರ ಸಹೃದಯತೆಯಿಂದಲೇ ಇಂದು ಅನ್ಯಭಾಷಿಕರು ನಮ್ಮ ಭಾಷೆಯನ್ನು ಕಲಿಯಲು ನಿರಾಕರಿಸುವ ಮಟ್ಟಕ್ಕೆ ತಲುಪಿದ್ದಾರೆ ಎಂದು ಹಲುಬುತ್ತಾರೆ. ಹಲವು ಆಂಗ್ಲ ಪದಗಳು ಕನ್ನಡದಲ್ಲಿ ಸೇರಿದ್ದರೂ ಅದನ್ನು ಸೇರಿಸಿಕೊಂಡು ಕನ್ನಡವನ್ನು ಉಳಿಸುವ ಪ್ರಯತ್ನದಲ್ಲಿ ಎಲ್ಲರೂ ಭಾಗಿಯಾದರೆ ಮಾತ್ರ ಕನ್ನಡವನ್ನು ಉಳಿಸಬಹುದು ಎಂದು ಘಂಟಾಘೋಷವಾಗಿ ಹೇಳುವ ಉಷಾರಾಣಿಯವರನ್ನು ಅಭಿನಂದಿಸುತ್ತೇನೆ.

೧೩ . ಕೆ.ಆರ್.ವೆಂಕಟೇಶ್ (ಮನು) – 'ಕನ್ನಡ ಕಲಿಯುವುಕೆ – ಕಲಿಸುವಿಕೆ' (ಕವನ)

ಮನು ಅಥವಾ ಮನೋಹಂಸ ಎಂದೇ ಪರಿಚಯಿಸಿಕೊಳ್ಳುವ ಕೆ.ಆರ್. ವೆಂಕಟೇಶ್‌ರವರು ನಮ್ಮ ಸಮಾಜದಲ್ಲಿ ಭಾಷೆಯ ಪಾತ್ರವನ್ನು ಮೊದಲ ಭಾಗದಲ್ಲಿ ವಿವರಿಸುತ್ತಾರೆ. ಮಾತೃಭಾಷೆ, ವ್ಯಾವಹಾರಿಕ ಭಾಷೆ ಹಾಗೂ ಸ್ಥಳೀಯ ಭಾಷೆ ಎಲ್ಲವೂ ಒಂದೇ ಆಗಿದ್ದರೆ ಒಳ್ಳೆಯದು, ಹಾಗೊಂದು ವೇಳೆ ಅವು ಬೇರೆಬೇರೆ ಆಗಿದ್ದರೆ ಅವುಗಳನ್ನು ತಕ್ಕ ಮಟ್ಟಿಗೆ ಕಲಿಯುವುದು ಅನಿವಾರ್ಯ ಎಂದೂ ವಿಷದಪಡಿಸುತ್ತಾರೆ.

ಕನ್ನಡ ಶಿಕ್ಷಕಿಯೊಬ್ಬಳು ಶಾಲೆಯಲ್ಲಿ ಮಕ್ಕಳಿಗೆ ಕನ್ನಡ ಕಲಿಯಿರಿ ಎಂದು ಹೇಳುವ ಕವನ ಲೇಖನದ ಎರಡನೆಯ ಭಾಗದಲ್ಲಿದೆ. 'ಕನ್ನಡ ಕಲಿಯುವಿಕೆ – ಕಲಿಸುವಿಕೆ' ಎನ್ನುವ ಕವನದಲ್ಲಿ ಶಿಕ್ಷಕಿ ಕನ್ನಡದಲ್ಲಿ ಮಾತಾಡಿ ಎಂದು ಹಾಡಿದಾಗ, ಆ ಮಕ್ಕಳು ಒಕ್ಕೊರಲಿನಲ್ಲಿ ಇಂಗ್ಲೀಷ್‌ನಲ್ಲಿ 'ತಾವು ಇಂಗ್ಲಿಷ್ ಮೀಡಿಯಮ್' ನಲ್ಲಿರುವುದರಿಂದ ಅದು ಸಾಧ್ಯವಿಲ್ಲವೆಂದಾಗ ಅವರ ಅಸಾಹಯಕತೆ ಹಾಗೂ ಇಂದಿನ ಕನ್ನಡ ನಾಡಿನ ಸ್ಥಿತಿ ನಮಗೆ ವೇದ್ಯವಾಗುತ್ತದೆ. ಕನ್ನಡ ಶಿಕ್ಷಕಿ ಮನೆಗೆ ಹಾಗೂ ಶಾಲೆಗೂ ಭೇಟಿ ನೀಡಿ ಕನ್ನಡ ಮಾತಾಡಲು ಅವಕಾಶ ಮಾಡಿಕೊಡಿ ಎಂದು ಕೇಳುವುದಾಗಿ ಭರವಸೆ ನೀಡುತ್ತಾಳೆ. ಇಂತಹ

ಇನ್ನೆಷ್ಟು ಕನ್ನಡ ಶಿಕ್ಷಕಿಯರು/ಶಿಕ್ಷಕರು ಪಣತೊಟ್ಟರೆ ಈ ಆಸೆ ಕೈಗೂಡುವುದೇ? ಕಾದು ನೋಡಬೇಕು. ಚಿಂತನೆಗೆ ಕರೆದೊಯ್ಯುವ ಲೇಖನವನ್ನು ಮಂಡಿಸಿರುವ ವೆಂಕಟೇಶ್‌ರವರಿಗೆ ಅಭಿನಂದನೆಗಳು.

೧೪. ರಾಧಿಕಾ ಗುಜ್ಜರ್ – 'ಜೋಗತಿ'

ವಿನೂತನ ವಿಷಯವನ್ನು ವಿಭಿನ್ನವಾಗಿ ನಿರೂಪಿಸುವಲ್ಲಿ ರಾಧಿಕಾರವರಿಗೆ ಅವರೇ ಸಾಟಿ. ಅವರು ಇಂದು ಪ್ರಸ್ತುತಿಪಡಿಸಿದ 'ಜೋಗತಿ' ಕವನದ ಮೊದಲ ಸಾಲಿನಲ್ಲಿಯೇ 'ಸಂಸಾರದ ಗಂಧವಿರದ ತಾಮ್ರದ ಕೊಡ' ಎಂದು ಹೇಳುವ ಮೂಲಕ ಜೋಗತಿಯರು ಸಂಸಾರದ ಕಷ್ಟಸುಖಗಳಿಂದ ದೂರ ಎನ್ನುವ ಸೂಚನೆ ನೀಡುತ್ತಾರೆ. ಒಂದೊಂದು ಸಾಲೂ ಮಾರ್ಮಿಕವಾಗಿದೆ. ಮತ್ತೊಂದು ಸಾಲು 'ಮಂಗಳದ ಸೊನ್ನೆಯಳಿದು ಮಗಳಾಗೆನು' ಮಥಿಸಿದಾಗ ಮನ ಮಿಡಿಯುತ್ತದೆ. ಈ ಕವನವನ್ನು ಸಾವಧಾನವಾಗಿ ಓದಿದರೆ ಇಡೀ ಜೋಗತಿಯರ ಜೀವನ ಕಣ್ಮುಂದೆ ಬರುವುದಲ್ಲದೆ ಅವರ ದುಃಖ, ದುಮ್ಮಾನ, ಆವೇಶ, ಸಾಮಾಜಿಕ ಸ್ಥಿತಿ ಕೊನೆಗೆ ಆ ರೇಣುಕಾ ದೇವಿಗೆ 'ಉಧೋ ಉಧೋ' ಎಂದು ಜೈಕಾರ ಮಾಡುವ ಮನಸ್ಥಿತಿ ಎಲ್ಲವೂ ಮನಕಲಕಿ ಸ್ವಲ್ಪ ಕಾಲ ಆ ಬಗ್ಗೆ ಯೋಚಿಸುವಂತೆ ಮಾಡುವುದರಲ್ಲಿ ಸಂದೇಹವಿಲ್ಲ. ಚಿಂತನೆಗೆ ತಳ್ಳುವ ಕವನವನ್ನು ಓದುಗರಿಗೆ ನೀಡಿರುವ ರಾಧಿಕಾರವರಿಗೆ ಅಭಿನಂದನೆಗಳು.

೧೫. ಮಾಲತಿ ಶ್ರೀನಿವಾಸನ್ – 'ಮುಸ್ಸಂಜೆಯ ಮಿಡಿತ' ಮತ್ತು 'ಹಣೆಬರಹ' (ಎರಡು ಕವನಗಳು)

ಮಾಲತಿಯವರು ಗಾಯಕಿಯೂ ಹೌದು, ಕವಯಿತ್ರಿಯೂ ಹೌದು. ಇವರು ಇಂದು ನಮ್ಮ ಮುಂದೆ ವಾಚಿಸಿದ ಎರಡೂ ಕವನಗಳು ಸೊಗಸಾಗಿವೆ. ಕವನಗಳನ್ನು ಓದಿದವರಿಗೆ ಇವರು ಎಷ್ಟು ಸಲೀಸಾಗಿ ಪದಗಳನ್ನು ಜೋಡಿಸಿದ್ದಾರೆ ಎಂದು ಅನಿಸದಿರದು. ವಾರ್ಧಕ್ಯದಲ್ಲಿ ಮೂಡುವ ಆಲೋಚನೆಗಳ ಫಲ ಕವನ 'ಮುಸ್ಸಂಜೆಯ ಮಿಡಿತ'. ಮುಸ್ಸಂಜೆ ಪದ ಮುಪ್ಪನ್ನು ಬಿಂಬಿಸುತ್ತದೆ. ಮುಪ್ಪಿನ ಕಾಲದಲ್ಲಿ ಇರುವಷ್ಟನ್ನೇ ಅನುಭವಿಸಿದರೆ ಸಾಕು ಎನ್ನುವ ಭಾವ ಬರುವುದು ಸಹಜ. ಹೀಗೆ ಸಾಗುವ ಕವನ ಆ ದಿನಗಳಲ್ಲಿ ಒಮ್ಮಿಂದೊಮ್ಮೆಗೇ ಹೊರಡುವ ಅನೇಕ ಭಾವನೆಗಳನ್ನು ಪೋಣಿಸುತ್ತಾ ಹೋಗುತ್ತದೆ. ಇಷ್ಟೆಲ್ಲಾ ಸಾಗುತ್ತಿರುವಂತೆ ಕಾಲನ ಕರೆ ಬರುವುದನ್ನೇ ಕಾಯುತ್ತದೆ ಜೀವ.

ಮುಂದಿನ ಕವನ 'ಹಣೆಬರಹ'. ಈ ಕವನದಲ್ಲಿ ಹಣೆಬರಹ ಬರೆಯುವ ಬ್ರಹ್ಮನ ಜೊತೆಯೇ ಸಂಭಾಷಣೆ ಪ್ರಾರಂಭವಾಗುತ್ತದೆ. ಹಣೆಬರಹ ಬರೆಯುವ ಬ್ರಹ್ಮನಿಗೆ ಬರೆಯಲು ಸ್ಥಳಾವಕಾಶವಿಲ್ಲದೆ ಹೋದರೆ ಎಂತು ಬರೆಯುವೆ ಎಂದು ಪ್ರಶ್ನಿಸುವಾಗ ನಗು ಬಾರದಿರುವುದೇ? ಹಣೆಬರಹವನ್ನು ಬರೆಯುವ ಲೇಖನಿಯನ್ನು ನೋಡುವ ಆಸೆಯೂ ಸಂಭಾಷಣಕಾರನಿಗಿದೆ. ಅಂತೂ ಹಣೆಬರಹವನ್ನು ಬರೆಯುವ ಕಾಯಕ ಮಾಡಿವ ಬ್ರಹ್ಮನನ್ನು ನಿಧಾನವಾಗಿ ಕೆಲಸ ಮುಂದುವರಿಸು ಎಂದು ಹೇಳುವ ಸಂಭಾಷಣಕಾರ ತನಗೆ ಬ್ರಹ್ಮನ ಬರಹದಂತೆ ಮುಂದೆ ಸಾಗಲು ಶಕ್ತಿಯನ್ನು ನೀಡುವಂತೆ ಬೇಡುತ್ತಾನೆ. ಎರಡೂ ಕವನಗಳೂ ಮಾಲತಿಯವರ ಅನುಭವವನ್ನು ಹೊರಹೊಮ್ಮಿಸಿವೆ. ಒಳ್ಳೆಯ ಕವನಗಳಿಗಾಗಿ ಅವರಿಗೆ ಅಭಿನಂದನೆಗಳು.

೧೬. ಎಲ್. ಗಿರಿಜಾ ರಾಜ್ – 'ಯೆಂಡ್ಕುಡುಕ ರತ್ನ ಮತ್ತು ಕನ್ನಡ ಪ್ರೇಮ!'

ಬಹುವಿದ್ಯಾ ಪಾರಂಗತೆ ಗಿರಿಜಾರವರ ಆಯ್ಕೆ ವಿಶಿಷ್ಟವಾದ 'ಯೆಂಡ್ಕುಡುಕ ರತ್ನ ಮತ್ತು ಕನ್ನಡ ಪ್ರೇಮ!' ಈ ಲೇಖನವೂ ಸಮಯೋಚಿತ. ಶ್ರೀ ರಾಜರತ್ನಂರವರ ಹೆಸರು ಕೇಳದ ಕನ್ನಡಿಗರ್ಯಾರು. ಒಳ್ಳೆಯ ಸಂದೇಶಗಳನ್ನು ನೀಡಿರುವ ಹಲವು ಕವನಗಳ ಮಧ್ಯೆ ಕುಡುಕನೂ ಹಾಡಿರಬಹುದಾದ ಸಂದೇಶಭರಿತ ಕವನಗಳನ್ನು ಮತ್ಯಾರೂ ಕನ್ನಡದಲ್ಲಿ ರಚಿಸಿರಲಾರರು. ರತ್ನನ ಪದಗಳ ಲಕ್ಷಣಗಳನ್ನು ಒಂದು ಸಣ್ಣ ಲೇಖನದಲ್ಲಿ ಪರಿಚಯಿಸುವುದು ಒಂದು ಹನಿ ನೀರು ಕೊಟ್ಟು ಬಾಯಾರಿಕೆಯನ್ನು ತಣಿಸಿದಂತೆಯೇ. ರಾಜರತ್ನಂರವರು ಸಾಹಿತ್ಯದ ವ್ಯಾಖ್ಯಾನವನ್ನೇ ಬದಲಿಸಿ, ಯಾವ ಪಂಥಕ್ಕೂ ಸೇರದೆ, ಯಂಡ್ಕುಡಕನ ಬಾಯಿಂದ ಉದುರುವ ಪದಗಳನ್ನೇ ಬಳಸಿ ಕವನ ರಚಿಸಿರುವುದು 'ನ ಭೂತೋ ನ ಭವಿಷ್ಯತಿ' ಎಂದು ಹೇಳಬಹುದು. ನಾಡೋಜ ನಿಸಾರ್ ಅಹಮದ್‌ರವರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. 'ಬ್ರಹ್ಮ ನಿಂಗೆ ಜೋಡಿಸ್ತೀನಿ ಹೆಂಡ ಮುಟ್ಟಿದ ಕೈನ' ಎಂದು ಪಿ.ಕಾಳಿಂಗರಾವ್ ಹೇಳಿರುವ ಹಾಡು ನಮ್ಮ ಕಾಲದಲ್ಲಿ ಜನಪ್ರಿಯವಾದ ಕನ್ನಡ

ಗೀತೆಯಾಗಿತ್ತು. ಹೆಂಡಕುಡುಕ ರತ್ನನ ಬಾಯಿಯ ಮೂಲಕವೇ ರಾಜರತ್ನಂರವರು ಸಮಾಜದ ಅಂಕು-ಡೊಂಕುಗಳನ್ನೂ ಗುರುತಿಸುತ್ತಾರೆ. ರಾಜ್ಯೋತ್ಸವದ ಸಮಯದಲ್ಲಿ ಇಂತಹ ಉತ್ತಮ ವಿಷಯವನ್ನು ಆಯ್ಕೆ ಮಾಡಿಕೊಂಡು, "ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ, ಬಾಯ್ ಒಲಿಸಾಕಿದ್ರೂನು, ಮೂಗ್ನಲ್ ಕನ್ನಡ್ ಪದವಾಡ್ತೀನಿ' ಎಂದು ಕನ್ನಡ ಭಾಷೆಯನ್ನು ಅತಿಯಾಗಿ ಪ್ರೀತಿಸುತ್ತಿದ್ದ ರಾಜರತ್ನಂರವರನ್ನು ನೆನಪು ಮಾಡಿದ್ದಕ್ಕೆ ಗಿರಿಜಾರವರಿಗೆ ಅಭಿನಂದನೆಗಳು.

೧೭. ಮಾಧುರಿ ಕೃಷ್ಣ – 'ಮ್ಯಾಡ್ ಮ್ಯಾಡ್ ಮ್ಯೂಸಿಕ್ ವರ್ಲ್ಡ್'

ಮಾಧುರಿ ಕೃಷ್ಣರವರು ನುರಿತ ಬರಹಗಾರ್ತಿ. ಅವರ 'ಟ್ರಯಲ್ ಆಂಡ್ ಎರರ್ಸ್' ಅಂದರೆ 'ಯತ್ನ–ವಿಫಲತೆ' ಲೇಖನ ಮಾಲೆಯ ೯ನೇ ಭಾಗದ ಲೇಖನವಾದ 'ಮ್ಯಾಡ್ ಮ್ಯಾಡ್ ಮ್ಯೂಸಿಕ್ ವರ್ಲ್ಡ್' ದಾಸೋಹದಲ್ಲಿ ಪ್ರಸ್ತುತಪಡಿಸಿದ್ದಾರೆ. ಇಲ್ಲಿನ ಮತ್ತೊಂದು ಮುಖ್ಯ ಪಾತ್ರ ಅವರ ಸೋದರಳಿಯ. ಅಂದರೆ ಇವರ ಅಣ್ಣನ ಮಗ. ಅವನಿಗೊಂದು ಹೆಣ್ಣು ಹುಡುಕುವ ಭರಾಟೆಯಲ್ಲಿರುವ ಮಾಧುರಿಯವರಿಗೆ ಒಂದು ಮಧ್ಯಾಹ್ನ ಸೋದರಳಿಯ ಎಲ್ಲಿಗೋ ಕರೆದೊಯ್ಯಲು ಅವಸರಿಸಿದಾಗ ಎಲ್ಲಿಗೆಂದು ತಿಳಿಯದೆ ಕಸಿವಿಸಿಗೊಳ್ಳುತ್ತಾರೆ. ಮಲಗುವ ತಯ್ಯಾರಿಯಲ್ಲಿದ್ದ ಪತಿರಾಯರು ಸೋದರಳಿಯನಿಗೆ ಯಾವುದೋ ಹೆಣ್ಣು ಕಂಡಿರಬಹುದೆಂದು ಹೇಳಿದಾಗ ಬಹಳ ಕುತೂಹಲದಿಂದ ಹೊರಡುತ್ತಾರೆ. ಸೀದಾ ರವೀಂದ್ರ ಕಲಾಕ್ಷೇತ್ರಕ್ಕೆ ಕರೆದೊಯ್ದು, ಮೊದಲ ಸಾಲಿನಲ್ಲಿ ಕುಳ್ಳರಿಸಿದ ಸೋದರಳಿಯ ವೇದಿಕೆ ಏರಿ ಮಾಯವಾಗುತ್ತಾನೆ. ಕೆಲವೇ ಕ್ಷಣಗಳಲ್ಲಿ ತನ್ನ ಶರ್ಟ್ ಕಳಚಿ, ಗಿಟಾರ್ ತಗುಲಿಸಿ, ಜನಪ್ರಿಯ ಇಂಗ್ಲಿಷ್ ಹಾಡನ್ನು ಹೇಳುತ್ತಾ, ಧನುರ್ವಾತ ಬಂದವನಂತೆ ಮೈ ಕುಣಿಸುತ್ತಾ ವೇದಿಕೆಯಲ್ಲಿ ಹಾಡುವಾಗ ಮಾಧುರಿ ಅರ್ಥಾತ್ ಸೋದರತ್ತೆ ಮತ್ತೊಮ್ಮೆ ಪ್ರಯತ್ನ ವಿಫಲವಾಯಿತೆಂದು ನಿರಾಶರಾಗುತ್ತಾರೆ. ಮದುವೆ ನಿಶ್ಚಯವಾದಾಗ ವೇದಿಕೆಯ ಸದಸ್ಯರನ್ನು ಆಹ್ವಾನಿಸಲು ಮರೆಯದಿರಿ ಎಂದು ಹೇಳುತ್ತಾ ಅವರನ್ನು ಅಭಿನಂದಿಸುತ್ತೇನೆ.

೧೮. ವೆಂಕಟೇಶ್ ಕಾಮತ್ – 'ನನ್ನಪ್ಪನ ಸೆಂಟಿನರಿ'

ವೆಂಕಟೇಶ ಕಾಮತ್‌ರವರು ಪ್ರಸ್ತುತಿಪಡಿಸಿರುವ 'ನನ್ನಪ್ಪನ ಸೆಂಟಿನೆರಿ' ಬರೆಹ ಓದುಗರನ್ನು ಭಾವುಕರನ್ನಾಗಿಸುತ್ತದೆ. ಬದುಕಿರುವ ಅಪ್ಪ-ಅಮ್ಮಂದಿರನ್ನು ಗೌರವಿಸುವುದಕ್ಕೂ ಹಿಂದುಮುಂದು ನೋಡುವ ಈಗಿನ ಪೀಳಿಗೆಯವರಿಗೆ ಸ್ವಲ್ಪ ಕಸಿವಿಸಿಯಾದರೂ ಆಶ್ಚರ್ಯವಿಲ್ಲ. ಅವರೇ ಹೇಳಿರುವಂತೆ ಇವರ ತಂದೆಯವರು ಹುಟ್ಟಿದ ದಿನವೇ ಪ್ರಖ್ಯಾತರು ಜನಿಸಿದ್ದಾರೆ ಮತ್ತೊಂದಿಷ್ಟು ಜನ ಸಾವಿಗೀಡಾಗಿದ್ದಾರೆ. ಆದರೆ ಇವರ ಅಪ್ಪ ಇವರಿಗೆ ಮಹಾತ್ಮರು. ಅಕ್ಟೋಬರ್ ೩೧, ೧೯೮೪ ರಲ್ಲಿ ನಿವೃತ್ತರಾದ ಇವರ ಅಪ್ಪನ ನಿವೃತ್ತಿ ಸಮಾರಂಭ ಮೊಟಕುಗೊಂಡಾಗ ಇವರ ತಂದೆಯವರು "ನೋಡಿ, ನನ್ನ ನಿವೃತ್ತಿಯ ದಿನವನ್ನು ನಮ್ಮ ಇಡೀ ಭಾರತ ದೇಶ ಬಾವುಟಗಳನ್ನು ಇಳಿಸಿ, ರಜೆ ಘೋಷಿಸಿ, ಶೋಕದಿನವಾಗಿ ಆಚರಿಸುತ್ತಿದೆ" ಎಂದು ನುಡಿದಿರುವುದು ಮಾರ್ಮಿಕವಾಗಿದೆ.

ತಂದೆ ಮಗನ ಬಾಂಧವ್ಯದ ಹಲವು ನೆನಪುಗಳನ್ನು ಹಂಚಿಕೊಂಡಿದ್ದಾರೆ. ಅವರ ತಂದೆ ಈಗ ಈ ಲೋಕದಲ್ಲಿ ಇಲ್ಲದಿದ್ದರೂ ಅವರ ನೂರನೆಯ ಹುಟ್ಟುಹಬ್ಬವನ್ನು ನೆನಪು ಮಾಡಿಕೊಳ್ಳುತ್ತಿರುವ ಸಹೃದಯಿ ವೆಂಕಟೇಶ್‌ರವರಿಗೆ 'ನೆನಪು ಕಹಿಯಲ್ಲ; ನೆನಪುಗಳು ನಮ್ಮನ್ನು ಕೈಹಿಡಿದು ನಡೆಸುವ ದೀಪಗಳು' ಎಂದು ಹೇಳುತ್ತಾ ತಮ್ಮ ನೆನಪುಗಳನ್ನು ಹಂಚಿಕೊಂಡಿರುವುದಕ್ಕಾಗಿ ಅಭಿನಂದಿಸುತ್ತೇನೆ.

೧೯. ಜಿ.ವಿ.ಅರುಣ – 'ಕನ್ನಡದ ಕಂಪನ್ನು ಪ್ರಸರಿಸುತ...'

ಅರುಣರವರು ಇಂದಿನ ಲೇಖನದಲ್ಲಿ ಬೆಂಗಳೂರಿನ ಎಲೀಟಾ ಪ್ರೋಮಿನೇಡ್ ವಸತಿ ಸಮುಚ್ಚಯದ 'ಸಂಕಲ್ಪ' ಸಮಿತಿಯು ಆಚರಿಸಿದ ರಾಜ್ಯೋತ್ಸವದಲ್ಲಿ ಇವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿದಾಗ ಗಮನಿಸಿದ ವಿಷಯಗಳನ್ನು ಹಂಚಿಕೊಂಡಿದ್ದಾರೆ. ದೀಪಾವಳಿಯ ಹಬ್ಬದ ನಡುವೆ; ಸಾಲು ಸಾಲು ರಜೆಗಳಿರುವಾಗಲೂ ಸುಮಾರು ೨೦೦ ಸದಸ್ಯರು ಭಾಗವಹಿಸಿರುವುದು ಕನ್ನಡಿಗರು ಖುಷಿಪಡುವ ವಿಷಯ. ಹೆಂಗಳೆಯರು ಉತ್ಸಾಹದಿಂದ ಕನ್ನಡ ಹಾಡುಗಳನ್ನು ಹಾಡಿ ಸಭಿಕರನ್ನು ರಂಜಿಸಿದರಂತೆ. ಸಮಿತಿಯವರು ರಸಪ್ರಶ್ನೆ ಮೊದಲಾದ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿದ್ದರಂತೆ. ಇಂತಹ

ಚಟುವಟಿಕೆಗಳು ಸ್ಥಳೀಯ ಪ್ರತಿಭೆಗಳಿಗೂ ಅವಕಾಶ ನೀಡುತ್ತವೆ ಮತ್ತು ಕನ್ನಡದ ಪರಿಮಳವನ್ನು ಅಧಿಕಗೊಳಿಸುತ್ತವೆ. ಮತ್ತಷ್ಟು ಚಟುವಟಿಕೆಗಳನ್ನೂ ಪಟ್ಟಿ ಮಾಡಿದ್ದಾರೆ. ಇವರ ಹೇಳಿಕೆಯಂತೆ ಸೌಹಾರ್ದಯುತವಾಗಿ ಒಟ್ಟುಗೂಡಿದರೆ ನಮ್ಮ ದೇಶ ಮುಂದುವರಿಯುತ್ತದೆ. ನಮ್ಮ ಸೋದರ ಸಂಬಂಧಿಯೊಬ್ಬರು ತಮ್ಮ ವಸತಿ ಸಮುಚ್ಛಯದಲ್ಲಿ ಹಲವಾರು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲಸಿ ಕನ್ನಡಿಗರೇ ಆಗಿರುವ ಹಿರಿಯ ತಮಿಳು ದಂಪತಿಗಳನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಿದ್ದರೆಂದು ಹೇಳಿದ್ದು ನೆನಪಾಯಿತು. ಕನ್ನಡ ನೆಲದ ತಮಿಳು ಭಾಷಿಕರು ಕನ್ನಡಕ್ಕೆ ಅಪಾರ ಕೊಡುಗೆಯನ್ನು ನೀಡಿರುವುದನ್ನು ನಾವು ಮರೆಯುವಂತೆಯೇ ಇಲ್ಲ. ಭಾಷೆಗಳ ಬಗ್ಗೆ ಹಲವು ಸಮಸ್ಯೆಗಳು ಹುಟ್ಟಿಕೊಂಡಿರುವ ಈ ಸಮಯದಲ್ಲಿ ಅರುಣರವರ ಲೇಖನ ಸಕಾಲಿಕವಾಗಿದೆ. ಅವರಿಗೆ ನನ್ನ ಅಭಿನಂದನೆಗಳು.

೨೦. ಕೆ.ಎನ್. ಭಗವಾನ್ – 'ಜಯಮಂಗಲಿ ಮೈತುಂಬಿ ಕರೆದಾಗ'

ಇವರು ಪ್ರಸ್ತುತಪಡಿಸಿದ ಲೇಖನ 'ಜಯಮಂಗಲಿ ಮೈತುಂಬಿ ಕರೆದಾಗ'. ಜಯಮಂಗಲಿ ನದಿಯ ಉಗಮ ಸ್ಥಾನ ದೇವರಾಯನ ದುರ್ಗ. ಸುವರ್ಣಮುಖಿ ಕೊರಟಕೆರೆ ಸಮೀಪದಲ್ಲಿರುವ ನದಿ. ಭಗವಾನ್‌ರವರು ಬಾಲ್ಯದಲ್ಲಿ ಈ ನದಿಗಳ ಒಡನಾಟದಲ್ಲಿದ್ದವರು. ಅನಂತರ ಬೆಂಗಳೂರಿಗೆ ಬಂದು ೬೦ ವರ್ಷಗಳೇ ಆಗಿವೆ. ಇತ್ತೀಚೆಗೆ ಮನೆಯವರೊಟ್ಟಿಗೆ ಸೂರ್ಯಾಸ್ತಮದ ಸಮಯದಲ್ಲಿ ಜಯಮಂಗಲಿ ನದಿಯ ಸೇತುವೆಗೆ ಹೋಗಿದ್ದನ್ನು ನೆನಪು ಮಾಡಿಕೊಂಡಿದ್ದಾರೆ. ವಿಜಯದಶಮಿ ಉತ್ಸವವನ್ನೂ ನೋಡಿ ಆನಂದಿಸಿದ್ದಾರೆ. ಅಲ್ಲಿಯ ಶ್ಯಾನುಭೋಗರಾಗಿದ್ದ ಇವರ ಕುಟುಂಬದವರಿಗೆ ಪ್ರಾಮುಖ್ಯ. ಇವರಿಗೆ ಹೂವಿನ ಹಾರ ಹಾಕಿ ಗೌರವಿಸಿದರಂತೆ. ಬಾಲ್ಯದ ನೆನಪುಗಳನ್ನು ಹಂಚಿಕೊಂಡು ಸಂಭ್ರಮಿಸಿದ ಭಗವಾನ್‌ರವರಿಗೆ ಅಭಿನಂದನೆಗಳು.

೨೧. ಕೆ.ಎನ್.ಮಹಾಬಲ – 'ಚಲನಚಿತ್ರ ಗೀತೆಗಳಲ್ಲಿ ನಾಡು ನುಡಿಯ ಅಭಿವ್ಯಕ್ತಿ'

ರಾಜ್ಯೋತ್ಸವದ ವಿಷಯವನ್ನೇ ಆಯ್ದುಕೊಂಡಿರುವ ಮಹಾಬಲರವರು ಸಿನಿಮಾ ರಂಗದಲ್ಲಿ ಕನ್ನಡ ಗೀತೆಗಳನ್ನು ಬಳಸಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಒಮ್ಮೆ ವಾದ್ಯಗೋಷ್ಠಿಯವರೊಬ್ಬರು ಕನ್ನಡ ಗೀತೆಗಳನ್ನು ಅಭ್ಯಾಸ ಮಾಡಲು ಸಮಯಾವಕಾಶ ವಿಲ್ಲದುದರಿಂದ ಚಿತ್ರಗೀತೆಗಳನ್ನೇ ಹಾಡುತ್ತೇವೆ ಎಂದಾಗ ಸಭಿಕರಲ್ಲಿ ಮಿಶ್ರ ಪ್ರತಿಕ್ರಿಯೆ ಬಂತೆಂದು ಪ್ರಾರಂಭವಾಗುವ ಲೇಖನದಲ್ಲಿ ಚಿತ್ರಗೀತೆಗಳಲ್ಲಿಯೂ ಕನ್ನಡ ನಾಡನ್ನು ಬಣ್ಣಿಸುವ, ಕನ್ನಡ ನುಡಿಯ ಹಿರಿಮೆಯನ್ನು ಹಿಗ್ಗಿಸುವ ಅನೇಕ ಗೀತೆಗಳಿವೆಯೆಂದು ಸಾಬೀತು ಮಾಡಿದ್ದಾರೆ. ಸಾಹಿತ್ಯ ಸರಸ್ವತಿ ಚಿತ್ರಗೀತೆ, ಕನ್ನಡ ಗೀತೆಗಳಲ್ಲಿ ಯಾವ ಭೇದಭಾವವನ್ನೂ ತೋರುವುದಿಲ್ಲವೆಂದು ಹೇಳುತ್ತಾ, ಅನೇಕ ಸಾಹಿತಿಗಳು ಎರಡು ರಂಗಗಳಿಗೂ ಕೊಡುಗೆ ನೀಡಿರುವುದನ್ನು ಸ್ಮರಿಸಿದ್ದಾರೆ. ಹಲವು ಬಾರಿ ಕನ್ನಡ ಗೀತೆಗಳನ್ನು ಚಿತ್ರದಲ್ಲಿ ಅಳವಡಿಸಿದಾಗಲೇ ಜನಪ್ರಿಯವಾಗಿರುವುದನ್ನೂ ಗುರುತಿಸಿದ್ದಾರೆ. ಈ ದಿಶೆಯಲ್ಲಿ ಬೇಂದ್ರೆಯವರ 'ಮೂಡಲ ಮನೆಯ ಮುತ್ತಿನ ನೀರಿನ', ಅಡಿಗರ 'ಯಾವ ಮೋಹನ ಮುರಳಿ ಕರೆಯಿತೋ', ಕುವೆಂಪುರವರ 'ಸೊಬಗಿನ ಸೆರೆಮನೆಯಾಗಿಹೆ ನೀನು ಚೆಲುವೆ ಸರಸತಿಯೇ' ಮುಂತಾದ ಗೀತೆಗಳನ್ನೂ ನೆನೆಯಬಹುದು. ಕನ್ನಡ ನಾಡು, ನುಡಿಗಳನ್ನು ವರ್ಣಿಸುವ ಅನೇಕ ಚಿತ್ರಗೀತೆಗಳನ್ನೂ ಮರೆಯುವಂತಿಲ್ಲ. ಮಹಾಬಲರವರು ತಮ್ಮ ನೆನಪಿನಿಂದಲೋ ಅಥವಾ ಯಾವುದಾದರೂ ಮೂಲದಿಂದಲೋ ಹಲವಾರು ಚಿತ್ರಗೀತೆಗಳನ್ನು ಉಲ್ಲೇಖಿಸಿರುವುದು ಶ್ಲಾಘನೀಯ. ಓದುಗರೂ ತಮ್ಮ ನೆನಪಿನಿಂದ ಮತ್ತಷ್ಟು ಗೀತೆಗಳು ಅತ್ತಿಂದಿತ್ತ, ಇತ್ತಿಂದತ್ತ ಹಾರಿರುವುದನ್ನು ಗುನಗಬಹುದು. ಉತ್ತಮ ಸಕಾಲಿಕ ಲೇಖನಕ್ಕೆ ಮಹಾಬಲರವರಿಗೆ ಅಭಿನಂದನೆಗಳು.

೨೨. ಟಿ.ಎಸ್.ಶ್ರವಣಕುಮಾರಿ – 'ಮಾದೇಸನ ಟರ್ನಿಂಗ್ ಪಾಯಿಂಟು'

ಶ್ರವಣ ಕುಮಾರಿಯವರು ಕತೆಗಾರ್ತಿಯಾಗಿ ವಿಶಿಷ್ಟ ಸ್ಥಾನ ಗಳಿಸಿದ್ದಾರೆ. ಕತೆಗೆ ವಸ್ತುವನ್ನು ಆಯ್ಕೆ ಮಾಡುವಲ್ಲಿ ಕೂಡ ಸಿದ್ಧಹಸ್ತರು. ಅವರು ಇಂದು ಪ್ರಸ್ತುತಪಡಿಸಿರುವ ಕತೆ 'ಮಾದೇಸನ ಟರ್ನಿಂಗ್ ಪಾಯಿಂಟು' ಶೀರ್ಷಿಕೆಯಲ್ಲಿಯೇ 'ಟರ್ನಿಂಗ್ ಪಾಯಿಂಟು' ಇರುವುದೆನ್ನುವ ಸುಳಿವು ನೀಡುತ್ತದೆ. ಕತೆಯಲ್ಲಿ ಟರ್ನಿಂಗ್ ಪಾಯಿಂಟ್ ಬಂದೇ ಬರುವುದೆಂದು ಓದುಗರು ನಿಶ್ಚಿಂತರಾಗಬಹುದು. ಆದು ಹೇಗೆ, ಯಾವಾಗ ಬರುತ್ತದೆ ಎನ್ನುವುದೇ ಕುತೂಹಲದ ಅಂಶ. ತನ್ನ ಮನೆಯವರೆಲ್ಲಾ ಕೈಬಿಟ್ಟ ಮೇಲೆ, ಹಲವರು ಕಣ್ಣೂ ಮುಚ್ಚಿದ ಮೇಲೆ 'ಪಾಯಿಂಟ'ನ್ನು ಸಾಕಾರಗೊಳಿಸಲು ಅವಳ ಕೈ ಹಿಡಿದಾಕೆ ಮಾಲ್ಷಕ್ಕಿಯ ಛಲವೇ

ಕಾರಣವಾಗುತ್ತದೆ. ಕೈ ಹಿಡಿದ ತಪ್ಪಿಗೆ ಸಂಸಾರವನ್ನು ತಿದ್ದುವ ಕೆಲಸಕ್ಕೆ ಮುಂದಾದ ಆಕೆಯ ಮಾತಿಗೆ ಮೊದಮೊದಲು ಬಗ್ಗದ ಮಾದೇಸ ಕೊನೆಯಲ್ಲಿ ಸಂಸಾರದ ನೊಗ ಹೊರಲು ಜಾಲಿಸೌಟು ಹಿಡಿಯುತ್ತಾನೆ. ಇದು ನಿಜಕ್ಕೂ 'ಟರ್ನಿಂಗ್' ಪಾಯಂಟೇ. ಇಂತಹ ಸಂಸಾರಗಳು ಕೆಳವರ್ಗದ ಸಮಾಜದಲ್ಲಿ ಸರ್ವೇಸಾಮಾನ್ಯ. ಅಂತಹ ಒಂದು ಸಂಸಾರದ ಕಥೆಯನ್ನು ಶ್ರವಣ ಕುಮಾರಿಯವರು ಹಂತ ಹಂತವಾಗಿ ಆ ಜನರ ಭಾಷೆಯಲ್ಲಿಯೇ ನಿರೂಪಿಸಿದ್ದಾರೆ. ಶ್ರವಣ ಕುಮಾರಿಯವರಿಗೆ ಅಭಿನಂದನೆಗಳು.

ಹೀಗೆ ನನಗೆ ತೋರಿದಂತೆ ಇಂದಿನ ಪ್ರಸ್ತುತಿಗಳನ್ನು ವಿಶ್ಲೇಷಿಸಿದ್ದೇನೆ. ಪ್ರಸ್ತುತಿಕಾರರು ಇದನ್ನು ಗಂಭಿರವಾಗಿ ಪರಿಗಣಿಸುವ ಅಗತ್ಯವಿಲ್ಲ. ನಾನು ಹೆಚ್ಚು ಸಮಯವನ್ನು ತೆಗೆದುಕೊಂಡಿರುವುದಕ್ಕೆ ಕ್ಷಮೆ ಇರಲಿ. ಸಾವಧಾನವಾಗಿ ನನ್ನ ಮಾತುಗಳನ್ನು ಆಲಿಸಿದ್ದಕ್ಕಾಗಿ ಎಲ್ಲರಿಗೂ ವಂದನೆಗಳು. ನಮಸ್ಕಾರ.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

**ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ,
1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com**

**ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com**

**ಸಾಹಿತ್ಯ ದಾಸೋಹ 231 ನಡೆದ ದಿನಾಂಕ: 09 ನವೆಂಬರ್ 2024
ಸಂಚಿಕೆಯ ಬಿಡುಗಡೆ ದಿನಾಂಕ: 11 ಜನವರಿ 2025 – ಶನಿವಾರ**

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)